# ಅಧ್ಯಾಯ–೦೮

# ಆರ್ಥಿಕ ಪ್ರವೃತ್ತಿಗಳು

ಯಾವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ವಾಣಿಜ್ಯ–ವ್ಯಾಪಾರ, ಸಾರಿಗೆ–ಸಂಪರ್ಕ, ಉಳಿತಾಯ ಕ್ಷಮತೆ, ಬಂಡವಾಳ ಹೂಡಿಕೆ, ನಗರೀಕರಣ, ಉದ್ಯೋಗ, ಕೂಲಿ (ಮಜೂರಿ), ತಲಾದಾಯ, ಅಗತ್ಯ ವಸ್ತುಗಳ ಬೆಲೆ (ದರ), ಜನರ ಜೀವನಮಟ್ಟ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಕಂಡುಬರುವ ಏರಿಳಿತಗಳನ್ನು ಆಧರಿಸಿದ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ನಿರ್ದೇಶಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪೂರಕವಾದ ಮೂಲಭೂತ ಸೌಕರ್ಯ, ತಂತ್ರಜ್ಞಾನಗಳೇ ಮುಂತಾದ ಅಂಶಗಳು ಆರ್ಥಿಕ ಪ್ರವೃತ್ತಿಯ ದಿಕ್ಕು–ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ನೆರವಾಗುತ್ತವೆ. ಹೀಗೆ ಸಮಾಜದ ಬದಲಾವಣೆ ಮತ್ತು ಸುಧಾರಣೆಗಳಿಗೆ ಮಾರ್ಗಸೂಚಿಗಳಾಗಬಹುದಾದ ಆರ್ಥಿಕ ಪ್ರವೃತ್ತಿಗಳು ಚಾಮರಾಜನಗರ ಜಿಲ್ಲೆಯು ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ವಹಿಸಿರುವ ಪಾತ್ರವನ್ನು ಇಲ್ಲಿ ಬಿಂಬಿಸಲು ಯತ್ನಿಸಲಾಗಿದೆ.

ಬಹು ಹಿಂದಿನಿಂದಲೂ ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯು ಸಂಪದ್ಭರಿತ ಅರಣ್ಯ ಪ್ರದೇಶವನ್ನೂ ಹೊಂದಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೫,೧೦೧ ಚ.ಕಿ.ಮೀ.ಗಳಾಗಿದ್ದು, ಇದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ. ೨.೬೯ರಷ್ಟಾಗಿದ್ದು, ೧೯ನೇ ಸ್ಥಾನ ಪಡೆದುಕೊಂಡಿದೆ. ಜಿಲ್ಲೆಯ ಹೆಚ್ಚಿನ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೯,೬೫,೪೬೨ (ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. ೧.೮೨೬ರಷ್ಟು) ಲಕ್ಷ ಜನರಿದ್ದು, ಇವರಲ್ಲಿ ೮,೧೭,೩೭೨ (ಶೇ. ೮೪.೬)ಲಕ್ಷ ಜನರು ಗ್ರಾಮಾಂತರ ಪ್ರದೇಶಗಳಲ್ಲಿಯೂ, ಕೇವಲ ೧,೪೮,೯೮೦ (ಶೇ.೧೫.೪) ಲಕ್ಷ ಜನರು ನಗರ ಪ್ರದೇಶಳಲ್ಲಿಯೂ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ಶೇ. ೫೧.೨೬ (ರಾಜ್ಯದ ಶೇ. ೬೭.೦೪) ಆಗಿತ್ತು. ಪುರುಷರ ಸಾಕ್ಷರತೆ ಶೇ.೫೯.೨೫ (ಶೇ.೭೬.೨೯)ಆಗಿದ್ದು, ಮಹಿಳೆಯರು ಶೇ. ೪೩.೦೨ (ಶೇ. ೫೭.೪೫) ಸಾಕ್ಷರತೆಯನ್ನು ಪಡೆದುಕೊಂಡಿದ್ದರು. ಆವರಣದಲ್ಲಿ ನೀಡಿರುವ ಅಂಕಿಅಂಶಗಳು ರಾಜ್ಯದ ಸಾಕ್ಷರತೆಯ

ಪ್ರಮಾಣವನ್ನು ಬಿಂಬಿಸುತ್ತವೆ. ಜಿಲ್ಲೆಯಲ್ಲಿ ಮುಖ್ಯ ಕೆಲಸಗಾರರ ಪ್ರಮಾಣ ಶೇ. ೩೪.೯, ಸೀಮಾಂತ (ಮಾರ್ಜಿನಲ್) ಕೆಲಸಗಾರರ ಪ್ರಮಾಣ ಶೇ. ೧೧.೫, ಕೆಲಸಗಾರರಲ್ಲದವರ ಪ್ರಮಾಣ ಶೇ. ೫೩.೬ರಷ್ಟಿತ್ತು. ಒಟ್ಟು ಕೆಲಸಗಾರರಲ್ಲಿ ಶೇ. ೨೭.೭ರಷ್ಟು ಮಂದಿ ವ್ಯವಸಾಯಗಾರರಾಗಿಯೂ, ಶೇ. ೪೩ರಷ್ಟು ಮಂದಿ ವ್ಯವಸಾಯ ಕಾರ್ಮಿಕರಾಗಿಯೂ, ಶೇ. ೪.೪ರಷ್ಟು ಮಂದಿ ಗೃಹ ಕೈಗಾರಿಕೆಗಳಲ್ಲಿಯೂ ಹಾಗೂ ಶೇ. ೨೪.೯ರಷ್ಟು ಮಂದಿ ಇತರೆ ಕೆಲಸಗಾರರಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚ್ ಅಂತ್ಯಕ್ಕೆ ಐದು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ಹೂಡಿರುವ ಬಂಡವಾಳ ₹೨೧,೯೬೬.೫೨ ಲಕ್ಷಗಳಾಗಿದ್ದು, ೩೪೦ ಮಂದಿಗೆ ಉದ್ಯೋಗ ಕಲ್ಪಿಸಿವೆ. ಹಾಗೆಯೇ ೮,೬೭೯ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ₹ ೧೦,೨೮೫.೪೯ ಲಕ್ಷಗಳ ಬಂಡವಾಳ ತೊಡಗಿಸಿದ್ದು, ೩೭,೬೪೧ ಮಂದಿಗೆ ಉದ್ಯೋಗ ಒದಗಿಸಿದ್ದವು. ಹಲವಾರು ವೈಶಿಷ್ಟ್ಯಗಳಿಗೆ ಹೆಸರಾಗಿರುವ ಚಾಮರಾಜನಗರ ಜಿಲ್ಲೆಯು ಕ್ಯಾತೇದೇವರ ಗುಡಿ ಅರಣ್ಯಧಾಮ, ಬಂಡೀಪುರ ಅಭಯಾರಣ್ಯ, ಹೊಗೇನಕಲ್ ಜಲಪಾತ ಹಾಗೂ ಭರಚುಕ್ಕಿ (ಕೊಳ್ಳೇಗಾಲ ತಾ.) ಜಲಪಾತಗಳನ್ನು ಹೊಂದಿದೆ. ಅಲ್ಲದೆ ಮಹದೇಶ್ವರನ ಬೆಟ್ಟ, ಬಿಳಿಗಿರಿರಂಗನಬೆಟ್ಟ ಮುಂತಾದವು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಮತ್ತು ಸಾಮಾಜಿಕ ಏಳಿಗೆಗೆ ಹೊಸ ಆಯಾಮವನ್ನೇ ಉಂಟು ಮಾಡಿವೆ. ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ೪೨೪ ಜನವಸತಿ ಇರುವ ಗ್ರಾಮಗಳು, ೮೫ ಜನವಸತಿ ಇಲ್ಲದಿರುವ ಗ್ರಾಮಗಳು ಹಾಗೂ ೫೫೪ ಉಪಗ್ರಾಮಗಳಿದ್ದವು. ೩೧-೦೩-೨೦೧೦ ಅಂತ್ಯಕ್ಕೆ ೨೭೭ ಉಪಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿತ್ತು.

ಬ್ಯಾಂಕಿಂಗ್, ವಾಣಿಜ್ಯ, ವ್ಯಾಪಾರ, ರಂಗಗಳಲ್ಲಿಯೂ ಜಿಲ್ಲೆಯು ಪ್ರಗತಿ ಪಥದಲ್ಲಿದೆ. ಜಿಲ್ಲೆಯಲ್ಲಿ ೨೦೦೯-೧೦ರ ಅಂತ್ಯಕ್ಕೆ ೪೫ ವಾಣಿಜ್ಯ ಬ್ಯಾಂಕುಗಳು, ೨೨ ಗ್ರಾಮೀಣ ಬ್ಯಾಂಕುಗಳು, ಎಂಟು ಸಹಕಾರಿ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ₹ ೮೧,೭೧೩.೨೪ ಲಕ್ಷಗಳ ಠೇವಣಿ ಹೊಂದಿದ್ದವು. ಒಟ್ಟು ₹ ೭೭,೬೪೫.೧೩ ಲಕ್ಷಗಳ ಸಾಲ ನೀಡಿ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಸಹಕರಿಸಿದ್ದವು. ಜಿಲ್ಲೆಯಲ್ಲಿ ಕೇವಲ ಒಂದು ನಗರ ಪ್ರದೇಶದ ಸಹಕಾರಿ ಬ್ಯಾಂಕು ಚಾಮರಾಜನಗರದಲ್ಲಿದ್ದು, ₹ ೬೬೭.೧೬ ಲಕ್ಷ ಠೇವಣಿ ಸಂಗ್ರಹಿಸಿ ₹ ೩೪೯.೭೬ ಲಕ್ಷಗಳ ಸಾಲ ನೀಡಿತ್ತು. ಅಲ್ಲದೆ ನಾಲ್ಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿದ್ದು, ₹ ೧೧೫.೯೬ ಲಕ್ಷಗಳ ಸಾಲ ನೀಡಿದ್ದವು. ೮೨ ವ್ಯವಸಾಯ ಕ್ರೆಡಿಟ್ ಸಹಕಾರ ಸಂಘಗಳು, ೪೮೭ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಇತರೆ ೨೦೧ ಸಹಕಾರ ಸಂಘಗಳು ಹೀಗೆ ಒಟ್ಟು ೭೯೧ ಕ್ರೆಡಿಟ್ ಸಹಕಾರ ಸಂಘಗಳು ಜಿಲ್ಲೆಯ ಆರ್ಥಿಕ ಬದುಕಿಗೆ ನವಚೇತನವನ್ನು ನೀಡಿವೆ. ಸಾಂಪ್ರದಾಯಿಕ ವ್ಯಾಪಾರ ಕೇಂದ್ರಗಳಾದ ಸಂತೆಗಳೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎ.ಪಿ.ಎಂ.ಸಿ.) ಆವರಣಗಳು ರೈತರಿಗೆ ಉತ್ತಮ ಬೆಲೆ ದೊರಕಿಸುವಲ್ಲಿ ನೆರವಾಗುತ್ತಿವೆ. ಜಿಲ್ಲೆಯಲ್ಲಿ ೨೦೦೯-೧೦ರಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯು ಉತ್ತಮವಾಗಿದ್ದು, ೧೮೭ ಕಿ.ಮೀ. ರಾಷ್ಟ್ರೀಯ ಹೆದ್ದಾರಿ, ೩೪೯.೨೬ ಕಿ.ಮೀ. ರಾಜ್ಯ ಹೆದ್ದಾರಿ, ೯೯೪ ಕಿ.ಮೀ. ಮುಖ್ಯ ಜಿಲ್ಲಾ ರಸ್ತೆಗಳು, ೨೧೧೬.೮೩ಕಿ.ಮೀ. ಹಳ್ಳಿ ರಸ್ತೆಗಳು, ೨೩೬.೭೧ ಕಿ.ಮೀ. ಮುನಿಸಿಪಾಲಿಟಿ ರಸ್ತೆಗಳು, ೨೯೦ ಕಿ.ಮೀ. ನೀರಾವರಿ ಇಲಾಖೆ ರಸ್ತೆಗಳು ಹಾಗೂ ೪೮೬.೭೯ ಕಿ.ಮೀ. ಅರಣ್ಯ ರಸ್ತೆಗಳಿದ್ದವು. ಜಿಲ್ಲೆಯಲ್ಲಿ ೧೪೮೫.೭೨ ಕಿ.ಮೀ ಉದ್ದದ ಪಕ್ಕಾರಸ್ತೆಗಳು, ಆರು ಭಾರಿ ಸೇತುವೆಗಳಿದ್ದವು. ೨೦೩ ಅಂಚೆ ಕಛೇರಿಗಳು,

೪೪ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೧೧,೨೭೪ ದೂರವಾಣಿಗಳು ಜಿಲ್ಲೆಯಲ್ಲಿ ಉತ್ತಮ ಸಂಪರ್ಕ ಸಾಧನಗಳಾಗಿದ್ದವು.

ಜಿಲ್ಲೆಯ ಆದಾಯಕ್ಕೆ ಪ್ರಾಥಮಿಕ ವಲಯ (ಕೃಷಿ)ಕ್ಕಿಂತಲೂ ದ್ವಿತೀಯ ವಲಯ (ಕೈಗಾರಿಕೆಗಳು) ಹಾಗೂ ತೃತೀಯ ವಲಯ (ಸೇವಾ ಕ್ಷೇತ್ರಗಳು)ಗಳಿಂದ ಹೆಚ್ಚಿನ ಆದಾಯ ಸಂದಾಯವಾಗುತ್ತಿದ್ದು, ಇದೂ ಸಹ ಮಹತ್ವದ ಅಂಶವಾಗಿದೆ. ಆದರೆ, ಜಿಲ್ಲೆಯ ತಲಾದಾಯ ಹೊರ ನೋಟಕ್ಕೆ ಹೆಚ್ಚಳವಾಗಿ ಕಂಡುಬಂದರೂ, ರಾಜ್ಯಮಟ್ಟದಲ್ಲಿ ಜಿಲ್ಲೆಯು ೨೪ನೇ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಮಾರ್ಚ್ ೨೦೦೮ರ ಅಂತ್ಯಕ್ಕೆ ೨೬,೦೮೬ ಮಂದಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿಕೊಂಡಿದ್ದ ಅಂಶ ತಿಳಿದು ಬರುತ್ತದೆ. ಈ ಸಂಖ್ಯೆ ೨೦೧೧–೧೨ರಲ್ಲಿ ೩೦,೭೫೫ ದಾಟಿದೆ. ಉದ್ಯೋಗ ನೀಡುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಯತ್ನಿಸಿದ್ದರೂ, ನಿರುದ್ಯೋಗ ಸ್ಥಿತಿ ಉದ್ಭವಿಸಿದೆ.

ಜನರ ಜೀವನಮಟ್ಟವನ್ನು ಸುಧಾರಿಸಲು ಬಡತನ ನಿವಾರಣೆಗಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ, ಇಂದಿರಾ ಆವಾಸ್ ಯೋಜನೆ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ, ಆಶ್ರಯ (ಗ್ರಾಮೀಣ) ಯೋಜನೆ, ಅಂಬೇಡ್ಕರ್ (ಗ್ರಾಮೀಣ) ಯೋಜನೆ, ಸ್ವಚ್ಛ ಗ್ರಾಮ ಯೋಜನೆ, ನಿರ್ಮಲ ಗ್ರಾಮ ಯೋಜನೆ, ಸುವರ್ಣ ಗ್ರಾಮ ಯೋಜನೆ, ಮುಂತಾದ ಹತ್ತು ಹಲವು ಯೋಜಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ತತ್ಪರಿಣಾಮವಾಗಿ ಜಿಲ್ಲೆಯು ಇಂದು ಅಭಿವೃದ್ಧಿಶೀಲ ಜಿಲ್ಲೆಯಾಗಿ ರೂಪುಗೊಳ್ಳುತ್ತಿದೆ.

## ನಗರೀಕರಣ

ಚಾಮರಾಜನಗರ ಜಿಲ್ಲೆಯ ನಗರ/ಪಟ್ಟಣ ಪ್ರದೇಶಗಳ ಜನಸಂಖ್ಯೆಯಲ್ಲಿ ೧೮೭೧ ರಿಂದ ೧೯೦೧ರ ಅವಧಿಯಲ್ಲಿ ಅಂತಹ ತೀವ್ರ ಬೆಳವಣಿಗೆ ಕಂಡುಬಂದಿಲ್ಲ. ಈ ಮೂವತ್ತು ವರ್ಷಗಳ ಅವಧಿಯಲ್ಲಿ ಗುಂಡ್ಲುಪೇಟೆ ಹೊರತುಪಡಿಸಿ ಉಳಿದ ಪಟ್ಟಣಗಳಲ್ಲಿ ವಾರ್ಷಿಕ ಶೇಕಡ ಒಂದಕ್ಕಿಂತ ಕಡಿಮೆ ಜನಸಂಖ್ಯಾ ಬೆಳವಣಿಗೆ ಪ್ರಮಾಣ ಇತ್ತು. ಆದರೆ ಗುಂಡ್ಲುಪೇಟೆಯಲ್ಲಿ ವಾರ್ಷಿಕ ಶೇ. ೨.೧೮ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿತ್ತು. ಮೇಲಿನ ಅವಧಿಯಲ್ಲಿ ಚಾಮರಾಜನಗರ ಶೇ. ೨೨.೧೮ರಷ್ಟು, ಗುಂಡ್ಲುಪೇಟೆಯಲ್ಲಿ ಶೇ. ೬೩.೧ ಹಾಗೂ ಯಳಂದೂರಿನಲ್ಲಿ ಶೇ. ೨೧.೫ ರಷ್ಟು ಜನಸಂಖ್ಯೆ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ೧೮೮೧ರಲ್ಲಿ ಕೊಳ್ಳೇಗಾಲ ಪಟ್ಟಣದಲ್ಲಿ ೮,೪೬೨ ಜನಸಂಖ್ಯೆಯನ್ನು ಹೊಂದಿತ್ತು. ಇದು ೧೮೯೧ರಲ್ಲಿ ೯೯೪೬ ಜನಸಂಖ್ಯೆಯನ್ನು ಹೊಂದಿದ್ದು, ೧೮೭೧ರಿಂದ ೧೮೯೧ರ ಅವಧಿಯಲ್ಲಿ ೧೪೮೪ ಜನಸಂಖ್ಯೆಯು ಹೆಚ್ಚಳಗೊಂಡಿತ್ತು. ಈ ಅವಧಿಯಲ್ಲಿ ಶೇ. ೧೭.೫೪ರಷ್ಟು ಹೆಚ್ಚಳಗೊಂಡಿತ್ತು.

ಚಾಮರಾಜನಗರ ಜಿಲ್ಲೆಯಲ್ಲಿ ೧೯೦೧ ರಿಂದ ೨೦೦೧ರ ವರೆಗೂ ವರ್ಗ–Iಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ಅಲ್ಲದೆ ೧೯೦೧ ರಿಂದ ೧೯೯೧ರ ವರೆಗೂ ವರ್ಗ–IIಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ಆದರೆ ೨೦೦೧ರಲ್ಲಿ ಈ ವರ್ಗಕ್ಕೆ ಸೇರಿದ ಎರಡು ಪಟ್ಟಣಗಳಿದ್ದು, (ಚಾಮರಾಜನಗರ ಹಾಗೂ ಕೊಳ್ಳೇಗಾಲ) ಚಾಮರಾಜನಗರ ೬೦,೫೫೮ ಜನಸಂಖ್ಯೆ ಹಾಗೂ ಕೊಳ್ಳೇಗಾಲ ೫೨,೬೦೭ ಜನಸಂಖ್ಯೆ ಪಡೆದಿದ್ದವು. ಈ ವರ್ಗಕ್ಕೆ ಪಟ್ಟಣಗಳು ಸೇರಬೇಕಾದರೆ ೫೦,೦೦೦ ದಿಂದ ೯೯,೯೯೯ ಜನಸಂಖ್ಯೆ ಹೊಂದಿರಬೇಕು. ವರ್ಗ–IIIರ ಪಟ್ಟಣವೆನಿಸಬೇಕಾದರೆ, ೨೦,೦೦೦ ದಿಂದ ೪೯,೯೯೯ ಜನಸಂಖ್ಯೆ ಹೊಂದಿರಬೇಕು. ೧೯೦೧ ರಿಂದ ೧೯೪೧ರ ವರೆಗೂ ಈ ವರ್ಗಕ್ಕೆ ಸೇರಿದ ಯಾವುದೇ ಪಟ್ಟಣಗಳಿರಲಿಲ್ಲ. ೧೯೫೧ ರಿಂದ ೧೯೯೧ರ ವರೆಗೂ ಚಾಮರಾಜನಗರ ಈ ವರ್ಗದಲ್ಲಿದ್ದು, ಕ್ರಮವಾಗಿ ೨೨,೩೭೮, ೨೪,೪೩೦, ೩೧,೦೬೯, ೪೦,೪೨೨ ಹಾಗೂ ೪೪,೪೭೮ ಜನಸಂಖ್ಯೆ ಹೊಂದಿತ್ತು. ಕೊಳ್ಳೇಗಾಲ ಪಟ್ಟಣವು ೧೯೬೧ ರಿಂದ ೧೯೯೧ರ ವರೆವಿಗೂ ಈ ವರ್ಗದಲ್ಲಿದ್ದು, ಕ್ರಮವಾಗಿ ೨೨,೬೬೩, ೨೮,೭೦೬, ೩೬,೧೯೯ ಹಾಗೂ ೪೨,೩೯೧ ಜನಸಂಖ್ಯೆ ಹೊಂದಿತ್ತು. ಕೊಳ್ಳೇಗಾಲ ಪಟ್ಟಣವು ೧೯೦೧ ರಿಂದ ೧೯೫೧ರ ವರೆಗೂ ವರ್ಗ–IVಕ್ಕೆ ಸೇರಿದ್ದು, ಕ್ರಮವಾಗಿ ೧೩,೭೨೯, ೧೨,೫೬೬, ೧೩,೨೬೬, ೧೩,೮೪೯, ೧೫,೧೦೧ ಹಾಗೂ ೧೮,೯೮೦ ಜನಸಂಖ್ಯೆ ಹೊಂದಿತ್ತು. ಚಾಮರಾಜನಗರವು ೧೯೨೧ರಿಂದ ೧೯೪೧ರವರೆವಿಗೂ ಈ ವರ್ಗಕ್ಕೆ ಸೇರಿದ್ದು, ಕ್ರಮವಾಗಿ ೧೧,೬೮೨, ೧೪,೫೨೮ ಹಾಗೂ ೧೫,೪೮೪ ಜನಸಂಖ್ಯೆಯನ್ನು ಹೊಂದಿತ್ತು. ಗುಂಡ್ಲುಪೇಟೆ ೧೯೬೧ರಿಂದ ೧೯೮೧ರ ವರೆವಿಗೂ ಈ ವರ್ಗದಲ್ಲಿದ್ದು, ಕ್ರಮವಾಗಿ ೧೧,೭೩೨, ೧೪,೭೪೨ ಹಾಗೂ ೧೯,೯೬೫ ಜನಸಂಖ್ಯೆ ಹೊಂದಿತ್ತು. ವರ್ಗ–IV ಕ್ಕೆ ಸೇರಬೇಕಾದರೆ ೧೦,೦೦೦ದಿಂದ ೧೯,೯೯೯ ಜನಸಂಖ್ಯೆ ಹೊಂದಿರಬೇಕಾಗಿರುತ್ತದೆ. ವರ್ಗ–Vಕ್ಕೆ ಸೇರಿದ ಪಟ್ಟಣವು ೫,೦೦೦ದಿಂದ ೯,೯೯೯ ಜನಸಂಖ್ಯೆಯನ್ನು ಹೊಂದಿರಬೇಕು. ಚಾಮರಾಜನಗರ ಪಟ್ಟಣವು ೧೯೦೧ ರಿಂದ ೧೯೧೧ರವರೆಗೂ ಈ ವರ್ಗದಲ್ಲಿದ್ದು, ಕ್ರಮವಾಗಿ ೫,೯೭೩ ಹಾಗೂ ೬,೫೫೬ ಜನಸಂಖ್ಯೆ ಹೊಂದಿತ್ತು. ಗುಂಡ್ಲುಪೇಟೆ ೧೯೩೧ರಿಂದ ೧೯೬೧ರ ವರೆಗೂ ಈ ವರ್ಗದ ಪಟ್ಟಣವಾಗಿದ್ದು, ಕ್ರಮವಾಗಿ ೫,೭೪೯, ೬,೨೩೭, ೮,೮೫೭ ಹಾಗೂ ೧೧,೭೩೨ ಜನಸಂಖ್ಯೆ ಪಡೆದಿತ್ತು. ಯಳಂದೂರು ೧೯೭೧ ರಿಂದ ೨೦೦೧ರ ವರೆವಿಗೂ ವರ್ಗ–Vರ ಪಟ್ಟಣವಾಗಿದ್ದು, ಕ್ರಮವಾಗಿ ೫,೧೩೨, ೬,೭೧೦, ೭,೬೭೮ ಹಾಗೂ ೮,೫೮೫ ಜನಸಂಖ್ಯೆಯನ್ನು ಹೊಂದಿ ವರ್ಗದಲ್ಲಿಯೇ ಮುಂದುವರಿದಿದೆ. ಯಳಂದೂರು ೧೯೦೧ರಲ್ಲಿ ೩,೮೦೩ ಜನಸಂಖ್ಯೆ ಹೊಂದಿ ವರ್ಗ–VIರಲ್ಲಿದ್ದರೆ, ೧೯೧೧ ಹಾಗೂ ೧೯೨೧ರಲ್ಲಿ ಮರು ವರ್ಗೀಕರಣದಲ್ಲಿ ಪಟ್ಟಣದ ಅಸ್ತಿತ್ವವನ್ನು ಕಳೆದುಕೊಂಡಿತ್ತು. ಆದರೆ ಯಳಂದೂರು ೧೯೩೧ರಿಂದ ೧೯೬೧ರ ವರೆಗೂ ವರ್ಗ–VIರಲ್ಲೇ ಮುಂದುವರೆದಿದ್ದು, ಕ್ರಮವಾಗಿ ೩,೪೫೩, ೩,೬೩೭, ೪,೦೫೬ ಹಾಗೂ ೪,೫೭೫ ಜನಸಂಖ್ಯೆಯನ್ನು ಹೊಂದಿತ್ತು. ಈ ವರ್ಗದ ಪಟ್ಟಣವು ೫,೦೦೦ ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುತ್ತದೆ. ಕೋಷ್ಟಕ ೮.೧ರಲ್ಲಿ ೧೯೦೧ ರಿಂದ ೨೦೦೧ರ ವರೆಗಿನ ಪಟ್ಟಣಗಳು ಹಾಗೂ ಅವುಗಳ ಜನಸಂಖ್ಯೆಯನ್ನು, ಕೋಷ್ಟಕ ೮.೨ರಲ್ಲಿ  ಒಟ್ಟು ಜನಸಂಖ್ಯೆಯಲ್ಲಿ ಪಟಣ್ಣದ ಕೆಲಸಗಾರರ ಸಂಖ್ಯೆಯನ್ನು ಹಾಗೂ ಕೋಷ್ಟಕ ೮.೩ರಲ್ಲಿ ತಾಲೂಕುವಾರು ಒಟ್ಟು ಜನಸಂಖ್ಯೆಯಲ್ಲಿ ಶೇಕಡವಾರು ನಗರ ಜನಸಂಖ್ಯೆಯನ್ನು ನೀಡಲಾಗಿದೆ.

**ಕೋಷ್ಟಕ ೮.೧: ಜಿಲ್ಲೆಯಲ್ಲಿ ೧೯೦೧ ರಿಂದ ೨೦೦೧ರ ವರೆಗಿನ ಪಟ್ಟಣಗಳ ವರ್ಗೀಕರಣ ಹಾಗೂ ಅವುಗಳ ಜನಸಂಖ್ಯೆಯ ವಿವರ**

| ವರ್ಷ | ಚಾಮರಾಜನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು |
|---|---|---|---|---|
| ೧೯೦೧ | ೫,೯೭೩ | ೪,೦೬೫ | ೧೩,೭೨೯ | ೩,೮೦೩ |
| | V | VI | IV | VI |
| ೧೯೧೧ | ೬,೫೫೬ | ೪,೧೮೭ | ೧೨,೫೬೬ | – |
| | V | VI | IV | Declassified |
| ೧೯೨೧ | ೧೧,೬೮೨ | ೪,೫೯೪ | ೧೩,೨೬೬ | – |
| | IV | VI | IV | - |
| ೧೯೩೧ | ೧೪,೫೨೮ | ೫,೭೫೯ | ೧೩,೮೪೯ | ೩,೪೫೩ |
| | IV | V | IV | VI |
| ೧೯೪೧ | ೧೫,೪೮೪ | ೬,೨೩೭ | ೧೫,೧೦೧ | ೩,೬೩೭ |
| | IV | V | IV | VI |
| ೧೯೫೧ | ೨೨,೩೭೮ | ೮,೮೫೭ | ೧೮,೯೮೦ | ೪,೦೫೬ |
| | III | V | IV | VI |
| ೧೯೬೧ | ೨೪,೪೩೦ | ೧೧,೭೩೨ | ೨೨,೬೬೩ | ೪,೫೭೮ |
| | III | IV | III | VI |
| ೧೯೭೧ | ೩೧,೦೬೯ | ೧೪,೭೪೨ | ೨೮,೭೦೬ | ೫,೧೩೨ |
| | III | IV | III | V |
| ೧೯೮೧ | ೪೦,೪೨೨ | ೧೯,೯೬೫ | ೩೬,೧೦೯ | ೬,೭೧೦ |
| | III | IV | III | V |
| ೧೯೯೧ | ೪೪,೪೭೮ | ೨೩,೯೩೪ | ೪೨,೩೯೧ | ೭,೬೭೮ |
| | III | III | III | V |
| ೨೦೦೧ | ೬೦,೫೫೮ | ೨೬,೩೪೦ | ೫೨,೬೦೭ | ೮,೫೮೫ |
| | II | III | II | V |

**ಜನಸಂಖ್ಯೆಯ ಆಧಾರದ ಮೇಲೆ ಪಟ್ಟಣಗಳ ವರ್ಗೀಕರಣ**

| ೧೯೯೧ ಮತ್ತು ಅದಕ್ಕೂ ಮೊದಲು ಪಟ್ಟಣಗಳ ವರ್ಗೀಕರಣ | | ೨೦೦೧ ರಲ್ಲಿ ಪಟ್ಟಣಗಳ ವರ್ಗೀಕರಣ | | |
|---|---|---|---|---|
| **ವರ್ಗ–I** | ೧,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು | ವರ್ಗ–I | ಅ) ಎಂ.೬ | ೫೦,೦೦,೦೦೦ ಮತ್ತು ಅದಕ್ಕಿಂತ ಹೆಚ್ಚು |
| | | | ಆ) ಎಂ.೫ | ೨೦,೦೦,೦೦೦ ರಿಂದ ೪೯,೯೯,೯೯೯ |
| | | | ಇ) ಎಂ.೪ | ೧೦,೦೦,೦೦೦ ರಿಂದ ೧೯,೯೯,೯೯೯ |
| | | | ಈ) ಎಂ.೪ | ೫,೦೦,೦೦೦ ರಿಂದ ೯,೯೯,೯೯೯ |
| | | | ಉ) ಎಂ.೩ | ೩,೦೦,೦೦೦ ರಿಂದ ೪,೯೯,೯೯೯ |
| | | | ಊ) ಎಂ.೨ | ೨,೦೦,೦೦೦ ರಿಂದ ೨,೯೯,೯೯೯ |
| | | | ಋ) ಎಂ.೧ | ೧,೦೦,೦೦೦ ರಿಂದ ೧,೯೯,೯೯೯ |
| **ವರ್ಗ–II** | ೫೦,೦೦೦ ರಿಂದ ೯೯,೯೯೯ | ವರ್ಗ– II | | ೫೦,೦೦೦ ರಿಂದ ೯೯,೯೯೯ |
| **ವರ್ಗ–III** | ೨೦,೦೦೦ ರಿಂದ ೪೯,೯೯೯ | ವರ್ಗ–III | | ೨೦,೦೦೦ ರಿಂದ ೪೯,೯೯೯ |
| **ವರ್ಗ–IV** | ೧೦,೦೦೦ ರಿಂದ ೧೯,೯೯೯ | ವರ್ಗ–IV | | ೧೦,೦೦೦ ರಿಂದ ೧೯,೯೯೯ |
| **ವರ್ಗ–V** | ೫,೦೦೦ ರಿಂದ ೯,೯೯೯ | ವರ್ಗ–V | | ೫,೦೦೦ ರಿಂದ ೯,೯೯೯ |
| **ವರ್ಗ–VI** | ೫,೦೦೦ ಕ್ಕಿಂತ ಕಡಿಮೆ | ವರ್ಗ–VI | | ೫,೦೦೦ ಕ್ಕಿಂತ ಕಡಿಮೆ |

**ಕೋಷ್ಟಕ ೮.೨ ೨೦೦೧ರ ಜನಗಣತಿಯಂತೆ ಜಿಲ್ಲೆಯ ನಗರ/ಪಟ್ಟಣ ಪ್ರದೇಶಗಳಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿನ ಕೆಲಸಗಾರರ ಸಂಖ್ಯೆ**

| | ಪರ್ವರ್ಗ | ಚಾಮರಾಜನಗರ ತಾ॥ | | | ಯಳಂದೂರು ತಾ॥ | | | ಕೊಳ್ಳೇಗಾಲ ತಾ॥ | | | ಗುಂಡ್ಲುಪೇಟೆ ತಾ॥ | | | ಚಾಮರಾಜನಗರ ಜಿಲ್ಲೆ | | |
|---|---|---|---|---|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ೧. | ಒಟ್ಟು ಜನಸಂಖ್ಯೆ | ೩೦,೬೩೨ | ೨೯,೯೨೬ | ೬೦,೫೫೮ | ೪,೩೯೬ | ೪,೧೮೯ | ೮,೫೮೫ | ೨೬,೭೧೫ | ೨೫,೮೯೨ | ೫೨,೬೦೭ | ೧೩,೪೧೪ | ೧೨,೯೨೬ | ೨೬,೩೪೦ | ೭೫,೧೫೭ | ೭೨,೯೩೩ | ೧,೪೮,೦೯೦ |
| ೨. | ಒಟ್ಟು ಕೆಲಸಗಾರರು | ೧೭,೨೮೨ | ೫,೬೩೨ | ೨೨,೯೧೪ | ೨,೩೩೨ | ೬೩೬ | ೨,೯೬೮ | ೧೪,೫೪೭ | ೪,೫೨೮ | ೧೯,೦೭೫ | ೭,೬೨೪ | ೨,೬೧೧ | ೧೦,೨೩೫ | ೪೧,೭೮೫ | ೧೩,೪೦೭ | ೫೫,೧೯೨ |
| ೩. | ಮುಖ್ಯ ಕೆಲಸಗಾರರು | ೧೫,೪೦೬ | ೪,೨೦೯ | ೧೯,೬೧೫ | ೧,೫೨೨ | ೨೯೨ | ೧,೮೧೪ | ೧೩,೧೧೮ | ೩,೩೨೮ | ೧೬,೪೪೬ | ೭,೧೭೦ | ೨,೧೦೯ | ೯,೨೭೯ | ೩೭,೨೧೬ | ೯,೯೩೮ | ೪೭,೧೫೪ |
| i | ವ್ಯವಸಾಯಗಾರರು | ೧,೦೮೩ | ೭೭ | ೧,೧೬೦ | ೧೨೧ | ೦೩ | ೧೨೪ | ೬೬೫ | ೫೭ | ೭೨೨ | ೫೦೯ | ೩೮ | ೫೪೭ | ೨,೩೭೮ | ೧೭೫ | ೨,೫೫೩ |
| ii | ಕೃಷಿ ಕಾರ್ಮಿಕರರು | ೧,೮೦೧ | ೬೧೭ | ೨,೪೧೮ | ೫೩ | ೦೯ | ೬೨ | ೮೩೯ | ೩೮೨ | ೧,೨೨೧ | ೩೩೨ | ೧೮೩ | ೫೧೫ | ೩,೦೨೫ | ೧,೧೯೧ | ೪,೨೧೬ |
| iii | ಗೃಹಕೈಗಾರಿಕಾ ಕೆಲಸಗಾರರು | ೫೩೩ | ೧,೦೦೫ | ೧,೫೩೮ | ೧೨೭ | ೮೨ | ೨೦೯ | ೫೭೩ | ೩೯೨ | ೯೬೫ | ೧,೦೬೩ | ೧,೧೯೪ | ೨,೨೫೭ | ೨,೨೯೬ | ೨,೬೭೩ | ೪,೯೬೯ |
| iv | ಇತರೆ ಕೆಲಸಗಾರರು | ೧೧,೯೮೯ | ೨,೫೧೦ | ೧೪,೪೯೯ | ೧,೨೨೭ | ೧೯೮ | ೧,೪೧೯ | ೧೧,೦೪೧ | ೨,೪೯೭ | ೧೩,೫೩೮ | ೫,೨೬೬ | ೬೯೪ | ೫,೯೬೦ | ೨೯,೫೧೭ | ೫,೮೯೯ | ೩೫,೪೧೬ |
| ೪. | ಸೀಮಾಂತ (ಮಾರ್ಜಿನಲ್) ಕೆಲಸಗಾರರು | ೧,೮೭೬ | ೧,೪೨೩ | ೩,೨೯೯ | ೮೧೦ | ೩೪೪ | ೧,೧೫೪ | ೧,೪೨೯ | ೧,೨೦೦ | ೨,೬೨೯ | ೪೫೪ | ೫೦೨ | ೯೫೬ | ೪,೫೬೯ | ೩,೪೬೯ | ೮,೦೩೮ |
| i | ವ್ಯವಸಾಯಗಾರರು | ೧೪ | ೧೦ | ೨೪ | ೨೧ | ೦೯ | ೩೦ | ೧೫ | ೧೮ | ೩೩ | ೦೭ | ೦೭ | ೧೪ | ೫೭ | ೪೪ | ೧೦೧ |
| ii | ಕೃಷಿ ಕಾರ್ಮಿಕರು | ೨೯೨ | ೩೪೭ | ೬೩೯ | ೩೪೬ | ೧೫೪ | ೫೦೦ | ೩೯೯ | ೪೫೦ | ೮೪೯ | ೬೪ | ೧೨೭ | ೧೯೧ | ೧,೧೦೧ | ೧,೦೭೮ | ೨,೧೭೯ |
| iii | ಗೃಹಕೈಗಾರಿಕಾ ಕೆಲಸಗಾರರು | ೧೯೩ | ೫೫೩ | ೭೪೬ | ೪೩ | ೯೭ | ೧೪೦ | ೪೮ | ೨೭೦ | ೩೧೮ | ೪೫ | ೨೪೬ | ೨೯೧ | ೩೨೯ | ೧,೧೬೬ | ೧,೪೯೫ |
| iv | ಇತರೆ ಕೆಲಸಗಾರರು | ೧,೩೭೭ | ೫೧೩ | ೧,೮೯೦ | ೪೦೦ | ೮೪ | ೪೮೪ | ೯೬೭ | ೪೬೨ | ೧,೪೨೯ | ೩೩೮ | ೧೨೨ | ೪೬೦ | ೩,೦೮೨ | ೧,೧೮೧ | ೪,೨೬೩ |
| ೫. | ಕೆಲಸಗಾರರಲ್ಲದವರು | ೧೩,೩೫೦ | ೨೪,೨೯೪ | ೩೭,೬೪೪ | ೨,೦೬೪ | ೩,೫೫೩ | ೫,೬೧೭ | ೧೨,೧೬೮ | ೨೧,೩೬೪ | ೩೩,೫೩೨ | ೫,೭೯೦ | ೧೦,೩೧೫ | ೧೬,೧೦೫ | ೩೩,೩೭೨ | ೫೯,೫೨೬ | ೯೨,೮೯೮ |

**ಕೋಷ್ಟಕ ೮.೩: ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ (ಶೇಕಡವಾರು) ೧೯೦೧ ರಿಂದ ೨೦೦೧ರ ವರೆಗೆ**

| ವರ್ಷ | ಚಾಮರಾಜನಗರ | ಗುಂಡ್ಲುಪೇಟೆ | ಕೊಳ್ಳೇಗಾಲ | ಯಳಂದೂರು |
|---|---|---|---|---|
| ೧೯೦೧ | ೫.೪೨ | ೫.೪೩ | ೧೨.೦೧ | ೧೦.೭೮ |
| ೧೯೧೧ | ೫.೭೪ | ೫.೩೬ | ೧೦.೬೫ | – |
| ೧೯೨೧ | ೯.೬೨ | ೫.೭೮ | ೧೩.೯೧ | – |
| ೧೯೩೧ | ೧೦.೯೯ | ೭.೦೧ | ೧೩.೧೬ | ೧೦.೪೭ |
| ೧೯೪೧ | ೧೦.೫೨ | ೭.೦೩ | ೧೨.೮೩ | ೧೦.೧೬ |
| ೧೯೫೧ | ೧೩.೦೦ | ೯.೦೧ | ೧೩.೬೬ | ೧೦.೧೧ |
| ೧೯೬೧ | ೧೨.೬೭ | ೯.೯೮ | ೧೨.೭೧ | ೧೦.೧೯ |
| ೧೯೭೧ | ೧೩.೬೫ | ೧೦.೫೯ | ೧೪.೨೮ | ೧೦.೫೨ |
| ೧೯೮೧ | ೧೪.೭೯ | ೧೧.೮೨ | ೧೩.೬೫ | ೧೦.೯೩ |
| ೧೯೯೧ | ೧೪.೨೦ | ೧೨.೨೦ | ೧೫.೬೦ | ೧೦.೭೦ |
| ೨೦೦೧ | ೧೭.೯೦ | ೧೨.೪೦ | ೧೫.೬೦ | ೧೧.೦೦ |

# ಜಿಲ್ಲೆಯ ಆದಾಯ

ಜಿಲ್ಲೆಯ ಆದಾಯವೆಂದು ಸಾಮಾನ್ಯವಾಗಿ ಕರೆಯಲಾಗುವ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು, ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮುಖ್ಯ ಸೂಚಿಯಾಗಿದೆ. ಆಯಾ ವರ್ಷದಲ್ಲಿ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಇದರಿಂದ ತಿಳಿಯಬಹುದು. ಪ್ರಸಕ್ತ ಬೆಲೆಗಳು, ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಅಂದಾಜು ಹುಟ್ಟುವಳಿ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಸ್ಥಿರ ಬೆಲೆಗಳು ಈ ಅಂದಾಜು ಬೆಲೆಗಳ ವ್ಯತ್ಯಾಸದ ಪರಿಣಾಮವನ್ನು ದೂರವಾಗಿಸಿ, ನಿಜವಾದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುವಲ್ಲಿ ನೆರವಾಗುತ್ತವೆ. ತಲಾವಾರು ನಿವ್ವಳ ಆಂತರಿಕ ಉತ್ಪನ್ನವು ಜಿಲ್ಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಮತ್ತೊಂದು ಮಾಪನವಾಗಿದ್ದು, ಪ್ರಾದೇಶಿಕ ಅಸಮತೋಲನವನ್ನು ಅಳೆಯಲೂ ಸಹಕರಿಸುತ್ತದೆ.

ಜಿಲ್ಲೆಯ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು, ಬಂಡವಾಳ ಮತ್ತು ಮಾನವ ಶ್ರಮಗಳು ಪ್ರತಿ ವರ್ಷವೂ ಉತ್ಪಾದಿಸುವ ಸರಕು ಮತ್ತು ಸೇವೆಗಳ ನಿವ್ವಳ ಮೊತ್ತದ ಮೌಲ್ಯವೇ ಜಿಲ್ಲಾದಾಯ. ಕೃಷಿ, ಅರಣ್ಯ, ಮೀನುಗಾರಿಕೆ, ಗಣಿ ಮತ್ತು ಕಲ್ಲು ಅಗೆತಗಳು ಪ್ರಾಥಮಿಕ ವಲಯದ ವ್ಯಾಪ್ತಿಗೂ; ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ), ನಿರ್ಮಾಣ, ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ದ್ವಿತೀಯ ವಲಯಕ್ಕೂ; ರೈಲ್ವೆ, ಇತರೆ ಸಾರಿಗೆ, ಸಂಗ್ರಹಣೆ, ಸಂಪರ್ಕ, ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು, ಬ್ಯಾಂಕು ಮತ್ತು ವಿಮೆ, ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ, ಸಾರ್ವಜನಿಕ ಆಡಳಿತ ಹಾಗೂ ಇತರೆ ಸೇವೆಗಳೂ ತೃತೀಯ ವಲಯ ಅಥವಾ ಸೇವಾ ಕ್ಷೇತ್ರದ ವ್ಯಾಪ್ತಿಗೂ ಸೇರಿವೆ. ಇವುಗಳ ಉತ್ಪಾದನಾ ಪ್ರಾಮುಖ್ಯತೆಯನ್ನು ಅವುಗಳ ವರಮಾನದಿಂದ ಅರಿಯಬಹುದಾಗಿದೆ.

ಜಿಲ್ಲೆಯ ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆ ೨೦೦೦–೦೧ರಲ್ಲಿ ಶೇ. ೫೩ಕ್ಕಿಂತಲೂ ಅಧಿಕವಾಗಿತ್ತು. ಇದು ೨೦೦೩–೦೪ರಲ್ಲಿ ಶೇ. ೩೧.೭೦ಕ್ಕೆ ಕುಸಿದಿದೆ. ಹಾಗೆಯೇ ಸದರಿ ಸಾಲುಗಳಲ್ಲಿ ದ್ವಿತೀಯ ವಲಯದ ಕೊಡುಗೆ ಶೇ. ೧೨.೨೬ ರಿಂದ ಶೇ. ೧೮.೨೦ಕ್ಕೂ ಹಾಗೂ ತೃತೀಯ ವಲಯದ ಕೊಡುಗೆ ಶೇ. ೩೪.೬೮ ರಿಂದ ಶೇ. ೫೦ಕ್ಕೂ ಹೆಚ್ಚಳಗೊಂಡಿರುವುದು ಈ ವಲಯಗಳ ಪ್ರಾಮುಖ್ಯತೆಯನ್ನು ಬಿಂಬಿಸುತ್ತದೆ.

ಅವಿಭಜಿತ ಮೈಸೂರು ಜಿಲ್ಲೆಯ ಆದಾಯ ಚಾಲ್ತಿ ಬೆಲೆಗಳಲ್ಲಿ ಹೀಗಿದೆ. ೧೯೭೦–೭೧ರಲ್ಲಿ ₹ ೧೨,೭೪೯ ಲಕ್ಷಗಳಾಗಿದ್ದರೆ, ೧೯೭೫–೭೬ರಲ್ಲಿ ₹ ೨೨,೨೭೭ ಲಕ್ಷಗಳಿಗೂ, ೧೯೮೦–೮೧ರಲ್ಲಿ ₹ ೩೭,೬೬೦ ಲಕ್ಷಗಳಿಗೂ, ೧೯೮೨–೮೩ರಲ್ಲಿ ₹ ೪೬,೭೫೫ ಲಕ್ಷಗಳಿಗೂ ಹೆಚ್ಚಳಗೊಂಡಿತ್ತು. ನಂತರ ಚಾಮರಾಜನಗರ ಜಿಲ್ಲೆಯು ೧೯೯೭–೯೮ರಲ್ಲಿ ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡಿದ್ದು, ಜಿಲ್ಲಾದಾಯವು ೨೦೦೦–೦೧ರಲ್ಲಿ ₹ ೧,೫೬,೧೦೩ ಲಕ್ಷಗಳಿದ್ದದ್ದು ೨೦೦೩–೦೪ರಲ್ಲಿ ೧,೩೨,೬೨೧ ಲಕ್ಷಗಳಿಗೆ ಕಡಿಮೆಯಾಗಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ.

ಮೂಲ ಉದ್ಯಮಗಳ ಪ್ರಕಾರ ಚಾಮರಾಜನಗರ ಜಿಲ್ಲೆಯ ನಿವ್ವಳ ಆದಾಯ ಚಾಲ್ತಿ ಬೆಲೆಗಳಲ್ಲಿ ೨೦೦೦–೦೧ರಲ್ಲಿ ಕೃಷಿಯಿಂದ ₹ ೭೭,೫೧೭ ಲಕ್ಷ (₹ ೫೪,೪೪೧ ಲಕ್ಷ)ಗಳಾಗಿತ್ತು. ಅರಣ್ಯ ಮತ್ತು ಮರಗೆಲಸದಿಂದ ₹ ೩,೨೨೮ ಲಕ್ಷಗಳು (₹೧೯೭೮ ಲಕ್ಷ); ಮೀನುಗಾರಿಕೆಯಿಂದ ₹ ೩೪೨ ಲಕ್ಷಗಳು (₹ ೧೦೩ ಲಕ್ಷ); ಗಣಿ ಮತ್ತು ಕಲ್ಲು ಅಗೆತದಿಂದ ₹ ೧೭೧೫ ಲಕ್ಷಗಳು (₹ ೧೩೫೨ ಲಕ್ಷ); ತಯಾರಿಕೆಯಿಂದ (ನೋಂದಾಯಿಸಿದ ಹಾಗೂ ನೋಂದಾಯಿಸದ) ₹ ೧೧೯೩೨ ಲಕ್ಷಗಳು (₹ ೭೪೧೮ ಲಕ್ಷ); ನಿರ್ಮಾಣ ಕಾರ್ಯದಿಂದ ೬೩೬೮ ಲಕ್ಷಗಳು (₹ ೪೨೯೧ ಲಕ್ಷ); ವಿದ್ಯುಚ್ಛಕ್ತಿ, ಅನಿಲ ಮತ್ತು ನೀರು ಸರಬರಾಜಿನಿಂದ ₹ ೧೮೫೦ ಲಕ್ಷಗಳು (₹ ೯೪೦ ಲಕ್ಷ); ರೈಲ್ವೆಯಿಂದ ₹ ೧೨೩ ಲಕ್ಷಗಳು (₹ ೮೩ಲಕ್ಷ); ಇತರೆ ಸಾರಿಗೆಯಿಂದ ₹ ೧೩೭೦ ಲಕ್ಷಗಳು (₹ ೬೦೨ ಲಕ್ಷ); ಸಂಗ್ರಹಣೆಯಿಂದ ₹ ೪೪ಲಕ್ಷಗಳು (₹ ೨೯ ಲಕ್ಷ); ಸಂಪರ್ಕದಿಂದ ₹ ೧೮೨೬ ಲಕ್ಷಗಳು (₹ ೧೫೯೨ ಲಕ್ಷ); ವ್ಯಾಪಾರ, ಹೋಟೇಲ್ ಹಾಗೂ ಉಪಾಹಾರಗೃಹಗಳಿಂದ ₹ ೧೪,೩೨೫ ಲಕ್ಷಗಳು (₹ ೯,೮೬೮ ಲಕ್ಷ); ಬ್ಯಾಂಕು ಮತ್ತು ವಿಮೆಗಳಿಂದ ₹ ೩,೪೯೫ ಲಕ್ಷಗಳು (₹ ೨೩೮೭ ಲಕ್ಷ); ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಹಾಗೂ ವ್ಯವಹಾರ ಸೇವೆಗಳಿಂದ ೧೩,೦೮೭ ಲಕ್ಷಗಳು (₹ ೭೨೬೮ ಲಕ್ಷ); ಸಾರ್ವಜನಿಕ ಆಡಳಿತದಿಂದ ₹ ೬೦೭೮ ಲಕ್ಷಗಳು (₹ ೩೫೩೦ ಲಕ್ಷ) ಹಾಗೂ ಇತರೆ ಸೇವೆಗಳಿಂದ ₹ ೧೩,೮೦೩ ಲಕ್ಷಗಳು (₹ ೮೦೫೩ ಲಕ್ಷ) ಹೀಗೆ (ಪ್ರಾಥಮಿಕ, ದ್ವಿತೀಯ ಹಾಗೂ ತೃತೀಯ ವಲಯಗಳಿಂದ) ಒಟ್ಟು ಜಿಲ್ಲಾದಾಯ ₹ ೧,೫೬,೧೦೩ ಲಕ್ಷ (₹ ೧೦೩೯೩೫ ಲಕ್ಷ)ಗಳಾಗಿತ್ತು. ಆವರಣದಲ್ಲಿ ಸದರಿ ಸಾಲಿನಲ್ಲಿದ್ದ ಸ್ಥಿರ (೧೯೯೩–೯೪ರ) ಬೆಲೆಗಳಲ್ಲಿ ಜಿಲ್ಲಾದಾಯವನ್ನು ಸೂಚಿಸುತ್ತವೆ.

ಚಾಮರಾಜನಗರ ಜಿಲ್ಲೆಯ ನಿವ್ವಳ ಆದಾಯವು ೨೦೦೦–೦೧ರಲ್ಲಿ ₹ ೧,೫೬,೧೦೩ ಲಕ್ಷ ಗಳಿಂದ, ೨೦೦೩–೦೪ರಲ್ಲಿ ₹ ೧,೩೨,೬೨೧ ಲಕ್ಷಗಳಿಗೆ ಕುಸಿದಿರುವುದು ಗಮನಾರ್ಹವಾದುದಾಗಿದೆ. ಚಾಲ್ತಿ ಬೆಲೆಗಳಲ್ಲಿ ರಾಜ್ಯದಲ್ಲಿ ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ ೨೫ ರಿಂದ ೨೬ಕ್ಕೆ ಕುಸಿದಿತ್ತು. ಇದೇ ಅವಧಿಗಳಲ್ಲಿ ೧೯೯೩–೯೪ರ ಸ್ಥಿರ ಬೆಲೆಗಳಲ್ಲಿ ಜಿಲ್ಲಾ ಆದಾಯವು ಕ್ರಮವಾಗಿ ₹ ೧,೦೩,೯೩೫ ಲಕ್ಷ ಹಾಗೂ ₹ ೭೫,೬೫೦ ಲಕ್ಷಗಳಾಗಿತ್ತು. ರಾಜ್ಯದಲ್ಲಿ ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ ೨೪ ರಿಂದ ೨೭ಕ್ಕೆ ಕುಸಿದಿರುವುದು ಜಿಲ್ಲೆಯು ಆರ್ಥಿಕವಾಗಿ ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ.

ಪ್ರಾಥಮಿಕ ವಲಯದಿಂದ ೨೦೦೦–೨೦೦೧ರಲ್ಲಿ ಜಿಲ್ಲಾ ಆದಾಯಕ್ಕೆ ಹೆಚ್ಚಿನ ಕೊಡುಗೆಯಿದ್ದರೂ, ಮುಂದಿನ ವರ್ಷಗಳಲ್ಲಿ ಅದು ಕಡಿಮೆಯಾಗುತ್ತಾ ಬಂದಿರುವುದು ಉಲ್ಲೇಖಾರ್ಹವಾಗಿದೆ. ೨೦೦೦–೨೦೦೧ರಲ್ಲಿ ₹ ೮೨,೮೦೩ ಲಕ್ಷಗಳಿದ್ದದ್ದು, ಇದು ೨೦೦೧–೦೨ರಲ್ಲಿ ₹೬೩,೧೮೦ ಲಕ್ಷಗಳಿಗೂ; ೨೦೦೨–೦೩ರಲ್ಲಿ ₹೬೧,೯೪೧ ಲಕ್ಷಗಳಿಗೂ ಹಾಗೂ ೨೦೦೩–೦೪ರಲ್ಲಿ ₹ ೪೨,೦೫೨ ಲಕ್ಷಗಳಿಗೂ ಕುಸಿದಿರುವುದು ಗಮನಾರ್ಹವಾಗಿದೆ. ಹಾಗೆಯೇ ದ್ವಿತೀಯ ವಲಯದ ಕೊಡುಗೆ ಜಿಲ್ಲಾ ಆದಾಯಕ್ಕೆ ೨೦೦೦–೦೧ರಲ್ಲಿ ₹೧೯,೧೫೦ ಲಕ್ಷಗಳಿದ್ದದ್ದು, ೨೦೦೧–೦೨ ರಲ್ಲಿ ₹ ೧೯,೩೭೨ ಲಕ್ಷಗಳಿಗೂ, ೨೦೦೨–೦೩ರಲ್ಲಿ ₹ ೨೧,೯೨೮ ಲಕ್ಷಗಳಿಗೂ ಹಾಗೂ ೨೦೦೩–೦೪ರಲ್ಲಿ ₹ ೨೪,೧೪೫ ಲಕ್ಷಗಳಿಗೆ ಹೆಚ್ಚಳಗೊಂಡಿರುವುದು ದ್ವಿತೀಯ ವಲಯದ (ಕೈಗಾರಿಕೆ) ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಇದೇ ಅವಧಿಗಳಲ್ಲಿ ಜಿಲ್ಲಾ ಆದಾಯಕ್ಕೆ ತೃತೀಯ ವಲಯ ಅಥವಾ ಸೇವಾ ಕ್ಷೇತ್ರದ ಕೊಡುಗೆ ಕ್ರಮವಾಗಿ ₹ ೫೪,೧೫೧ ಲಕ್ಷಗಳು, ₹ ೫೨,೭೪೪ ಲಕ್ಷಗಳು, ₹ ೫೦,೪೭೪ ಲಕ್ಷಗಳು ಹಾಗೂ ₹ ೬೬,೪೨೪ ಲಕ್ಷಗಳಿಗೆ ಹೆಚ್ಚಳಗೊಂಡಿರುವುದು ಸ್ಪಷ್ಟವಾಗಿದೆ. ಹಾಗೆಯೇ ೨೦೦೦–೦೧ ರಿಂದ ೨೦೦೩–೦೪ರ ವರೆಗೆ ೧೯೯೩–೯೪ರ ಸ್ಥಿರಬೆಲೆಗಳಲ್ಲಿ ಜಿಲ್ಲಾ ಆದಾಯಕ್ಕೆ ಪ್ರಾಥಮಿಕ ವಲಯದ ಕೊಡುಗೆ ಕ್ರಮವಾಗಿ ₹ ೫೭,೮೭೪ ಲಕ್ಷಗಳು; ₹ ೪೫,೨೧೭ ಲಕ್ಷಗಳು; ₹ ೪೪,೭೮೨ ಲಕ್ಷಗಳು ಹಾಗೂ ₹ ೨೩,೪೯೯ ಲಕ್ಷಗಳಾಗಿತ್ತು. ದ್ವಿತೀಯ ವಲಯದಿಂದ ₹ ೧೨,೬೪೯ ಲಕ್ಷಗಳು; ₹ ೧೩,೭೯೦ ಲಕ್ಷಗಳು; ₹ ೧೪,೨೪೧ ಲಕ್ಷಗಳು ಹಾಗೂ ₹ ೧೪,೮೬೯ ಲಕ್ಷಗಳಿಗೆ ಹೆಚ್ಚಳಗೊಂಡಿದ್ದರೆ, ತೃತೀಯ ವಲಯದಿಂದ ₹ ೩೩,೪೧೨ ಲಕ್ಷಗಳು; ₹ ೩೨,೯೭೭ ಲಕ್ಷಗಳು; ₹ ೩೨,೦೮೭ ಲಕ್ಷಗಳು ಹಾಗೂ ₹ ೩೭,೧೮೨ ಲಕ್ಷಗಳಿಗೆ ಹೆಚ್ಚಳಗೊಂಡಿರುವುದು ದ್ವಿತೀಯ ಹಾಗೂ ತೃತೀಯ ವಲಯಗಳ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೪ ಹಾಗೂ ಕೋಷ್ಟಕ ೮.೫ ಅನ್ನು ನೋಡಿ.

## ತಲಾ ಆದಾಯ

ಜಿಲ್ಲೆಯ ತಲಾ ಆದಾಯವು ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಗುಣಮಟ್ಟವನ್ನು ಅಳತೆ ಮಾಡುವ ಮತ್ತೊಂದು ಸೂಚಿಯಾಗಿದೆ. ಅವಿಭಜಿತ ಮೈಸೂರು ಜಿಲ್ಲೆಯ ತಲಾ ಆದಾಯವು ದಿ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಎಕಾನೋಮಿಕ್ ರಿಸರ್ಚ್, ನವದಹೆಲಿ ಇವರು ಅಂದಾಜಿಸಿದಂತೆ ೧೯೫೫–೫೬ರಲ್ಲಿ ಕೇವಲ ₹೧೭೬ಗಳಾಗಿತ್ತು. ಆಗ ರಾಜ್ಯದಲ್ಲಿ ೧೪ನೇ ಸ್ಥಾನ ಪಡೆದಿತ್ತು. ನಂತರ ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು. ಇವರು ೧೯೫೬–೫೭ರಲ್ಲಿ ತಲಾ ಆದಾಯವನ್ನು ಸಿದ್ಧಪಡಿಸಿದ್ದು, ಇದರಂತೆ ೧೯೬೦–೬೧ರಲ್ಲಿ ಚಾಲ್ತಿ ಬೆಲೆಗಳಲ್ಲಿ ₹ ೨೫೮.೭೫ ಹೊಂದಿ ರಾಜ್ಯದಲ್ಲಿ ೧೦ನೇ ಸ್ಥಾನ ಪಡೆದಿತ್ತು. ನಂತರ ೧೯೭೦–೭೧ರಲ್ಲಿ ತಲಾ ಆದಾಯವನ್ನು ಚಾಲ್ತಿ ಹಾಗೂ ಸ್ಥಿರ (೧೯೭೦–೭೧ರಲ್ಲಿದ್ದ ಬೆಲೆ ಆಧಾರಿಸಿ) ಬೆಲೆಗಳಲ್ಲಿ ತಯಾರಿಸಿತು. ಅದರಂತೆ ತಲಾ ಆದಾಯ ೧೯೭೦–೭೧ರಲ್ಲಿ ₹ ೬೨೦.೩೦ ಪೈಸೆ ಆಗಿತ್ತು. ೧೯೭೦–೭೧ರ ಚಾಲ್ತಿ ಹಾಗೂ ಸ್ಥಿರ ಬೆಲೆಯ ಪ್ರಕಾರ ಕ್ರಮವಾಗಿ ೧೯೭೫–೭೬ರಲ್ಲಿ ₹೯೭೯.೬೪ ಮತ್ತು ₹ ೭೦೬.೨೪ ಆಗಿತ್ತು. ಹಾಗೆಯೇ ೧೯೮೦–೮೧ರಲ್ಲಿ ₹ ೧,೪೬೫.೯೪ ಮತ್ತು ₹ ೬೯೧.೯೦; ೧೯೮೨–೮೩ರಲ್ಲಿ ₹ ೧,೭೩೧ ಮತ್ತು ₹ ೬೯೪.೭೮ ಹಾಗೂ ೧೯೮೪–೮೫ರಲ್ಲಿ ₹ ೨,೨೯೬.೧೯ ಮತ್ತು ₹೭೮೨.೮೩ ಆಗಿತ್ತು. ೧೯೬೦–೬೧ರಿಂದ ೧೯೮೪–೮೫ರ ಅವಧಿಯಲ್ಲಿ ತಲಾ ಆದಾಯದಲ್ಲಿ ಚಾಲ್ತಿ ಬೆಲೆಗಳಲ್ಲಿ ಶೇ. ೭೮೯ರಷ್ಟು ಹೆಚ್ಚಳ ಕಂಡಿರುವುದು ಉಲ್ಲೇಖಾರ್ಹವಾಗಿದೆ. ಮುಂದೆ ೧೯೯೪–೯೫ರಲ್ಲಿ ₹ ೯,೧೮೭ ಗಳಾಗಿದ್ದರೆ, ೧೯೯೬–೯೭ರಲ್ಲಿ ₹೧೦,೬೧೫ ಗಳಿಗೆ ಹೆಚ್ಚಳಗೊಂಡಿತ್ತು. ಆದರೆ ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ವಿಭಜನೆಗೊಂಡ ನಂತರ ೧೯೯೭–೯೮ರಲ್ಲಿ ₹ ೧೧,೪೩೩ಗಳಿಗೂ, ೨೦೦೦–೦೧ರಲ್ಲಿ ₹೧೬,೨೭೪ ಗಳಿಗೆ ಹೆಚ್ಚಳಗೊಂಡಿತ್ತು. ಆದರೆ ೨೦೦೩–೦೪ರಲ್ಲಿ ₹೧೩,೨೯೮ಗಳಿಗೆ ಕುಸಿದಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ.

ಅವಿಭಜಿತ ಜಿಲ್ಲೆಯಲ್ಲಿ ಸ್ಥಿರ ಬೆಲೆಗಳಲ್ಲಿ ತಲಾ ಆದಾಯವು ೧೯೭೦–೭೧ ರಿಂದ ೧೯೮೪–೮೫ರ ವರೆಗೆ ಶೇ. ೨೫.೨ರಷ್ಟು ಹೆಚ್ಚಳಗೊಂಡಿತ್ತು. ಅವಿಭಜಿತ ಜಿಲ್ಲೆಯಲ್ಲಿ ₹ ೮,೨೭೯ ಗಳಿದ್ದದ್ದು, ೨೦೦೦–೦೧ರಲ್ಲಿ ₹ ೧೦,೮೩೬ ಗಳಿಗೆ ಹೆಚ್ಚಳಗೊಂಡಿದ್ದರೂ, ೨೦೦೩–೦೪ರಲ್ಲಿ ₹ ೭,೩೮೫ ಗಳಿಗೆ ತಲಾ ವರಮಾನ ಕುಸಿದಿರುವುದು ಸ್ಪಷ್ಟವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೪ ಹಾಗೂ ಕೋಷ್ಟಕ ೮.೫ ಅನ್ನು ನೋಡಿ.

**ಕೊಷ್ಟಕ ೮.೪: ಮೂಲ ಉದ್ಯಮಗಳ ಪ್ರಕಾರ ಚಾಮರಾಜನಗರ ಜಿಲ್ಲೆಯ ನಿವ್ವಳ ಆದಾಯ ಚಾಲ್ತಿ ಬೆಲೆಗಳಲ್ಲಿ (₹ಲಕ್ಷಗಳಲ್ಲಿ)**

| ಕ್ರ. ಸಂ. | ಜಿಲ್ಲೆಯ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | |
|---|---|---|---|---|---|---|---|
| | | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೬–೦೭ | ೨೦೦೮–೦೯ |
| ೧. | ಕೃಷಿ | ೭೭,೫೧೭ | ೫೭,೮೫೩ | ೫೫,೬೫೮ | ೩೬,೦೮೩ | ೪೨,೪೪೪ | ೧,೦೧,೭೦೪ |
| ೨. | ಅರಣ್ಯ ಮತ್ತು ಮರಗೆಲಸ | ೩,೨೨೮ | ೩,೨೮೧ | ೩,೨೧೩ | ೩,೬೫೮ | ೪,೦೩೫ | ೧೩,೪೫೨ |
| ೩. | ಮೀನುಗಾರಿಕೆ | ೩೪೨ | ೪೮೨ | ೬೦೯ | ೩೪೨ | ೯೭೧ | ೧, ೦೭೭ |
| ೪. | ಗಣಿ ಮತ್ತು ಕಲ್ಲು ಅಗೆತ | ೧,೭೧೫ | ೧,೫೬೪ | ೨,೪೬೧ | ೧,೯೬೯ | ೪೩೨ | ೪೦೧ |
| ಪ್ರಾಥಮಿಕ ವಲಯದ ಒಟ್ಟು | | **೮೨,೮೦೨** | **೬೩,೧೮೦** | **೬೧,೯೪೧** | **೪೨,೦೫೨** | **೪೭,೮೮೨** | ೧,೧೬,೬೩೩ |
| ೫. | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೧೦,೯೩೨ | ೧೦,೭೦೩ | ೧೨,೮೪೬ | ೧೩,೫೦೮ | ೧೦,೯೧೨ | ೧೫,೨೬೩ |
| ೬. | ನಿರ್ಮಾಣ ಕಾರ್ಯ | ೬,೩೬೮ | ೬,೪೫೩ | ೭,೧೮೨ | ೮,೬೯೦ | ೧೫,೮೯೧ | ೨೨,೭೨೧ |
| ೭. | ವಿದ್ಯುಚ್ಛಕ್ತಿ, ಅನಿಲ, ನೀರು ಸರಬರಾಜು | ೧,೮೫೦ | ೨,೨೧೬ | ೧,೯೦೦ | ೧,೯೪೭ | ೧,೮೬೭ | ೩,೫೩೭ |
| ದ್ವಿತೀಯ ವಲಯದ ಒಟ್ಟು | | **೧೯,೧೫೦** | **೧೯,೩೭೨** | **೨೧,೯೨೮** | **೨೪,೧೪೫** | **೨೮,೬೭೦** | **೪೧೫೨೦** |
| ೮. | ರೈಲ್ವೆ | ೧೨೩ | ೧೦೮ | ೨೨೧ | ೨೫೦ | ೫೮೩ | ೬೪೯ |
| ೯. | ಇತರೆ ಸಾರಿಗೆ | ೧,೩೭೦ | ೧,೪೮೨ | ೧,೩೮೪ | ೨,೭೨೮ | ೪,೦೩೮ | ೧೧,೭೭೦ |
| ೧೦. | ಸಂಗ್ರಹಣೆ | ೪೪ | ೫೦ | ೬೬ | ೬೩ | ೧೩ | ೧೪ |
| ೧೧. | ಸಂಪರ್ಕ | ೧,೮೨೬ | ೨,೪೯೫ | ೨,೪೯೫ | ೨,೫೮೪ | ೧,೬೮೬ | ೨,೨೮೫ |
| ೧೨. | ವ್ಯಾಪಾರ, ಹೋಟೆಲ್ ಮತ್ತು ಉಪಾಹಾರಗೃಹಗಳು | ೧೪,೩೨೫ | ೧೨,೩೨೮ | ೧೨,೩೨೮ | ೧೩,೦೧೨ | ೨೬,೦೮೮ | ೨೧,೧೨೪ |
| ೧೩ | ಬ್ಯಾಂಕು ಮತ್ತು ವಿಮೆ | ೩,೪೯೫ | ೨,೬೭೪ | ೨,೬೭೪ | ೬,೮೪೮ | ೯,೬೬೬ | ೯,೨೦೦ |
| ೧೪. | ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೧೩,೦೮೭ | ೧೪,೫೧೬ | ೧೪,೫೧೬ | ೨೦,೫೬೨ | ೩೦,೩೯೦ | ೩೮,೫೮೧ |
| ೧೫. | ಸಾರ್ವಜನಿಕ ಆಡಳಿತ | ೬,೦೭೮ | ೬,೪೬೫ | ೩,೫೨೭ | ೪,೦೬೨ | ೬,೦೫೧ | ೧೧,೭೫೪ |
| ೧೬. | ಇತರೆ ಸೇವೆಗಳು | ೧೩,೮೦೩ | ೧೨,೬೨೬ | ೧೩,೨೬೩ | ೧೬,೩೧೫ | ೧೮,೮೧೨ | ೨೮,೧೨೯ |
| ತೃತೀಯ ವಲಯದ ಒಟ್ಟು: | | ೫೪,೧೫೧ | ೫೨,೭೪೪ | ೫೦,೪೭೪ | ೬೬,೪೨೪ | ೯೮,೩೨೭ | ೧,೨೩,೫೦೮ |
| ೧೭. | ನಿವ್ವಳ ಜಿಲ್ಲಾದಾಯ | ೧,೫೬,೧೦೩ | ೧,೩೫,೨೯೬ | ೧,೩೪,೩೪೩ | ೧,೩೨,೬೨೧ | ೧,೭೪,೮೭೯ | ೨,೮೧,೬೬೧ |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೨೫ | ೨೬ | ೨೭ | ೨೬ | – | – |
| ೧೯. | ತಲಾದಾಯ (₹ ಗಳಲ್ಲಿ) | ೧೬,೨೭೪ | ೧೩,೮೮೦ | ೧೩,೬೪೨ | ೧೩,೨೯೮ | ೧೬,೮೯೮ | ೨೬೬೧೭ |
| ೨೦. | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೧೨ | ೧೭ | ೨೦ | ೨೪ | – | – |

**ಕೋಷ್ಟಕ ೮.೫: ಮೂಲ ಉದ್ಯಮಗಳ ಪ್ರಕಾರ ಚಾಮರಾಜನಗರ ಜಿಲ್ಲೆಯ ನಿವ್ವಳ ಆದಾಯ (೧೯೯೩–೯೪)ರ ಸ್ಥಿರ ಬೆಲೆಗಳಲ್ಲಿ (₹ ಲಕ್ಷಗಳಲ್ಲಿ)**

| ಕ್ರ. ಸಂ. | ಜಿಲ್ಲೆಯ ಆದಾಯ ವಿವಿಧ ಮೂಲಗಳಿಂದ | ವರ್ಷ | | | | | |
|---|---|---|---|---|---|---|---|
| | | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೬–೦೭ | ೨೦೦೮–೦೯ |
| ೧. | ಕೃಷಿ | ೫೪,೪೪೧ | ೪೨,೦೫೩ | ೪೦,೯೦೨ | ೨೦,೦೬೯ | ೪೨,೩೭೬ | ೯೮,೫೧೨ |
| ೨. | ಅರಣ್ಯ ಮತ್ತು ಮರಗೆಲಸ | ೧,೯೭೮ | ೧,೯೦೪ | ೧,೯೦೩ | ೨,೦೮೪ | ೨,೮೨೫ | ೮,೯೦೦ |
| ೩. | ಮೀನುಗಾರಿಕೆ | ೧೦೩ | ೧೩೦ | ೧೩೮ | ೧೦೧ | ೮೮೩ | ೬೭೧ |
| ೪. | ಗಣಿ ಮತ್ತು ಕಲ್ಲು ಅಗೆತ | ೧,೩೫೨ | ೧,೧೩೦ | ೧,೮೩೯ | ೧,೩೪೫ | ೩೧೪ | ೨೭೭ |
| | **ಪ್ರಾಥಮಿಕ ವಲಯದ ಒಟ್ಟು** | **೫೭,೮೭೪** | **೪೫,೨೧೭** | **೪೪,೭೮೨** | **೨೩,೫೯೯** | **೪೬,೩೯೮** | **೧,೦೮,೩೬೦** |
| ೫. | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೭,೪೧೬ | ೭,೯೯೧ | ೮,೨೪೩ | ೮,೫೬೨ | ೮,೬೮೧ | ೧೨,೨೭೩ |
| ೬. | ನಿರ್ಮಾಣ ಕಾರ್ಯ | ೪,೨೯೧ | ೪,೬೨೯ | ೫,೦೧೭ | ೫,೩೮೧ | ೧೧,೫೫೪ | ೧೬,೬೭೦ |
| ೭. | ವಿದ್ಯುಚ್ಛಕ್ತಿ, ಅನಿಲ, ನೀರು ಸರಬರಾಜು | ೯೪೦ | ೧,೧೭೦ | ೯೮೧ | ೯೩೬ | ೧,೨೯೩ | ೨,೨೨೫ |
| | **ದ್ವಿತೀಯ ವಲಯದ ಒಟ್ಟು** | **೧೨,೬೪೯** | **೧೩,೭೯೦** | **೧೪,೨೪೧** | **೧೪,೮೭೯** | **೨೧,೫೨೮** | **೩೧,೧೬೮** |
| ೮. | ರೈಲ್ವೆ | ೮೩ | ೭೩ | ೧೩೭ | ೧೬೭ | ೫೯೫ | ೫೮೬ |
| ೯. | ಇತರೆ ಸಾರಿಗೆ | ೬೦೨ | ೬೫೪ | ೫೮೬ | ೭೬೧ | ೩,೮೨೨ | ೬,೬೪೯ |
| ೧೦. | ಸಂಗ್ರಹಣೆ | ೨೯ | ೩೦ | ೩೫ | ೩೩ | ೧೦ | ೧೨ |
| ೧೧. | ಸಂಪರ್ಕ | ೧,೫೯೨ | ೨,೯೦೪ | ೨,೯೦೪ | ೪,೦೪೨ | ೩,೬೦೪ | ೩,೫೯೮ |
| ೧೨. | ವ್ಯಾಪಾರ, ಹೋಟೆಲ್ ಮತ್ತು ಉಪಹಾರಗೃಹಗಳು | ೯,೮೬೮ | ೮,೪೭೧ | ೮,೪೭೧ | ೭,೩೪೩ | ೧೮,೬೬೫ | ೧೯,೩೩೧ |
| ೧೩ | ಬ್ಯಾಂಕು ಮತ್ತು ವಿಮೆ | ೨,೩೮೭ | ೧,೭೯೩ | ೧,೭೯೩ | ೪,೩೮೯ | ೮,೭೬೪ | ೯,೮೧೯ |
| ೧೪. | ಸ್ಥಿರಾಸ್ತಿ, ವಾಸಗೃಹಗಳ ಒಡೆತನ ಮತ್ತು ವ್ಯವಹಾರ ಸೇವೆಗಳು | ೭,೨೬೮ | ೭,೮೭೪ | ೭,೮೭೪ | ೯,೯೯೧ | ೧೮,೭೩೪ | ೨೮,೦೬೮ |
| ೧೫. | ಸಾರ್ವಜನಿಕ ಆಡಳಿತ | ೩,೫೩೦ | ೩,೨೪೭ | ೩,೧೯೨ | ೨,೦೯೩ | ೪,೨೨೮ | ೫,೬೫೭ |
| ೧೬. | ಇತರೆ ಸೇವೆಗಳು | ೮,೦೫೩ | ೭,೦೫೧ | ೭,೦೯೫ | ೮,೩೬೩ | ೧೩,೫೮೫ | ೨೧,೦೬೯ |
| | **ತೃತೀಯ ವಲಯದ ಒಟ್ಟು** | **೩೩,೪೧೨** | **೩೨,೦೯೭** | **೩೨,೦೮೭** | **೩೭,೧೮೨** | **೭೨,೦೦೭** | **೯೪,೭೮೯** |
| ೧೭ | ನಿವ್ವಳ ಜಿಲ್ಲಾದಾಯ | ೧,೦೩,೯೩೯ | ೯೧,೧೦೪ | ೯೧,೧೧೦ | ೭೫,೬೫೦ | ೧,೩೯,೯೩೩ | ೨,೩೪,೩೧೭ |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೨೪ | ೨೭ | ೨೭ | ೨೭ | – | – |
| ೧೯. | ತಲಾದಾಯ (₹ ಗಳಲ್ಲಿ) | ೧೦,೮೩ | ೯,೩೪೬ | ೯,೨೫೨ | ೭,೫೮೫ | ೧೩,೫೨೧ | ೨೨,೧೪೩ |
| ೨೦. | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೧೪ | ೧೭ | ೨೭ | ೨೫ | – | – |

## ಬೆಲೆ

ತೀವ್ರತರವಾದ ಆರ್ಥಿಕಾಭಿವೃದ್ಧಿಯಲ್ಲಿ ಬೆಲೆಗಳ ಪಾತ್ರ ಮಹತ್ತರವಾದುದು. ಬೆಲೆಗಳು ಒಂದು ಮಿತಿಯಲ್ಲಿ ಏರುತ್ತಿದ್ದರೆ, ಆರ್ಥಿಕಾಭಿವೃದ್ಧಿಗೆ ಚಲನಶಕ್ತಿ ಉಂಟಾಗಿ ಆರ್ಥಿಕಾಭಿವೃದ್ಧಿ ಶ್ರೀಮಂತವಾಗುವುದು. ಆದರೆ ಬೆಲೆಗಳ ತೀವ್ರ ಹೆಚ್ಚಳ ಆರ್ಥಿಕಾಭಿವೃದ್ಧಿಯ ಸ್ಥಿತಿಗತಿಗಳ ಬದಲಾವಣೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಶಾಸನಗಳ ಮೂಲಕ ಪುರಾತನ ಕಾಲದಿಂದಲೂ ಅನುಭೋಗಿ ಸರಕುಗಳ ಬೆಲೆ ಅಥವಾ ವಿನಿಮಯ ದರದ ಪ್ರಮಾಣ ಗೊತ್ತಾಗುತ್ತದೆ. ಅಂತಹ ಅಂಶ ೧೩ನೇ ಶತಮಾನದ ಸೋಮನಾಥ ದೇವಸ್ಥಾನದ ಶಾಸನದಿಂದ ಒಂದು ನಾಣ್ಯಕ್ಕೆ ಲಭ್ಯವಿದ್ದ ಅನುಭೋಗಿ ಸರಕುಗಳ ಪ್ರಮಾಣ ಗೊತ್ತಾಗುತ್ತದೆ. ಒಂದು ಗದ್ಯಾಣಕ್ಕೆ ಲಭ್ಯವಿದ್ದ ಅನುಭೋಗಿ ಸರಕುಗಳ ವಿವರ ಇಲ್ಲಿದೆ. ಒಂದು ಗದ್ಯಾಣಕ್ಕೆ ಐದು ಸೊಲಗೆ (Solages) ಭತ್ತ, ಎರಡು ಸೋಲಗೆ ಮತ್ತು ೧೦ ಕೊಳಗ (Kolagas) ಎಳ್ಳು (Sesamum), ಎರಡು ಕೊಳಗ ತುಪ್ಪ, ನಾಲ್ಕು ಸೊಲಗೆ ಮೊಸರು, ಎರಡು ಸೊಲಗೆ ಹೆಸರುಕಾಳು, ಒಂದು ಸೊಲಗೆ ಮತ್ತು ಹತ್ತು ಕೊಳಗ ಉಪ್ಪು, ಐದು ಕೊಳಗ ಮೆಣಸು, ಎರಡು ಸೊಲಗೆ ಮತ್ತು ಹತ್ತು ಕೊಳಗ ಸೀಗೆಕಾಯಿಪುಡಿ ಅಥವಾ ೧೦,೦೦೦ ಅಡಿಕೆ ಸಿಗುತ್ತಿತ್ತು. ಐದು ಆಣೆಗೆ ಒಂದು ಸೀರೆ, ಮೂರು ಆಣೆಗೆ ಒಂದು ಪಟ್ಟೆ (Patte). (ಒಂದು ಗದ್ಯಾಣಕ್ಕೆ ೬೨ ಗ್ರೈನ್ಸ್ ಆಗ ಹತ್ತು ಆಣೆ ಆಗುತ್ತದೆ)

ಸುಮಾರು ೧೮೦೦ರಲ್ಲಿ ಬುಕನನ್ ಪ್ರಕಾರ ₹ ಒಂದಕ್ಕೆ ೨೦ ಸೇರು ಅಕ್ಕಿ ಸಿಗುತ್ತಿತ್ತು. ೧೮೩೨–೩೩ರಲ್ಲಿ ಸಂಭವಿಸಿದ ಬರದಿಂದಾಗಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತ್ತು. ಈ ಅವಧಿಯಲ್ಲಿ ಅಕ್ಕಿ (ಉತ್ತಮ) ೧೩.೫ ಸ್ಥಳೀಯ ಸೇರುಗಳು, ಅಕ್ಕಿ (ಮಧ್ಯಮ) ೧೬.೨ ಸೇರುಗಳು, ರಾಗಿ ೩೦.೭೫ ಸೇರು ಸಿಗುತ್ತಿತ್ತು. ೧೮೫೭–೫೮ನೇ ಸಾಲಿನಲ್ಲಿ ಪ್ರತಿಕೂಲ ವಾತಾವರಣದಿಂದಾಗಿ ಜನ ತೊಂದರೆಗೊಳಗಾದರು. ೧೮೫೭ರಿಂದ ೧೮೬೦ರ ಅವಧಿಯಲ್ಲಿ ಬೆಲೆ ಏರುಮುಖವಾಗಿತ್ತು. ೧೯೬೦ ಹಾಗೂ ೧೯೭೦ರ ದಶಕಗಳಲ್ಲಿ ಋತುಮಾನದ ವೈಪರಿತ್ಯ ಹಾಗೂ ಸಕಾಲಕ್ಕೆ ಮಳೆ ಬೀಳದೆ ಜನರು ತುಂಬಾ ಸಂಕಷ್ಟಕ್ಕೆ ಒಳಗಾದರು.

ವಾಣಿಜ್ಯ, ಸಂಪರ್ಕ, ಕೈಗಾರಿಕಾ ಚಟುವಟಿಕೆಗಳು, ಅಮೇರಿಕಾದ ಸಿವಿಲ್ ವಾರ್ (೧೯೬೧–೬೫) ಹಾಗೂ ಜನಸಂಖ್ಯಾ ಹೆಚ್ಚಳ ಮುಂತಾದವು ಬೆಲೆ ಹೆಚ್ಚಳಕ್ಕೆ ಸಾಮಾನ್ಯ ಕಾರಣವಾದವು. ಉತ್ತರದ ಜಿಲ್ಲೆಗಳಾದ ಮದ್ರಾಸ್ ಹಾಗೂ ಬಾಂಬೆ ಪ್ರಾಂತಗಳಿಗೆ ೧೯೬೩–೬೪ರಲ್ಲಿ ಭಾರಿ ಪ್ರಮಾಣದಲ್ಲಿ ಆಹಾರ ಧಾನ್ಯಗಳ ರಫ್ತು ಮಾಡಿಕೊಳ್ಳಲಾಯಿತು. ಕಾರಣ ಹತ್ತಿಯ ಬೆಲೆ ಹೆಚ್ಚಳದಿಂದಾಗಿ ಆಹಾರ ಪದಾರ್ಥಗಳಿಗೆ ಬದಲಾಗಿ ಹತ್ತಿಯನ್ನು ಭಾರಿ ಪ್ರಮಾಣದಲ್ಲಿ ಬೆಳೆಯಲಾರಂಭಿಸಿದರು. ಇದರಿಂದಲೂ ಆಹಾರ ಪದಾರ್ಥಗಳ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತು. ೧೮೬೬ರಲ್ಲಿ ಜಿಲ್ಲಾ ಕಾರಾಗೃಹ, ಮೈಸೂರು ಪಡೆದ ಅಳತೆ ಪ್ರಮಾಣವನ್ನು ಪೌಂಡ್ಸ್ (Pounds), ಔನ್ಸ್ (Ounces) ಹಾಗೂ ಡ್ರಾಮ್ಸ್ (Drams)ನಲ್ಲಿ ನೀಡಿದೆ. ಒಂದು ರೂಪಾಯಿಗೆ ೧೬–೪–೨ ಅಕ್ಕಿ, ೧೩–೯–೪ ಬೆಳೆ, ೭–೧೨–೦ ಉಪ್ಪು, ೨೩–೯–೦೨ ರಾಗಿ ಹಿಟ್ಟು ಹಾಗೂ ೧೬–೧೩–೯ ಬೆಣ್ಣೆ ಸಿಗುತ್ತಿತ್ತು. ೧೮೬೭–೬೮ರಲ್ಲಿ ಉತ್ತಮ ಇಳುವರಿಯಿಂದಾಗಿ ಬೆಲೆಯಲ್ಲಿ ಗಮನಾರ್ಹ ಇಳಿಕೆ ಕಂಡುಬಂದಿತ್ತು. ಅನಂತರ ೧೮೭೧–೭೨ರ ವರೆಗೂ ಉತ್ತಮ ಬೆಳೆ ಬಂದು ಬೆಲೆಯಲ್ಲಿ ಕುಸಿತ ಕಂಡುಬಂದಿತ್ತು. ಆದರೆ ಇದೇ ಪರಿಸ್ಥಿತಿ ಬಹಳ ವರ್ಷಗಳವರೆಗೆ ಮುಂದುವರಿಯಲಿಲ್ಲ. ೧೮೭೭–೭೮ರಲ್ಲಿ ಪಶ್ಚಿಮ ಹಾಗೂ ದಕ್ಷಿಣ ಭಾರತದಲ್ಲಿ ಸಂಭವಿಸಿದ ಭೀಕರ ಬರಗಾಲದಿಂದಾಗಿ ಆಹಾರ ಧಾನ್ಯಗಳ ಹಾಗೂ ಇತರೆ ಧಾನ್ಯಗಳ ಬೆಲೆಯಲ್ಲಿ ಏರಿಕೆ

ಕಂಡು ಬಂದಿದ್ದು, ಇದು ೧೮೮೦ರ ವರೆಗೂ ಮುಂದುವರಿದಿತ್ತು. ೧೮೮೬–೯೦ರ ಅವಧಿಯಲ್ಲಿ ಉತ್ತಮ ಇಳುವರಿ ಬಂದಿತ್ತು. ೧೮೯೦–೯೧ರಲ್ಲಿ ಮತ್ತೇ ಭೀಕರ ಬರಗಾಲ ದಕ್ಷಿಣ ಭಾರತದಲ್ಲಿ ಕಂಡುಬಂದಿತ್ತು. ನಂತರ ೧೮೯೬ರ ವರೆಗೂ ಬೆಲೆ ಏರಿಕೆಯಲ್ಲಿ ಸಣ್ಣ ಪ್ರಮಾಣದಲ್ಲಿ ಸ್ಥಿರತೆ ಕಂಡುಬಂದಿತು. ೧೯೦೧–೦೨ ರಲ್ಲಿ ಬೆಲೆಯಲ್ಲಿ ಕುಸಿತ ಕಂಡುಬಂದಿತು. ಇದು ೧೯೦೫ರವರೆಗೂ ಮುಂದುವರಿದಿತ್ತು. ೧೮೬೧ ರಿಂದ ೧೯೦೫ರವರೆಗೆ ಲಭ್ಯವಿದ್ದ ಅಗತ್ಯ ವಸ್ತುಗಳ ಬೆಲೆಯನ್ನು ಐದು ವರ್ಷಕೊಮ್ಮೆ ಅಗತ್ಯ ವಸ್ತುಗಳ ಬೆಲೆಯಲ್ಲಿ ಕಂಡುಬರುವ ವ್ಯತ್ಯಾಸವನ್ನು ಕೋಷ್ಟಕ ೮.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೬: ೧೮೬೧ ರಿಂದ ೧೯೦೫ರ ವರೆಗೆ ಲಭಿಸುತ್ತಿದ್ದ ಅಗತ್ಯ ವಸ್ತುಗಳ ವಿವರ**

**(ಒಂದು ₹ ಗೆ ಸೇರುಗಳಲ್ಲಿ)**

| ಅವಧಿ | ಅಕ್ಕಿ | ಗೋಧಿ | ಜೋಳ | ರಾಗಿ | ಕಡಲೆ | ತೊಗರಿ | ಉಪ್ಪು |
|---|---|---|---|---|---|---|---|
| ೧೮೬೧–೬೫ | ೧೩.೩೭ | ೯.೩೫ | ೨೮.೨೦ | ೨೮.೩೩ | ೨೨.೬೨ | – | ೧೪.೧೫ |
| ೧೮೬೬–೭೦ | ೯.೬೫ | ೮.೨೦ | ೨೩.೦೪ | ೨೩.೩೬ | ೧೮.೮೪ | – | ೧೨.೬೫ |
| ೧೮೭೧–೭೫ | ೧೨.೨೪ | ೮.೪೦ | ೩೬.೬೪ | ೩೯.೦೬ | ೨೮.೬೫ | ೧೧.೭೧ | ೧೦.೫೩ |
| ೧೮೭೬–೮೦ | ೮.೭೪ | ೬.೩೫ | ೧೮.೯೨ | ೧೭.೫೪ | ೧೭.೩೯ | ೯.೭೮ | ೭.೯೨ |
| ೧೮೮೧–೮೫ | ೧೧.೯೭ | ೧೦.೮೧ | ೨೭.೮೮ | ೨೫.೦೧ | ೨೮.೨೭ | ೧೪.೯೬ | ೮.೮೭ |
| ೧೮೮೬–೯೦ | ೧೧.೮೪ | ೧೦.೬೫ | ೩೪.೭೫ | ೩೧.೨೬ | ೧೨.೧೨ | ೧೩.೯೩ | ೯.೧೮ |
| ೧೮೯೧–೯೫ | ೯.೦೭ | ೯.೨೧ | ೨೪.೩೩ | ೨೩.೨೧ | ೧೦.೪೮ | ೧೨.೮೫ | ೯.೮೧ |
| ೧೮೯೬–೧೯೦೦ | ೯.೦೮ | ೮.೪೫ | ೨೧.೧೩ | ೧೮.೮೩ | ೯.೨೩ | ೯.೪೧ | ೧೦.೫೭ |
| ೧೯೦೧–೦೫ | ೧೦.೭೦ | ೯.೨೫ | ೨೪.೮೨ | ೨೧.೯೨ | ೧೦.೪೮ | ೬.೭೫ | ೧೧.೯೫ |

ಕೊಳ್ಳೇಗಾಲ ಕೇಂದ್ರದಲ್ಲಿ ಒಂದು ₹ ಗೆ ಲಭ್ಯವಿದ್ದ ಪ್ರಮುಖ ಅಗತ್ಯ ವಸ್ತುಗಳ ಸರಾಸರಿ ವಾರ್ಷಿಕ ಬೆಲೆಗಳನ್ನು ೮೦ ತೊಲದ ಸೇರುಗಳಲ್ಲಿ ನೀಡಿದೆ. ೧೮೭೪–೭೯ರ ಅವಧಿಯಲ್ಲಿ ಅಕ್ಕಿ (ಮಧ್ಯಮ) ಹಾಗೂ ರಾಗಿ ಪ್ರತಿ ₹ ಗೆ ಕ್ರಮವಾಗಿ ೧೧.೮೬ ಸೇರು ಹಾಗೂ ೨೨.೫೭ ಸೇರು ಸಿಗುತ್ತಿತ್ತು. ಈ ಪದಾರ್ಥಗಳು ೧೮೭೯–೮೪ರಲ್ಲಿ ೧೪.೬೬ ಸೇರು ಹಾಗೂ ೩೨.೮೨ ಸೇರು, ೧೮೮೪–೧೮೮೯ರಲ್ಲಿ ೧೫.೧೦ ಸೇರು ಹಾಗೂ ೨೮.೭೪ ಸೇರು, ೧೮೮೯–೧೮೯೪ರಲ್ಲಿ ೧೧.೮೮ ಸೇರು ಹಾಗೂ ೨೫.೭೨ ಸೇರು, ೧೮೯೪–೧೮೯೯ರಲ್ಲಿ ೧೨.೩೬ ಸೇರು ಹಾಗೂ ೨೪.೪೮ ಸೇರು, ೧೮೯೯–೧೯೦೪ರಲ್ಲಿ ೧೧.೧೮ ಸೇರು ಹಾಗೂ ೧೯.೬೮ ಸೇರು, ೧೯೦೪–೧೯೦೯ರಲ್ಲಿ ೯.೭೪ ಸೇರು ಹಾಗೂ ೧೫.೫೬ ಸೇರು ಮತ್ತು ಮುಂದಿನ ಎರಡು ವರ್ಷಗಳಲ್ಲಿ (೧೯೦೯–೧೯೧೧)ರಲ್ಲಿ ೯.೦೦ ಸೇರು ಹಾಗೂ ೧೪.೦೦ ಸೇರುಗಳಷ್ಟು ಸಿಗುತ್ತಿತ್ತು. ಗುಂಡ್ಲುಪೇಟೆ ತಾಲೂಕಿನಲ್ಲಿ ೧೯೧೭–೧೮ರಲ್ಲಿ ೧೦೦ ಸೇರುಗಳಿಗೆ ₹ ಗಳಲ್ಲಿ ಲಭ್ಯವಿದ್ದ ಅಗತ್ಯವಸ್ತುಗಳ ವಿವರ ಇಲ್ಲಿದೆ. ಅಕ್ಕಿ (ಉತ್ತಮ) ₹ ೨೩, ಅಕ್ಕಿ ಮಧ್ಯಮ ₹ ೧೮, ರಾಗಿ ₹ ೮, ಜೋಳ ₹ ೮, ಕಡಲೆ ₹ ೧೬ ಗಳಾಗಿದ್ದರೆ, ಚಾಮರಾಜನಗರದಲ್ಲಿ ಅಕ್ಕಿ (ಉತ್ತಮ) ₹ ೨೨, ಅಕ್ಕಿ (ಮಧ್ಯಮ) ₹ ೧೭, ರಾಗಿ ₹ ೮, ಜೋಳ ₹ ೮, ಹಾಗೂ ಕಡಲೆ ₹ ೧೬ಗೆ ದೊರಕುತಿದ್ದಿತ್ತು. ೧೯೧೯–೨೦ರಲ್ಲಿ ಸರಾಸರಿ ಬೆಲೆ ೧೦೦ ಸೇರುಗಳಿಗೆ ಅಕ್ಕಿ (ಮಧ್ಯಮ) ₹ ೨೫.೧೨ (₹ ೧೯.೮೭); ರಾಗಿ ₹ ೧೩.೮೭ (₹ ೧೦.೮೧); ಜೋಳ ₹ ೧೨.೫೦ (₹ ೧೪.೦೬) ಹಾಗೂ ಉಪ್ಪು ₹ ೯.೨೫ (₹ ೦.೫೦) ಆಗಿತ್ತು. ಆವರಣದಲ್ಲಿ ನೀಡಿರುವ ಅಂಕಿಗಳು ೧೯೧೮–೧೯ರಲ್ಲಿದ್ದ ಬೆಲೆಗಳನ್ನು

ಸೂಚಿಸುತ್ತವೆ. ೧೯೧೭ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ತೀವ್ರ ಆರ್ಥಿಕ ಕುಸಿತ ಸಂಭವಿಸಿ ಬೆಲೆಗಳಲ್ಲಿ ವ್ಯತ್ಯಾಸ ಕಂಡುಬಂದಿತು. ಕೋಷ್ಟಕ ೮.೭ ರಲ್ಲಿ ೧೯೧೭–೧೮ ರಿಂದ ೧೯೨೫–೨೬ರ ವರೆಗಿನ ವರ್ಷಗಳಲ್ಲಿ ₹ ಒಂದಕ್ಕೆ ದೊರಕುತ್ತಿದ್ದ ಆಹಾರ ಪದಾರ್ಥಗಳ ವಿವರಗಳನ್ನು ನೀಡಿದೆ.

**ಕೋಷ್ಟಕ ೮.೭: ಜಿಲ್ಲೆಯಲ್ಲಿ ೧೯೧೭–೧೮ ರಿಂದ ೧೯೨೫–೨೬ರವರೆಗೆ ಲಭ್ಯವಿದ್ದ ಆಹಾರ ಪದಾರ್ಥಗಳ ವಿವರ**

**₹ ಒಂದಕ್ಕೆ ಸೇರುಗಳಲ್ಲಿ**

| ಸರಕುಗಳು | ೧೯೧೭–೧೮ | ೧೯೨೦ | ೧೯೨೨–೨೩ | ೧೯೨೩–೨೪ | ೧೯೨೫–೨೬ |
|---|---|---|---|---|---|
| ಅಕ್ಕಿ | ೬.೬೪ | ೪.೬೩ | ೪.೮೮ | ೪.೭೦ | ೪.೬೦ |
| ರಾಗಿ | ೧೪.೭೬ | ೭.೪೭ | ೯.೫೨ | ೮.೫೧ | ೮.೦೦ |
| ಜೋಳ | – | – | ೯.೫೨ | ೮.೩೮ | ೭.೩೦ |
| ಕಡಲೆ | – | – | ೪.೮೮ | ೫.೮೮ | – |

ಅಮೇರಿಕಾದಲ್ಲಿ ೧೯೩೦ರಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟು ನಿಶ್ಚಿತ ಆದಾಯ ವರ್ಗದವರನ್ನು ಹೊರತುಪಡಿಸಿ ಕೃಷಿ, ವ್ಯಾಪಾರ ಹಾಗೂ ಕೈಗಾರಿಕಾ ಕ್ಷೇತ್ರಗಳ ಮೇಲೆ ಕೆಟ್ಟ ಪರಿಣಾಮ ಬೀರಿತು. ಈ ಕ್ಷೇತ್ರಗಳ ಮೇಲಾದ ದುಷ್ಪರಿಣಾಮಗಳನ್ನು ಹೋಗಲಾಡಿಸಲು ಕೆಲವು ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ಸ್ಥಿತಿ ಎರಡನೆಯ ಪ್ರಾಪಂಚಿಕ ಯುದ್ಧದವರೆಗೂ ಮುಂದುವರಿದಿತ್ತು. ಈ ಯುದ್ಧದ ತರುವಾಯ ಆರ್ಥಿಕಾಭಿವೃದ್ಧಿಯಲ್ಲಿ ತೀವ್ರತೆ ಕಂಡುಬಂದಿತು ಹಾಗೂ ಬೆಲೆ ಏರಿಕೆಯು ಆರಂಭಗೊಂಡಿತು. ಮತ್ತೆ ಮಾರುಕಟ್ಟೆಯ ಸ್ಥಿತಿಗಳನ್ನು ಆಧರಿಸಿ ಬೆಲೆಗಳು ಹೆಚ್ಚಾಗಬಹುದೆಂದು ಊಹಿಸಿ ದಾಸ್ತಾನುಗಾರರು ಅಗತ್ಯಕ್ಕಿಂತ ಹೆಚ್ಚಾಗಿ ಅಗತ್ಯ ವಸ್ತುಗಳನ್ನು ಸಂಗ್ರಹಿಸಿದರು. ಇದರಿಂದಾಗಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿದ್ದರಿಂದ ಸರ್ಕಾರವು ಹಲವು ಬೆಲೆ ನಿಯಂತ್ರಣ ಹಾಗೂ ವಿತರಣೆ ಕ್ರಮಗಳನ್ನು ಕೈಗೊಂಡಿತು. ೧೯೩೦ರಲ್ಲಿ ಸರಾಸರಿ ಅಗತ್ಯ ವಸ್ತುಗಳ ಬೆಲೆ ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳಲ್ಲಿ ಒಂದು ₹ ಗೆ ಎಂಟರಿಂದ ಹತ್ತು ಸೇರು ಅಕ್ಕಿ ಲಭ್ಯವಿತ್ತು. ಯಳಂದೂರಿನಲ್ಲಿ ೧೫ ರಿಂದ ೨೩ ಸೇರು ಜೋಳ ಹಾಗೂ ೧೬ ರಿಂದ ೨೫ ಸೇರು ರಾಗಿ ಲಭ್ಯವಿತ್ತೆಂದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಅಲ್ಲದೆ ಯುದ್ಧದ ಸಂದರ್ಭದಲ್ಲಿ (೧೯೩೯–೪೦) ₹ ಗೆ ಏಳರಿಂದ ಏಳುವರೆ ಸೇರು ಅಕ್ಕಿ ಲಭ್ಯವಿದ್ದಿತ್ತು, ಇದು ೧೯೪೪–೪೫ರಲ್ಲಿ ೩.೫ ಸೇರುಗಳಿಗೆ ಕಡಿಮೆಯಾಯಿತು.

ಮೊದಲ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಸಾಮಾನ್ಯವಾಗಿ ಬೆಲೆಯಲ್ಲಿ ಕುಸಿತ ಕಂಡು ಬಂದಿತು. ಆದರೆ ಎರಡನೇಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಿಧಾನವಾಗಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತು. ೧೯೬೩–೬೪ರ ವರೆಗೂ ಅಕ್ಕಿಯ ಬೆಲೆಯಲ್ಲಿ ಭಾರಿ ಹೆಚ್ಚಳ ಕಂಡು ಬಂದಿತು. ಆದರೆ ೧೯೬೯ರಲ್ಲಿ ಬೆಲೆಯಲ್ಲಿ ಸ್ವಲ್ಪ ಪ್ರಮಾಣದ ಇಳಿಕೆ ಕಂಡುಂಬಂದಿತು. ತರುವಾಯದ ಪಂಚವಾರ್ಷಿಕ ಯೋಜನೆಗಳಲ್ಲಿ ಸಂದರ್ಭಕ್ಕನುಸಾರವಾಗಿ ಬೆಲೆಯು ಗಗನಕ್ಕೆ ಏರಿತು. ಆದ್ದರಿಂದ ಸರ್ಕಾರ ಹಣದುಬ್ಬರದ ಪ್ರಮಾಣವನ್ನು ತಡೆಗಟ್ಟುವುದರ ಮೂಲಕ ಹಲವು ಬೆಲೆ ನಿಯಂತ್ರಣ ಕ್ರಮಗಳನ್ನು ಕೈಗೊಂಡಿತು. ೧೯೪೬–೪೭ರಲ್ಲಿ ₹ ಗೆ ಆರು ಸೇರು ರಾಗಿ ಅಥವಾ ಜೋಳ, ಮೂರುವರೆ ಸೇರು ಅಕ್ಕಿ ಲಭ್ಯವಿದ್ದರೆ, ೧೯೫೧–೫೨ರಲ್ಲಿ ನಾಲ್ಕರಿಂದ ಐದು ಸೇರು ರಾಗಿ ಅಥವಾ ಜೋಳ ಸಿಗುತ್ತಿತ್ತು. ೧೯೬೦–೬೧ರಲ್ಲಿ ಒಂದು ₹ ಗೆ ಎರಡು ಕಾಲು ಸೇರುಗಳಿಂದ (೨ ೧/೪) ಎರಡುವರೆ ಸೇರು (೨ ೧/೨) ರಾಗಿ ಅಥವಾ ಜೋಳ ಸಿಗುತ್ತಿದ್ದರೆ, ೧ ೧/೨ ರಿಂದ ೧ ೩/೪

ಸೇರು ಅಕ್ಕಿ ಸಿಗುತ್ತಿತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಂಡಿಸಿದ ಸತತ ಖೋತಾ ಆಯವ್ಯಯ ಮಂಡನೆ, ಜನಸಂಖ್ಯೆ ಹೆಚ್ಚಳ, ಪದೇ ಪದೇ ಸಂಭವಿಸಿದ ಬರಗಾಲ ಮತ್ತಿತರ ಅಂಶಗಳು ಬೆಲೆ ಏರಿಕೆಗೆ ಕಾರಣವಾಗಿವೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಇವರು ೧೯೬೨–೬೩ ರಲ್ಲಿ ರಾಜ್ಯಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಗಟು ಮತ್ತು ಚಿಲ್ಲರೆ ಬೆಲೆಗಳನ್ನು ಸಂಗ್ರಹಿಸಿ ಸಿದ್ಧಪಡಿಸಿದ್ದು, ಏಕದಳ ಮತ್ತು ತೃಣ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು ಹಾಗೂ ಇತರೆ ಹೀಗೆ ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದಾರೆ. ಆಯಾ ತಾಲೂಕುಗಳಲ್ಲಿನ ಆಯಾ ಹಳ್ಳಿಗಳಿಂದ ಈ ಅಂಕಿಅಂಶಗಳನ್ನು ಸಂಗ್ರಹಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೮ ರಲ್ಲಿ ೧೯೬೩ ರಿಂದ ೧೯೮೬ರ ವರೆಗೆ ಇದ್ದ ಅಗತ್ಯ ವಸ್ತುಗಳ ವಾರ್ಷಿಕ ಸರಾಸರಿ ಚಿಲ್ಲರೆ ಬೆಲೆಯನ್ನು ನೀಡಿದೆ.

**ಕೋಷ್ಟಕ ೮.೮: ಅಗತ್ಯ ವಸ್ತುಗಳ ವಾರ್ಷಿಕ ಸರಾಸರಿ ಚಿಲ್ಲರೆ ಬೆಲೆ (ಕೆ.ಜಿ.ಗೆ ₹ ಗಳಲ್ಲಿ)**

| ಪದಾರ್ಥಗಳು | ೧೯೬೩ | ೧೯೬೬ | ೧೯೬೯ | ೧೯೭೧ | ೧೯೭೩ | ೧೯೭೬ | ೧೯೭೮ | ೧೯೮೦ | ೧೯೮೨ | ೧೯೮೪ | ೧೯೮೫ | ೧೯೮೬ |
|---|---|---|---|---|---|---|---|---|---|---|---|---|
| ಭತ್ತ (ದಪ್ಪ) | ೦.೬೮ | ೧.೨೫ | ೧.೨೦ | ೧.೪೦ | ೧.೮೯ | ೧.೪೯ | ೧.೮೦ | ೨.೦೪ | ೨.೭೭ | ೩.೨೦ | ೩.೩೭ | ೩.೬೧ |
| ರಾಗಿ | ೦.೪೨ | ೦.೯೯ | ೦.೯೦ | – | ೧.೩೦ | ೧.೧೬ | ೧.೧೧ | ೧.೩೮ | ೧.೮೨ | ೧.೮೭ | ೧.೯೮ | ೨.೧೪ |
| ಜೋಳ | ೦.೪೬ | ೦.೮೫ | ೦.೮೦ | ೦.೯೫ | ೧.೨೪ | ೧.೦೯ | ೦.೯೯ | ೧.೨೭ | ೧.೫೩ | ೧.೬೯ | ೧.೬೯ | ೧.೮೮ |
| ತೊಗರಿ ಕಾಳು | ೦.೭೫ | ೦.೮೫ | ೧.೦೮ | ೧.೨೯ | ೧.೫೪ | ೧.೮೪ | ೩.೬೨ | ೩.೭೫ | – | ೪.೪೦ | ೪.೧೧ | ೩.೮೮ |
| ಹುರಳಿ | ೦.೪೦ | ೦.೮೩ | ೦.೮೬ | – | ೧.೨೩ | ೧.೧೭ | ೧.೧೮ | ೧.೬೯ | ೨.೩೩ | ೨.೪೩ | ೨.೯೩ | ೨.೮೭ |
| ಕಡಲೆ | ೦.೬೦ | ೧.೬೭ | ೧.೨೩ | ೧.೨೧ | ೧.೮೪ | ೧.೮೬ | ೨.೮೬ | ೪.೦೧ | ೪.೪೬ | ೫.೨೭ | ೬.೨೪ | ೬.೪೨ |
| ಗುರ್ (Gur) (ಉತ್ತಮದರ್ಜೆ) | ೧.೨೨ | ೧.೦೫ | ೧.೪೮ | ೧.೪೭ | ೧.೯೮ | ೨.೪೧ | ೧.೮೬ | ೪.೨೭ | ೩.೪೭ | ೪.೬೧ | ೪.೩೯ | ೪.೯೬ |
| ಶೇಂಗಾ ಎಣ್ಣೆ | ೧.೮೫ | ೪.೧೭ | ೪.೫೦ | ೪.೩೧ | ೭.೮೦ | ೬.೧೫ | ೭.೩೬ | ೧೦.೫೮ | ೧೩.೬೯ | ೧೬.೪೬ | ೧೫.೦೦ | – |
| ಅರಳೆಣ್ಣೆ | ೨.೦೫ | ೩.೫೭ | ೩.೫೬ | ೩.೭೩ | – | ೬.೬೩ | ೬.೧೫ | ೮.೫೯ | ೧೦.೨೮ | ೧೫.೭೮ | ೧೨.೮೦ | ೧೧.೬೨ |
| ಆಲೂಗೆಡ್ಡೆ | ೦.೫೦ | ೦.೭೮ | ೦.೭೦ | ೦.೬೪ | ೧.೧೧ | ೧.೧೮ | ೧.೪೬ | ೨.೦೦ | ೧.೯೫ | ೨.೧೪ | ೧.೯೧ | ೩.೪೨ |
| ಈರುಳ್ಳಿ | ೦.೩೬ | ೦.೪೩ | ೦.೫೦ | ೦.೩೭ | ೦.೭೫ | ೦.೭೪ | ೦.೭೯ | ೦.೯೯ | ೧.೩೪ | ೧.೩೫ | ೧.೫೮ | ೧.೯೫ |
| ಬಾಳೆಹಣ್ಣು (ಡಜ಼ನ್‌ಗೆ) | ೦.೯೧ | ೦.೯೫ | ೧.೨೨ | ೦.೮೫ | ೧.೨೫ | ೨.೫೪ | ೧.೭೧ | ೨.೬೬ | ೩.೭೪ | ೩.೬೮ | ೨.೭೯ | ೩.೪೯ |
| ಒಣಮೆಣಸಿನ ಕಾಯಿ | ೩.೧೩ | ೪.೫೫ | ೪.೨೪ | ೪.೮೪ | ೫.೦೩ | ೯.೭೮ | ೮.೬೨ | ೭.೫೬ | ೧೦.೩೫ | ೧೩.೧೯ | ೧೬.೬೪ | ೧೧.೫೨ |
| ಹೊಗೆಸೊಪ್ಪು ಎಲೆ | ೫.೦೮ | ೩.೯೮ | – | ೬.೭೩ | ೮.೪೯ | ೧೨.೫೦ | – | – | – | – | – | – |
| ಹುಣಸೆಹಣ್ಣು | ೦.೯೮ | ೧.೨೩ | ೧.೭೨ | ೨.೪೮ | ೩.೦೨ | ೨.೯೨ | ೫.೯೭ | ೭.೪೧ | ೬.೩೩ | ೧೧.೪೮ | ೭.೯೬ | ೮.೮೩ |
| ಬೆಳ್ಳುಳ್ಳಿ | ೧.೦೫ | ೧.೪೫ | ೧.೫೬ | ೧.೬೬ | ೨.೧೩ | ೧.೯೯ | ೫.೫೩ | ೩.೩೭ | – | ೭.೦೧ | ೫.೩೩ | – |

**ರೇಷ್ಮೆ ಬೆಲೆ:** ಕೊಳ್ಳೇಗಾಲ ರೇಷ್ಮೆ ಮಾರುಕಟ್ಟೆ ಕೇಂದ್ರದಲ್ಲಿ ವಿವಿಧ ರೇಷ್ಮೆ ತಳಿಯ ಕಚ್ಚಾ ರೇಷ್ಮೆ ಮಾರಾಟ ಮಾಡಲಾಗಿದ್ದು, ಕೊಳ್ಳೇಗಾಲ ಪ್ರದೇಶವು ಹೆಚ್ಚು ಮಳೆಯಾಧಾರಿತ ಪ್ರದೇಶವಾಗಿದ್ದು, ಮಳೆಯನ್ನೇ ಆಶ್ರಯಿಸಿ ರೇಷ್ಮೆ ಬೆಳೆಯಲಾಗುತ್ತಿದೆ. ಋತುಮಾನಕ್ಕನುಗುಣವಾಗಿ ರೇಷ್ಮೆ ಉತ್ಪಾದನೆಯಲ್ಲಿ ಏರಿಳಿತ ಉಂಟಾಗುತ್ತಿದ್ದು, ರೇಷ್ಮೆ ಬೆಲೆಯಲ್ಲಿ ಸಹ ಏರಿಳಿತ ಉಂಟಾಗಲು ಕಾರಣವಾಗಿದೆ. ಕೋಷ್ಟಕ ೮.೯ ರಲ್ಲಿ ೧೯೮೦–೮೧ ರಿಂದ ೧೯೮೬–೮೭ರ ವರೆಗೆ ರೇಷ್ಮೆ ಬೆಲೆಯಲ್ಲಿ ಉಂಟಾದ ಏರಿಳಿತಗಳನ್ನು ನೀಡಲಾಗಿದೆ.

**ಕೋಷ್ಟಕ ೮.೯ ರಲ್ಲಿ ೧೯೮೦–೮೧ ರಿಂದ ೧೯೮೬–೮೭ರ ವರೆಗೆ ಕೊಳ್ಳೇಗಾಲ ರೇಷ್ಮೆ ಮಾರುಕಟ್ಟೆ ಕೇಂದ್ರದಲ್ಲಿ ಮಾರಾಟಗೊಂಡ ರೇಷ್ಮೆ ಬೆಲೆಯ ವಿವರ**

| ವರ್ಷ | ಫಿಲೇಚರ್ | | ಚರಕ | | ಡ್ಯೂಪಿನ್ | |
|---|---|---|---|---|---|---|
| | ಕನಿಷ್ಟ | ಗರಿಷ್ಟ | ಕನಿಷ್ಟ | ಗರಿಷ್ಟ | ಕನಿಷ್ಟ | ಗರಿಷ್ಟ |
| ೧೯೮೦–೮೧ | ೨೭೦ | ೩೭೫ | ೧೩೨ | ೨೯೫ | ೭೦ | ೧೬೦ |
| ೧೯೮೧–೮೨ | ೨೮೧ | ೬೫೦ | ೧೬೫ | ೫೪೧ | ೬೦ | ೩೪೫ |
| ೧೯೮೨–೮೩ | ೧೫೦ | ೫೬೦ | ೧೯೦ | ೪೫೦ | ೧೨೦ | ೨೫೦ |
| ೧೯೮೩–೮೪ | ೩೫೦ | ೫೬೦ | ೨೪೦ | ೪೬೦ | ೧೦೦ | ೩೨೦ |
| ೧೯೮೪–೮೫ | ೩೯೦ | ೬೦೦ | ೨೬೦ | ೪೮೦ | ೧೯೦ | ೩೨೦ |
| ೧೯೮೫–೮೬ | ೪೫೦ | ೬೨೦ | ೩೧೭ | ೫೦೦ | ೧೮೦ | ೩೩೦ |
| ೧೯೮೬–೮೭ | ೪೩೦ | ೬೪೫ | ೨೭೫ | ೪೭೫ | ೧೬೦ | ೩೪೫ |

ಜಿಲ್ಲೆಯಲ್ಲಿ ಅಗತ್ಯ ವಸ್ತುಗಳ ಚಿಲ್ಲರೆ ಬೆಲೆ ಪ್ರತಿ ಕೆ.ಜಿ.ಗೆ ೨೦೦೧ರಲ್ಲಿ ಅಕ್ಕಿ (ಉತ್ತಮ) ₹ ೧೪.೯೭, ಅಕ್ಕಿ (ಮಧ್ಯಮ) ₹ ೧೧.೮೩, ಜೋಳ ₹ ೪.೫೦, ಉದ್ದು ₹ ೩೦.೦೬, ಹುರಳಿ ₹ ೯.೭೮, ಒಣಮೆಣಸಿನ ಕಾಯಿ ₹ ೫೭.೦೦, ಗೋಧಿ ₹ ೯.೮೯, ಹುಣಿಸೆಹಣ್ಣು ₹ ೧೮.೪೪ ಹಾಗೂ ಹರಳು ₹ ೧೪.೧೧ಕ್ಕೆ ಲಭ್ಯವಿದ್ದರೆ, ಇವುಗಳ ಬೆಲೆ ಕ್ರಮವಾಗಿ ೨೦೦೫ರಲ್ಲಿ ₹ ೨೨.೮೩, ₹ ೧೭.೬೩, ₹ ೫.೮೩, ₹ ೩೩.೧೭, ₹ ೯.೨೧, ₹ ೫೦.೫೦, ₹ ೧೩.೧೯, ₹೨೪.೭೧ ಹಾಗೂ ₹ ೧೬.೪೨ಗಳಿಗೆ ಲಭ್ಯವಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೦ ಅನ್ನು ನೋಡಿ.

**ಕೋಷ್ಟಕ ೮.೧೦ ಚಾಮರಾಜನಗರ ಜಿಲ್ಲೆಯಲ್ಲಿ ೨೦೦೧ ರಿಂದ ೨೦೦೯ರ ವರೆಗೆ ಅಗತ್ಯ ವಸ್ತುಗಳ ಚಿಲ್ಲರೆ ಬೆಲೆ**

**(ಕೆ.ಜಿ.ಗೆ ₹ ಗಳಲ್ಲಿ)**

| ಕ್ರ.ಸಂ. | ಪದಾರ್ಥಗಳು | ವರ್ಷ | | | | | | |
|---|---|---|---|---|---|---|---|---|
| | | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ | ೨೦೦೮ | ೨೦೦೯ |
| ೧ | ಅಕ್ಕಿ (ಉತ್ತಮ) | ೧೪.೯೭ | ೧೭.೮೮ | ೧೮.೪೬ | ೧೮.೬೩ | ೨೨.೮೩ | ೨೬.೨೯ | ೩೮.೦೦ |
| ೨ | ಅಕ್ಕಿ (ಮಧ್ಯಮ) | ೧೧.೮೩ | ೧೪.೯೨ | ೧೪.೪೦ | ೧೪.೮೧ | ೧೭.೬೩ | ೨೨.೩೮ | ೨೯.೦೦ |

ಮುಂದುವರೆದಿದೆ

**ಕೋಷ್ಟಕ ೮.೧೦ (ಮುಂದುವರೆದಿದೆ)**

| ಕ್ರ.ಸಂ. | ಪದಾರ್ಥಗಳು | ವರ್ಷ | | | | | | |
|---|---|---|---|---|---|---|---|---|
| | | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ | ೨೦೦೮ | ೨೦೦೯ |
| ೩ | ಜೋಳ (ಬಿಳಿ) | ೪.೫೦ | ೫.೫೨ | ೬.೬೭ | ೬.೪೨ | ೫.೮೩ | ೮.೯೬ | ೧೧.೦೦ |
| ೪ | ಉದ್ದು | ೩೦.೦೬ | ೩೦.೭೧ | ೧೭.೧೩ | ೨೫.೭೯ | ೩೩.೧೭ | ೩೮.೩೩ | ೪೮.೦೦ |
| ೫ | ಹುರುಳಿ | ೯.೭೮ | ೯..೯೬ | ೯.೬೭ | ೯.೪೪ | ೯.೨೧ | ೧೪.೫೪ | ೨೫.೦೦ |
| ೬ | ಅಲಸಂದೆ | ೧೪.೯೪ | ೧೭.೬೭ | ೨೧.೧೩ | ೧೪.೭೫ | ೧೬.೫೪ | ೨೫.೭೫ | ೨೬.೦೦ |
| ೭ | ಒಣಮೆಣಸಿನ ಕಾಯಿ | ೫೭.೦೦ | ೫೬.೬೦ | ೬೦.೪೬ | ೬೩.೮೦ | ೫೦.೫೦ | ೬೨.೪೨ | ೭೫.೦೦ |
| ೮ | ಈರುಳ್ಳಿ | ೭.೮೯ | ೮.೩೩ | ೭.೭೧ | ೮.೦೮ | ೮.೬೭ | ೧೦.೭೭ | ೧೯.೦೦ |
| ೯ | ಆಲೂಗೆಡ್ಡೆ | ೮.೧೪ | ೮.೯೨ | ೯.೩೮ | ೮.೬೦ | ೮.೧೭ | ೧೦.೧೪ | ೧೪.೬೭ |
| ೧೦ | ತೆಂಗಿನಕಾಯಿ(೧ಕ್ಕೆ) | ೩.೯೪ | ೫.೫೮ | ೫.೭೫ | ೯.೫೨ | ೬.೫೦ | ೫.೫೦ | ೮.೦೦ |
| ೧೧ | ಸಜ್ಜೆ | ೪.೫೬ | ೫.೧೯ | ೬.೧೪ | – | – | – | – |
| ೧೨ | ಗೋಧಿ | ೯.೮೯ | ೧೦.೨೩ | ೧೨.೮೩ | ೧೨.೭೫ | ೧೩.೧೯ | ೧೮.೪೨ | ೨೦.೦೦ |
| ೧೩ | ಹುಣಸೆಹಣ್ಣು | ೧೮.೪೪ | ೧೩.೨೮ | ೧೬.೧೩ | ೨೬.೫೦ | ೨೪.೭೧ | ೨೭.೯೨ | ೩೦.೦೦ |
| ೧೪ | ಹರಳು | ೧೪.೧೧ | ೧೫.೯೬ | ೧೮.೦೦ | ೧೮.೩೮ | ೧೬.೪೨ | ೨೬.೪೩ | ೨೬.೦೦ |

## ಸಗಟು ಬೆಲೆ

ಅಗತ್ಯ ವಸ್ತುಗಳ ಸಗಟು ಬೆಲೆಗಳಿಗಿಂತ ಚಿಲ್ಲರೆ ಬೆಲೆಯಲ್ಲಿ ವ್ಯತ್ಯಾಸ ಉಂಟಾಗಲು ಹಲವು ಅಂಶಗಳು ಪ್ರೇರೇಪಿಸುತ್ತವೆ. ಸಗಟು ಬೆಲೆ ಚಿಲ್ಲರೆ ಬೆಲೆಗಳಿಗಿಂತ ಸೂಕ್ಷ್ಮವಾಗಿರುತ್ತವೆ ಎಂದು ಕೈಗಾರಿಕೆಗಳ ಹಾಗೂ ವ್ಯಾಪಾರದ ಸ್ಥಿತಿಗತಿಗಳ ಆಧಾರದಲ್ಲಿ ಹೇಳಲಾಗುತ್ತದೆ. ೧೯೦೫ ರಿಂದ ಬೆಲೆಗಳು ಇಡೀ ವಿಶ್ವದಲ್ಲೆಲ್ಲಾ ಏರಿಕೆ ಕಂಡುಬಂದಿದೆ. ಹೀಗೆ ಜಿಲ್ಲೆಯಲ್ಲಿ ೧೮೯೭ ರಲ್ಲಿ ಸರಾಸರಿ ವಾರ್ಷಿಕ ಅಗತ್ಯ ವಸ್ತುಗಳ ಬೆಲೆಯನ್ನು (ಹತ್ತು ಮಾಂಡ್‌ಗೆ ₹ ಗಳಲ್ಲಿ) ನೀಡಲಾಗಿದೆ. ಅಕ್ಕಿ ₹ ೪೨.೩೮, ಜೋಳ ₹ ೨೩.೪೬, ರಾಗಿ ₹ ೨೦.೮೪, ಕಡಲೆ ₹ ೨೫.೧೦, ಎಳ್ಳು (Sesamum) ₹ ೬೦.೫೨, ತುಪ್ಪ ₹ ೩೪೮.೪೭, ಹತ್ತಿ ₹ ೧೯೫.೭೨, ತಂಬಾಕು ₹ ೩೭೪.೦೦ (೧೦ ಮಾಂಡಿಗೆ ಆಕ್ಟ್ರಯ್ ಸುಂಕ ₹ ೧೦೩.೦೦ ಸೇರಿದಂತೆ) ಅರಿಶಿನ ₹ ೯೨.೩೩, ಒಂದು ಜೊತೆ ಉಳುವ ಎತ್ತುಗಳಿಗೆ ₹ ೫೬.೮೭ ಆಗಿತ್ತು. ೧೮೯೮ ರಿಂದ ೧೯೧೩ರ ನಡುವೆ ಇದ್ದ ಅಗತ್ಯ ವಸ್ತುಗಳ ಸರಾಸರಿ ಸಗಟು ಬೆಲೆಯನ್ನು ಕೋಷ್ಟಕ ೮.೧೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೧: ೧೮೯೮ ರಿಂದ ೧೯೧೩ರ ವರೆಗೆ ಅಗತ್ಯ ವಸ್ತುಗಳ ಸಟಗು ಬೆಲೆ**

**(೧೦ ಮಾಂಡ್‌ಗೆ ₹ ಗಳಲ್ಲಿ)**

| ಆಹಾರ ಧಾನ್ಯಗಳು | ೧೮೯೮ | ೧೮೯೯ | ೧೯೦೦ | ೧೯೦೪ | ೧೯೦೫ | ೧೯೦೬ | ೧೯೦೭ | ೧೯೦೯ | ೧೯೧೧ | ೧೯೧೨ | ೧೯೧೩ |
|---|---|---|---|---|---|---|---|---|---|---|---|
| ಅಕ್ಕಿ | ೪೨.೬ | ೩೭.೮ | ೪೭.೫ | ೩೩.೨ | ೪೧.೩ | ೪೭.೨ | ೪೮.೪ | ೫೧.೯ | ೪೭.೩ | ೬೨.೮ | ೬೧.೩ |
| ಜೋಳ | ೧೬.೨ | ೨೨.೫ | ೨೭.೭ | ೧೨.೩ | ೨೨.೪ | ೨೮.೩ | ೨೩.೯ | ೩೨.೨ | ೨೩.೩ | ೨೮.೨ | ೨೬.೯ |
| ರಾಗಿ | ೨೨.೦ | ೨೨.೯ | ೩೦.೮ | ೧೪.೮ | ೨೩.೩ | ೨೭.೭ | ೨೪.೯ | ೩೨.೫ | ೨೩.೨ | ೨೮.೮ | ೨೬.೯ |
| ಕಡಲೆ | ೨೫.೮ | ೧೬.೦ | ೨೯.೧ | ೧೬.೮ | ೨೭.೮ | ೨೭.೮ | ೨೩.೫ | ೩೭.೨೪ | ೨೪.೭ | ೨೬.೩ | ೨೭.೨ |
| ಎಳ್ಳು | ೫೪.೪ | ೫೫.೧ | ೭೪.೮ | ೪೮.೩ | ೬೨.೯ | ೭೩.೨ | ೬೮.೪ | ೬೮.೨೨ | ೭೧.೩ | ೭೨.೯ | ೭೯.೩ |
| ತುಪ್ಪ | ೩೪೯.೪ | ೩೩೨.೫ | ೩೬೯.೨ | ೩೧೫.೩ | ೩೬೩.೯ | ೪೫೪.೭ | ೪೪೨.೪ | ೪೭೩.೬ | ೪೫೪.೩ | ೪೭೨.೯ | ೫೭೫.೪ |
| ಹತ್ತಿ | ೧೭೭.೩ | ೧೧೭.೪ | ೧೩೬.೦ | ೧೪೮.೦ | ೧೮೬.೯ | ೧೮೮.೬ | ೧೮೨.೮ | ೧೬೭.೩ | ೨೦೫.೬ | ೧೯೨.೮ | ೧೭೪.೩ |
| ತಂಬಾಕು | ೩೭೪.೦ | ೩೯೪.೮ | ೩೭೫.೧ | ೨೬೭.೮ | ೨೮೦.೫ | ೨೮೦.೨ | ೨೨೪.೮ | ೨೦೫.೩ | ೧೯೭.೧ | ೨೦೦.೩ | ೨೦೫.೭ |
| ಹುಣಸೆ ಹಣ್ಣು | ೧೦೭.೮ | ೧೨೪.೫ | ೧೨೨.೯ | ೬೫.೭ | ೮೮.೧ | ೧೦೦.೧ | ೧೦೬.೩ | ೧೦೦.೫ | ೧೧೫.೭ | ೧೨೦.೦ | ೧೨೦.೦ |
| ಒಂದು ಜೊತೆ ಎತ್ತುಗಳಿಗೆ | ೭೦.೦ | ೭೦.೦ | ೭೦.೦ | ೭೦.೦ | ೭೦.೦ | ೭೦.೦ | ೭೦.೦ | ೧೦೦.೦ | ೧೦೦.೦ | ೧೦೦.೦ | ೧೦೦.೦ |

***(೧೦ ಮಾಂಡ್‌ಗೆ ₹ ೧೦೩ ಆಕ್ಟ್ರಾಯ್ ಸುಂಕವು ಸೇರಿದಂತೆ)***

ಜಿಲ್ಲೆಯಲ್ಲಿ ೧೯೧೬ರ ಸುಗ್ಗಿಯ ಅವಧಿಯಲ್ಲಿ ಅಗತ್ಯ ವಸ್ತುಗಳ ಸಗಟುಬೆಲೆ ಮೈಸೂರು ನಗರ ಹಾಗೂ ಅದರ ಇತರೆ ತಾಲೂಕುಗಳಲ್ಲಿ ೧೯೧೭–೧೮ರ ಸಾಲಿಗಿಂತ ಕಡಿಮೆಯಿತ್ತು. ೧೯೨೦ರ ದಶಕ ಹಾಗೂ ೧೯೩೦ರ ದಶಕಗಳ ನಡುವೆ ಹೋಲಿಸಿದರೆ ೧೯೨೦ರ ದಶಕದಲ್ಲಿ ಅಸಹಜ ರೀತಿಯಲ್ಲಿ ಬೆಲೆ ಹೆಚ್ಚಳ ಕಂಡುಬಂದಿದೆ. ಜಿಲ್ಲೆಯಲ್ಲಿ ೧೯೧೭–೧೮ರಲ್ಲಿ ಆಹಾರ ಪದಾರ್ಥಗಳ ಬೆಲೆ ೧೦೦ ಸೇರುಗಳ ಪಲ್ಲಕ್ಕೆಗಳಲ್ಲಿ ಹೀಗಿದೆ. ಚಾಮರಾಜನಗರ ತಾಲೂಕಿನಲ್ಲಿ ಅಕ್ಕಿ (ಉತ್ತಮ) ₹ ೨೧.೦೦ ಆಗಿದ್ದರೆ, ಅಕ್ಕಿ (ಮಧ್ಯಮ) ₹ ೧೬.೦೦, ಹುರಳಿ ₹ ೭.೦೦, ಕಡಲೆ ₹ ೧೫.೦೦, ಎಣ್ಣೆಕಾಳುಗಳು ₹ ೯.೭, ರಾಗಿ ₹ ೭.೦೦, ಜೋಳ ₹ ೯.೦೦ ಹಾಗೂ ಭತ್ತ (೧೯೧೬–೧೭) ₹ ೫.೦ಕ್ಕೆ ಸಿಗುತ್ತಿತ್ತು. ಹಾಗೆಯೇ ಗುಂಡ್ಲುಪೇಟೆಯಲ್ಲಿ ಕ್ರಮವಾಗಿ ₹ ೨೨.೦೦, ₹ ೧೭.೦೦, ₹ ೭.೦೦, ₹ ೧೫.೦೦, ₹ ೯.೭, ₹ ೭.೦, ₹ ೯.೦೦ ಹಾಗೂ ₹ ೫.೦೦ ಗಳಾಗಿತ್ತು.

೧೯೨೦ರಲ್ಲಿ ಹಾಗೂ ಈ ದಶಕದ ಮುಕ್ತಾಯದವರೆಗೆ ಅಗತ್ಯ ವಸ್ತುಗಳ ಸಗಟು ಬೆಲೆ ಹೆಚ್ಚಾಗುವುದಕ್ಕೆ ಮೊದಲು ಸಣ್ಣ ಪ್ರಮಾಣದಲ್ಲಿ ನಿಂತು (intermittent) ಏರಿಕೆಯಾಗುತ್ತಿದ್ದುದ್ದು ಕಂಡುಬಂದಿದೆ. ೧೯೩೦ರ ದಶಕದಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನ ಫಲವಾಗಿ ಬೆಲೆಗಳಲ್ಲಿ ಹೆಚ್ಚಳ ಕಂಡುಬಂದಿತು. ಎರಡನೇ ಜಾಗತಿಕ ಯುದ್ಧ ಹಾಗೂ ಅದರ ಪೂರ್ವದಲ್ಲೂ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತ್ತು. ಆದರೆ ಯುದ್ಧದ ನಂತರ ನಿರೀಕ್ಷೆಯಂತೆ ಸಾಮಾನ್ಯ ಜನರಿಗೆ ಪ್ರತಿಕೂಲವಾಗದಂತೆ ಬೆಲೆಯಲ್ಲಿ ಇಳಿಕೆ ಕಂಡುಬಂದಿತು. ಕೋಷ್ಟಕ ೮.೧೨ ರಲ್ಲಿ ೧೯೨೩–೨೪ ರಿಂದ ೧೯೪೬–೪೭ರ ವರೆಗಿನ ಅಗತ್ಯ ವಸ್ತುಗಳ ಬೆಲೆಯನ್ನು ಇಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೨ ರಲ್ಲಿ ೧೯೨೩-೨೪ ರಿಂದ ೧೯೪೬-೪೭ರವರೆಗೆ ಇದ್ದ ಅಗತ್ಯ ವಸ್ತುಗಳ ಬೆಲೆ**
**(೧೦೦ ಸೇರುಗಳ ಪಲ್ಲಕ್ಕೆ ₹ ಗಳಲ್ಲಿ)**

| ವರ್ಷ | ಅಕ್ಕಿ ಉತ್ತಮ ದರ್ಜೆ | ಅಕ್ಕಿ ಮಧ್ಯಮ ದರ್ಜೆ | ರಾಗಿ | ಜೋಳ | ಕಡಲೆ | ಉಪ್ಪು |
|---|---|---|---|---|---|---|
| ೧೯೨೩-೧೯೨೪ | ೨೩.೬ | ೧೯.೭ | ೧೧.೮ | ೧೧.೯ | ೧೬.೨ | ೧೦.೩ |
| ೧೯೨೫-೧೯೨೬ | ೨೫.೫ | ೨೧.೩ | ೧೨.೨ | ೧೩.೬ | ೧೬.೫ | ೮.೧ |
| ೧೯೨೮-೧೯೨೯ | ೨೫.೩ | ೧೭.೮ | ೧೧.೫ | ೧೧.೦ | ೨೦.೩ | ೮.೦ |
| ೧೯೨೯-೧೯೩೦ | ೨೧.೩ | ೧೭.೧ | ೧೦.೮ | ೧೦.೦ | ೨೧.೦ | ೮.೦ |
| ೧೯೩೦-೧೯೩೧ | ೧೮.೮ | ೧೪.೦ | ೬.೬ | ೬.೩ | ೧೭.೨ | ೭.೬ |
| ೧೯೩೧-೧೯೩೨ | ೧೩.೮ | ೧೨.೦ | ೫.೭ | ೫.೯ | ೧೧.೨ | ೭.೫ |
| ೧೯೩೩-೧೯೩೪ | ೧೦.೨ | ೯.೧ | ೫.೦ | ೫.೦ | ೧೧.೩ | ೮.೦ |
| ೧೯೩೭-೧೯೩೮ | ೧೨.೮ | ೧೨.೦ | ೫.೫ | ೬.೩ | ೧೦.೦ | ೭.೫ |
| ೧೯೩೯-೧೯೪೦ | ೧೩.೫ | ೧೧.೯ | ೬.೩ | ೬.೫ | ೧೨.೦ | ೮.೦ |
| ೧೯೪೧-೧೯೪೨ | ೧೮.೫ | ೧೫.೬ | ೬.೫ | ೬.೫ | ೧೫.೭ | ೮.೪ |
| ೧೯೪೨-೧೯೪೩ | ೨೦.೮ | ೧೮.೫ | ೮.೯ | ೬.೫ | ೨೮.೮ | ೮.೪ |
| ೧೯೪೩-೧೯೪೪ | ೨೫.೮ | ೨೩.೯ | ೧೩.೫ | ೧೪.೬ | ೪೩.೧ | ೧೨.೦ |
| ೧೯೪೪-೧೯೪೫ | ೨೮.೩ | ೨೩.೫ | ೧೪.೩ | ೧೪.೬ | ೪೮.೩ | ೧೦.೫ |
| ೧೯೪೬-೧೯೪೭ | ೩೩.೪ | ೨೮.೫ | ೧೬.೫ | ೧೬.೫ | ೫೦.೦ | ೧೨.೦ |

ಜಿಲ್ಲೆಯಲ್ಲಿ ಸ್ವಾತಂತ್ರ್ಯಾನಂತರ ೧೯೫೦-೫೧ರಲ್ಲಿ ಚಾಮರಾಜನಗರ ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳಲ್ಲಿ ಸಗಟು ಬೆಲೆ ಪ್ರತಿ ಮಾಂಡ್ (೩೨೦೦ ತೊಲ) ಅಕ್ಕಿಗೆ ₹೧೬ ರಿಂದ ₹೧೬.೬೬ಗಳಾಗಿದ್ದರೆ, ರಾಗಿ ಹಾಗೂ ಜೋಳ ₹೧೦.೦೦ ರಿಂದ ₹೧೨ ಗಳಾಗಿತ್ತು. ತೆರಕಣಾಂಬಿ (ಗುಂಡ್ಲುಪೇಟೆ ತಾ॥) ಹಾಗೂ ಸಂತೇಮರಳ್ಳಿ (ಚಾಮರಾಜನಗರ ತಾ॥) ಮಾರುಕಟ್ಟೆ ಕೇಂದ್ರಗಳಲ್ಲಿ ೧೯೫೪-೫೫ ರಿಂದ ೧೯೫೮-೫೯ರ ವರೆಗೆ ಭತ್ತ ₹೧೨.೭೭ ಗಳಾಗಿದ್ದರೆ, ರಾಗಿ ₹೧೦.೮೭, ಕಡಲೆಕಾಯಿ ₹೧೭.೪೬, ಹುರಳಿ ₹೧೦.೫೩, ಜೋಳ ₹೧೨.೯೧, ರೇಷ್ಮೆ ₹೪೦.೦೦, ತೆಂಗಿನಕಾಯಿ (೧೦೦೦ಕ್ಕೆ) ₹೧೮೮.೮೫ ಗಳಾಗಿತ್ತು. ೧೯೬೦-೬೧ರಲ್ಲಿ ಯಳಂದೂರು, ಚಾಮರಾಜನಗರ ಹಾಗೂ ಗುಂಡ್ಲುಪೇಟೆಗಳಲ್ಲಿ ಜೋಳದ ಬೆಲೆ ಕ್ರಮವಾಗಿ ₹೩೬.೪೦, ₹೪೫.೦ ಮತ್ತು ₹೩೫.೦೦ ಆಗಿತ್ತು. ಹಾಗೆಯೇ ೩೨೦೦ ತೊಲದ ಒಂದು ಮಾಂಡ್ ಅಕ್ಕಿಗೆ ₹೧೪ ರಿಂದ ₹೨೨.೧೭ ಆಗಿದ್ದರೆ, ರಾಗಿ ₹೧೨.೦೦ ರಿಂದ ₹೧೬.೧೩ ಹಾಗೂ ಜೋಳ ₹೧೨.೦೦ ರಿಂದ ₹೧೪.೬೬ ಆಗಿತ್ತು.

ಜಿಲ್ಲೆಯಲ್ಲಿ ೧೯೬೦-೬೧ರಿಂದ ೧೯೬೮-೬೯ರ ವರೆಗೆ ಸರಕುಗಳ ಸಗಟು ಬೆಲೆಯಲ್ಲಿ ವಾಸ್ತವ ಏರಿಕೆ ಕಂಡುಬಂದಿತು. ಈ ಅವಧಿಯಲ್ಲಿ ಏಕದಳ ಧಾನ್ಯ ಹಾಗೂ ಉಪತೃಣ ಧಾನ್ಯಗಳ ಬೆಲೆ ಶೇ. ೧೨೦ ಹೆಚ್ಚಾಗಿದ್ದರೆ, ದ್ವಿದಳ ಧಾನ್ಯಗಳ ಬೆಲೆಯಲ್ಲಿ ಶೇ. ೧೩೦ರಷ್ಟು, ಎಣ್ಣೆಕಾಳುಗಳ ಬೆಲೆಯಲ್ಲಿ ಶೇ. ೩೫ರಷ್ಟು ಹಾಗೂ ಎಲ್ಲಾ ಸರಕುಗಳ ಬೆಲೆಯಲ್ಲಿ ಶೇ. ೬೭ರಷ್ಟು ಹೆಚ್ಚಳ ಕಂಡುಬಂದಿದೆ. ಆದಾಗ್ಯೂ ೧೯೬೨-೬೩ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿಯ ಏರಿಕೆಯಿಂದಾಗಿ ಬೆಲೆ ನಿಯಂತ್ರಣಕ್ಕೊಳಪಟ್ಟಿತು. ಮತ್ತೆ ೧೯೬೩-೬೪ರಲ್ಲಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿತು. ೧೯೬೯ರಲ್ಲಿ ತಾತ್ಕಾಲಿಕವಾಗಿ ಬೆಲೆಯಲ್ಲಿ ಸ್ಥಿರತೆ ಕಂಡುಬಂದರೂ, ಕೆಲವು ಸರಕುಗಳ ಬೆಲೆಯಲ್ಲಿ ಸ್ವಲ್ಪ ಇಳಿಕೆ ಕಂಡುಬಂದಿತು, ಮತ್ತೆ ೧೯೭೦ರಲ್ಲಿ ಬೆಲೆಯಲ್ಲಿ ಹೆಚ್ಚಳ ಕಂಡುಬಂದರೂ,

೧೯೭೬ ಹಾಗೂ ೧೯೭೮ರಲ್ಲಿ ಬೆಲೆಯಲ್ಲಿ ಕುಸಿತ ಕಂಡುಬಂದಿತು. ಮತ್ತೇ ೧೯೮೦ ಹಾಗೂ ೧೯೮೩ರಲ್ಲಿ ಬೆಲೆ ಏರಿಕೆಯ ಎಚ್ಚರಿಕೆಯ ಗಂಟೆ ಭಾರಿಸಿತು ಮತ್ತು ಮುಂದುವರಿಯಿತು. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಬೆಂಗಳೂರು ಇವರು ಸಂಗ್ರಹಿಸಿರುವ ಅಗತ್ಯ ವಸ್ತುಗಳ ಸಗಟು ಬೆಲೆಯನ್ನು ೧೯೬೩ ರಿಂದ ೧೯೮೬ರ ವರೆಗಿನ ಆಯ್ದ ವರ್ಷಗಳಲ್ಲಿ ಕೋಷ್ಟಕ ೮.೧೩ ಅನ್ನು ನೋಡಿ.

**ಕೋಷ್ಟಕ ೮.೧೩: ೧೯೬೩ ರಿಂದ ೧೯೮೬ರ ವರೆಗಿನ ಆಯ್ದ ಅಗತ್ಯ ವಸ್ತುಗಳ ಸಗಟು ಬೆಲೆ ವಿವರ.**

(ಕ್ವಿಂಟಾಲ್‌ಗೆ ₹ ಗಳಲ್ಲಿ)

| ಸರಕುಗಳು | ೧೯೬೩ | ೧೯೬೬ | ೧೯೬೯ | ೧೯೭೧ | ೧೯೭೩ | ೧೯೭೬ | ೧೯೭೮ | ೧೯೮೦ | ೧೯೮೨ | ೧೯೮೪ | ೧೯೮೫ | ೧೯೮೬ |
|---|---|---|---|---|---|---|---|---|---|---|---|---|
| ಅಕ್ಕಿ (ದಪ್ಪ) | ೫೯.೬೭ | ೧೨೦.೭೯ | ೧೧೦.೬೪ | ೧೧೨.೮೮ | ೧೮೪.೦೬ | ೧೬೨.೧೯ | ೧೬೬.೬೯ | ೧೯೭.೧೫ | ೨೬೭.೫೨ | ೨೯೬.೨೫ | ೩೦೭.೭೧ | ೩೪೪.೫೦ |
| ರಾಗಿ | ೩೯.೧೧ | ೯೨.೬೨ | ೭೪.೮೧ | ೭೪.೬೯ | ೧೨೪.೯೧ | ೧೦೨.೩೩ | ೯೨.೫೨ | ೧೨೦.೯೬ | ೧೭೨.೭೧ | ೧೭೬.೦೪ | ೧೭೮.೬೭ | ೧೯೧.೪೬ |
| ಜೋಳ | ೩೬.೨೧ | ೯೧.೪೬ | ೬೬.೭೫ | ೭೦.೮೩ | ೧೦೯.೬೮ | ೧೦೧.೮೮ | ೮೪.೩೫ | ೧೧೮.೪೪ | ೧೪೩.೦೦ | ೧೬೪.೯೫ | ೧೪೯.೭೩ | ೧೬೪.೫೪ |
| ತೊಗರಿ | ೬೯.೦೭ | ೧೧೭.೬೫ | – | ೧೧೫.೩೫ | ೧೮೦.೮೩ | ೨೩೦.೮೩ | ೨೪೭.೬೩ | ೪೨೫.೮೩ | – | ೩೪೫.೩೩ | ೩೭೪.೬೬ | ೩೦೩.೫೪ |
| ಹುರಳಿ | ೩೬.೭೯ | ೭೮.೫೮ | ೬೪.೮೫ | ೮೪.೫೪ | ೧೧೧.೪೫ | ೧೦೬.೬೩ | ೯೮.೬೯ | ೧೫೫.೦೬ | ೨೧೮.೬೭ | ೨೧೪.೫೮ | ೨೬೫.೩೩ | ೨೩೯.೦೫ |
| ಕಡಲೆ | ೫೪.೭೩ | ೧೫೮.೪೬ | ೧೧೪.೭೭ | ೧೧೧.೦೬ | ೧೮೮.೬೮ | ೧೮೮.೬೦ | ೨೪೯.೨೧ | ೩೮೨.೨೭ | ೪೨೨.೫೦ | ೪೭೫.೮೩ | ೫೮೮.೭೧ | ೫೭೬.೦೮ |
| ಗುರ್ (Gur) ಉತ್ತಮ ದರ್ಜೆ | ೧೧೪.೫೭ | ೯೫.೭೩ | – | ೧೨೬.೦೭ | ೧೯೪.೫೬ | ೨೫೮.೫೪ | ೧೬೫.೪೬ | ೪೦೦.೯೨ | ೩೩೦.೯೨ | ೪೩೩.೦೪ | ೩೯೭.೭೧ | ೪೨೭.೯೨ |
| ಕಡಲೆಕಾಯಿ ಎಣ್ಣೆ | ೧೭೯.೯೦ | ೩೮೮.೯೦ | ೪೧೦.೯೨ | ೪೫೫.೦೦ | ೭೦೩.೧೮ | ೬೦೪.೭೯ | ೭೧೨.೬೩ | ೧೦೨೯.೧೩ | ೧೩೩೯.೪೮ | ೧೬೦೧.೮೮ | ೧೪೭೩.೭೯ | ೧೮೫೭.೭೯ |
| ಹರಳೆಣ್ಣೆ | ೧೬೯.೬೯ | ೩೪೫.೨೯ | ೩೧೬.೨೫ | ೩೮೯.೭೫ | ೭೧೮.೮೦ | ೬೪೫.೮೦ | ೬೪೬.೧೩ | ೮೩೨.೮೯ | ೯೭೩.೦೬ | ೧೫೨೯.೦೦ | ೧೨೦೪.೫೮ | ೧೦೮೧.೮೮ |
| ಆಲೂಗೆಡ್ಡೆ | ೩೮.೫೮ | ೬೮.೦೪ | ೬೧.೦೪ | ೬೮.೫೪ | ೧೦೦.೫೦ | ೧೦೪.೦೨ | ೧೨೨.೮೧ | ೧೭೨.೦೮ | ೧೭೧.೧೫ | ೧೭೧.೮೮ | ೧೭೩.೮೮ | ೨೮೧.೨೫ |
| ಈರುಳ್ಳಿ | ೨೬.೪೩ | ೩೬.೫೮ | ೩೯.೮೩ | ೩೧.೬೯ | ೭೫.೪೫ | ೬೧.೪೬ | ೬೬.೭೩ | ೮೩.೧೦ | ೧೩೨.೧೭ | ೮೯.೩೮ | ೧೨೪.೩೮ | ೧೫೧.೬೭ |
| ಬಾಳೆಹಣ್ಣು (೧೦೦ಕ್ಕೆ) | ೧೦.೩೫ | ೯.೬೭ | ೯.೦೨ | ೧೦.೬೩ | ೧೭.೫೯ | ೨೨.೮೮ | ೧೩.೬೫ | ೧೯.೪೦ | ೨೬.೪೦ | ೨೩.೨೧ | ೨೨.೫೭ | ೨೯.೯೦ |
| ಮೆಣಸಿನ ಕಾಯಿ | ೨೮೨.೭೯ | ೪೫೭.೯೦ | ೩೫೪.೫೦ | ೪೧೧.೮೮ | ೪೪೯.೨೭ | ೮೬೦.೨೭ | ೭೬೩.೨೯ | ೬೭೭.೫೦ | ೧೨೪೫.೮೩ | ೧೦೨೫.೮೩ | ೧೪೧೬.೧೫ | ೯೭೦.೦೦ |
| ತಂಬಾಕು ಎಲೆ | ೪೬೬.೫೬ | ೪೮೩.೧೯ | ೪೧೩.೭೫ | ೩೫೫.೦೦ | – | ೫೮೭.೨೯ | ೬೩೫.೦೦ | – | – | – | – | – |
| ಹುಣಸೆ ಹಣ್ಣು | ೯೦.೩೩ | ೧೦೯.೧೨ | ೧೪೯.೫೨ | ೧೬೫.೦೦ | ೨೮೩.೯೦ | ೩೦೭.೧೧ | ೫೨೨.೦೦ | ೬೯೯.೦೫ | ೭೪೧.೩೫ | ೭೨೯.೫೮ | ೬೫೧.೦೦ | ೭೨೨.೭೧ |
| ಬೆಳ್ಳುಳ್ಳಿ | ೧೦೪.೨೫ | ೨೩೯.೨೯ | ೧೪೫.೨೩ | ೨೧೯.೬೯ | ೨೮೧.೫೯ | ೨೭೮.೫೪ | ೫೧೩.೫೦ | ೨೯೧.೦೬ | ೫೮೯.೧೩ | ೮೨೦.೮೩ | – | – |

ಚಾಮರಾಜನಗರ ಜಿಲ್ಲೆಯಲ್ಲಿ ೨೦೦೧ರಲ್ಲಿ ಅಗತ್ಯ ವಸ್ತುಗಳ ಸಗಟು ಬೆಲೆ ಕ್ವಿಂಟಲ್‌ಗೆ ಹೀಗಿದೆ. ಭತ್ತ ₹ ೬೦೮.೩೩ ಗಳಾಗಿತ್ತು. ಹಾಗೆಯೇ ಉತ್ತಮ ದರ್ಜೆಯ ಅಕ್ಕಿ ₹ ೧೩೦೪.೪೪, ಮಧ್ಯಮ ದರ್ಜೆಯ ಅಕ್ಕಿ ₹ ೯೯೨.೭೮, ಜೋಳ (ಬಿಳಿ) ₹ ೩೭೫.೨೮, ಉದ್ದು ₹ ೨,೪೮೮.೮೯, ಹುರುಳಿ ₹ ೮೦೪.೪೪, ಅಲಸಂದೆ ₹ ೧,೩೨೭.೭೮, ಒಣಮೆಣಸಿನಕಾಯಿ ₹ ೫,೪೮೧.೨೫, ಗೋಧಿ (ಬಿಳಿ) ₹ ೮೯೪.೪೪, ಹುಣಸೆಹಣ್ಣು ₹ ೧,೨೫೫.೫೬ ಹಾಗೂ ಹರಳು ₹ ೧,೨೧೧.೧೧ಗಳಾಗಿತ್ತು. ೨೦೦೫ರಲ್ಲಿ ಈ ಅಗತ್ಯ ವಸ್ತುಗಳ ಬೆಲೆ ಕ್ರಮವಾಗಿ ₹ ೬೨೪.೩೩, ₹ ೨,೦೭೧.೦೦, ₹ ೧,೫೫೨.೦೦, ₹ ೪೬೮.೦೦, ₹ ೩,೦೮೮.೦೦, ₹ ೭೭೬.೦೦, ₹ ೧,೪೪೪.೦೦, ₹ ೪,೬೫೦.೦೦೦, ₹ ೧,೧೩೩.೦೦, ₹೨,೨೪೬.೦೦ ಹಾಗೂ ₹ ೧,೪೪೫.೦೦ಗಳಾಗಿತ್ತು. ೨೦೦೫ರಲ್ಲಿ ಒಣಮೆಣಸಿನಕಾಯಿಯ ಬೆಲೆಯಲ್ಲಿ ಕುಸಿತ ಕಂಡು ಬಂದಿದ್ದರೂ, ಉಳಿದ ಎಲ್ಲಾ ಅಗತ್ಯ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಕಂಡುಬಂದಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಜಿಲ್ಲೆಯಲ್ಲಿ ೨೦೦೧ರಿಂದ ೨೦೦೯ರ ವರೆಗೆ ಅಗತ್ಯ ವಸ್ತುಗಳ ಸಗಟು ಬೆಲೆಯಲ್ಲಿನ ಏರುಪೇರುಗಳ ಬಗ್ಗೆ ಕೋಷ್ಟಕ ೮.೧೪ರಲ್ಲಿ ನೀಡಿದೆ.

**ಕೋಷ್ಟಕ ೮.೧೪ ಚಾಮರಾಜನಗರ ಜಿಲ್ಲೆಯ ಅಗತ್ಯ ವಸ್ತುಗಳ ಸಗಟು ಬೆಲೆ**

(ಕ್ವಿಂಟಾಲ್‌ಗೆ ₹ ಗಳಲ್ಲಿ)

| ಕ್ರ.ಸಂ. | ಪದಾರ್ಥಗಳು | ವರ್ಷ | | | | | | |
|---|---|---|---|---|---|---|---|---|
| | | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ | ೨೦೦೮ | ೨೦೦೯ |
| ೧ | ಭತ್ತ | ೬೦೮.೩೩ | ೫೭೫.೬೬ | ೬೦೭.೩೩ | ೬೦೮.೩೩ | ೬೨೪.೩೩ | – | – |
| ೨ | ಅಕ್ಕಿ (ಉತ್ತಮ) | ೧,೩೦೪.೪೪ | ೧,೬೧೫.೦೦ | ೧,೬೬೦.೦೦ | ೧,೬೬೩.೦೦ | ೨,೦೭೧.೦೦ | ೨,೩೨೩.೦೦ | ೩,೬೦೦.೦೦ |
| ೩ | ಅಕ್ಕಿ (ಮಧ್ಯಮ) | ೯೯೨.೭೮ | ೧,೩೩೦.೦೦ | ೧,೨೫೨.೦೦ | ೧,೨೭೯.೦೦ | ೧,೫೫೨.೦೦ | ೨,೦೧೩.೦೦ | ೨,೭೦೦.೦೦ |
| ೪ | ಜೋಳ (ಬಿಳಿ) | ೩೭೫.೨೮ | ೪೬೫.೦೦ | ೫೫೭.೦೦ | ೫೧೯.೦೦ | ೪೬೮.೦೦ | ೭೩೯.೦೦ | ೯೮೩.೦೦ |
| ೫ | ಉದ್ದು | ೨,೪೮೮.೮೯ | ೨,೮೩೧.೦೦ | ೨,೩೪೦.೦೦ | ೨,೩೩೫.೦೦ | ೩,೦೮೮.೦೦ | ೩,೫೫೮.೦೦ | ೪,೬೫೦.೦೦ |
| ೬ | ಹುರುಳಿ | ೮೦೪.೪೪ | ೮೬೭.೦೦ | ೮೩೫.೦೦ | ೮೧೦.೦೦ | ೭೭೬.೦೦ | ೧,೨೬೦.೦೦ | ೧,೮೦೩.೦೦ |
| ೭ | ಅಲಸಂದೆ | ೧,೩೨೭.೭೮ | ೧,೫೬೩.೦೦ | ೧,೮೮೮.೦೦ | ೧,೨೭೩.೦೦ | ೧,೪೪೪.೦೦ | ೨,೩೩೮.೦೦ | ೨,೫೦೦.೦೦ |
| ೮ | ಒಣಮೆಣಸಿನ ಕಾಯಿ | ೫,೪೮೧.೨೫ | ೫,೧೮೩.೫೦ | ೫,೬೩೯.೫೦ | ೫,೯೭೧.೦೦ | ೪,೬೫೦.೦೦ | ೬೨೨೧.೦೦ | ೬,೨೫೦.೦೦ |
| ೯ | ಈರುಳ್ಳಿ | ೬೭೫.೦೦ | ೬೩೧.೦೦ | ೫೭೭.೦೦ | ೬೧೭.೦೦ | ೭೩೮.೦೦ | ೯೫೮.೦೦ | ೧,೬೦೦.೦೦ |
| ೧೦ | ಆಲೂಗೆಡ್ಡೆ | ೬೬೧.೬೭ | ೭೦೧.೦೦ | ೭೪೭.೦೦ | ೭೧೦.೦೦ | ೬೫೦.೦೦ | ೮೪೯.೦೦ | ೮೦೦.೦೦ |
| ೧೧ | ತೆಂಗಿನಕಾಯಿ (ಸಾವಿರಕ್ಕೆ) | ೨,೮೯೪.೪೪ | ೪,೧೭೯.೦೦ | ೪,೭೭೯.೦೦ | ೫,೨೮೮.೦೦ | ೫,೧೫೬.೦೦ | ೪,೫೬೩.೦೦ | ೪,೯೦೦.೦೦ |
| ೧೨ | ಸಜ್ಜೆ | ೩೭೮.೬೧ | ೪೩೬.೦೦ | ೫೧೬.೦೦ | – | – | – | – |
| ೧೩ | ಗೋಧಿ (ಬಿಳಿ) | ೮೯೪.೪೪ | ೯೦೪.೦೦ | ೧,೧೧೭.೦೦ | ೧,೦೯೮.೦೦ | ೧,೧೩೩.೦೦ | ೧,೬೩೩.೦೦ | ೧,೭೫೦.೦೦ |
| ೧೪ | ಹುಣಸೆ ಹಣ್ಣು | ೧,೨೫೫.೫೬ | ೧,೧೨೧.೦೦ | ೧,೪೦೮.೦೦ | ೨,೩೪೨.೦೦ | ೨,೨೪೬.೦೦ | ೨,೫೮೩.೦೦ | ೨,೭೫೦.೦೦ |
| ೧೫ | ಹರಳು | ೧,೨೧೧.೧೧ | ೧,೩೫೦.೦೦ | ೧,೫೯೮.೦೦ | ೧,೬೩೮.೦೦ | ೧,೪೪೫.೦೦ | ೨,೪೯೬.೦೦ | ೨,೨೫೪.೦೦ |

ಕರ್ನಾಟಕ ಕಾರ್ಮಿಕ ವರ್ಗದ ಗ್ರಾಹಕ ಬೆಲೆಯ ಸೂಚ್ಯಂಕವು (ಹತ್ತು ಕೇಂದ್ರಗಳ ಸರಾಸರಿ) ಮಾರ್ಚ್ ೧೯೮೭ರಲ್ಲಿದ್ದ ೭೨೩ ಅಂಶಗಳಿಗೆ ಬದಲಾಗಿ ೧೯೮೭ರ ಡಿಸೆಂಬರ್ ಹೊತ್ತಿಗೆ ೮೧೪ ಅಂಶಗಳಿಗೆ ಹೆಚ್ಚಳಗೊಂಡು, ಶೇಕಡ. ೧೨.೬ರ ಹೆಚ್ಚಳವನ್ನು ಕಳೆದ ಒಂಭತ್ತು ತಿಂಗಳಲ್ಲಿ ದಾಖಲು ಮಾಡಿದೆ. ಮೈಸೂರು ಕೇಂದ್ರ ಕಾರ್ಮಿಕ ವರ್ಗದ ಗ್ರಾಹಕ ಬೆಲೆಯ ಸೂಚ್ಯಂಕವು (ಆಧಾರಿತ ವರ್ಷ ೧೯೬೦–೧೦೦) ಮಾರ್ಚ್ ೧೯೮೬ರಲ್ಲಿ ೬೮೮ ಅಂಶಗಳಾಗಿತ್ತು. ಇದು ಮಾರ್ಚ್ ೧೯೮೭ರಲ್ಲಿ ೭೧೫ ಅಂಶಗಳು, ಡಿಸೆಂಬರ್ ೧೯೮೭ರ ಹೊತ್ತಿಗೆ ೮೨೯ ಆಗಿದ್ದರೆ, ಮಾರ್ಚ್ ೧೯೮೭ರಿಂದ ಡಿಸೆಂಬರ್ ೧೯೮೭ರ ವರೆಗಿನ ಶೇಕಡ ವ್ಯತ್ಯಾಸ ೧೫.೯೪ರಷ್ಟಾಗಿತ್ತು. ಇದು ಮಾರ್ಚ್ ೧೯೯೦ಕ್ಕೆ ೯೭೧ ಅಂಶಗಳಾಗಿದ್ದು, ಮಾರ್ಚ್ ೧೯೯೧ರಲ್ಲಿ ೧೧೨೬ ಅಂಶಗಳಿಗೆ ಏರಿಕೆ ಕಂಡುಬಂದಿದೆ. ಮಾರ್ಚ್ ೧೯೯೦ರಿಂದ ಮಾರ್ಚ್ ೧೯೯೧ರವರೆಗಿನ ಶೇಕಡವಾರು ವ್ಯತ್ಯಾಸ ೧೫.೯೬ರಷ್ಟಾಗಿತ್ತು. ಮಾರ್ಚ್ ೧೯೯೮ ರಿಂದ ನವೆಂಬರ್ ೧೯೯೮ರ ರವರೆಗಿನ ಶೇಕಡವಾರು ವ್ಯತ್ಯಾಸ ೭.೪೬ರಷ್ಟಾಗಿತ್ತು. ಕರ್ನಾಟಕದಲ್ಲಿ ಗ್ರಾಹಕ ಬೆಲೆ ಸೂಚ್ಯಂಕವು ಮಾರ್ಚ್ ೨೦೦೬ರಲ್ಲಿ ೩೨೮ ಅಂಶಗಳಾಗಿದ್ದು, ಏರುತ್ತಲೇ ಮುಂದುವರೆದು ನವೆಂಬರ್ ೨೦೦೬ರಲ್ಲಿ ೩೫೯ ಅಂಶಗಳಾಗಿತ್ತು. ೨೦೦೬ರ ಮಾರ್ಚ್–ನವೆಂಬರ್ ಅವಧಿಯಲ್ಲಿ ಕರ್ನಾಟಕ ರಾಜ್ಯದ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ಅಂಕಿಅಂಶಗಳ ಆಧಾರದ ಮೇಲೆ ಅಳೆದಾಗ ಹಣದುಬ್ಬರದ ಪ್ರಮಾಣವು ಶೇಕಡಾ ೬.೨೧ರಷ್ಟಾಗಿತ್ತು. ಇದು ಅಖಿಲ ಭಾರತ ಮಟ್ಟದಲ್ಲಿ ಇದು ೬.೭೨ರಷ್ಟಾಗಿತ್ತು. ಮಾರ್ಚ್ ೨೦೦೬ ರಿಂದ ನವೆಂಬರ್ ೨೦೦೬ರ ವರೆಗೆ ವಿಶ್ಲೇಷಿಸಿದಾಗ ಶೇಕಡಾವಾರು ವ್ಯತ್ಯಾಸ ೫.೦೪ರಷ್ಟಾಗಿತ್ತು. ಜೂನ್ ೨೦೦೮ಕ್ಕೆ ಮುಕ್ತಾಯಗೊಂಡ ವಾರದಲ್ಲಿ ಹಣದುಬ್ಬರ ದರ ಶೇಕಡಾ ೧೧.೮೯ಕ್ಕೆ ಏರಿಕೆಯಾಗಿದೆ. ಇದರಿಂದಾಗಿ ಸಾಮಾನ್ಯ ಜನರಿಗೆ ಬೆಲೆಯೇರಿಕೆಯಿಂದ ತತ್ತರಿಸಿದ್ದಾರೆ. ದಾಖಲೆ ಪ್ರಮಾಣದ ಹಣದುಬ್ಬರ, ತೈಲಸಂಪನ್ಮೂಲಗಳ ಬೆಲೆ ಏರಿಕೆ, ರಸಗೊಬ್ಬರ ಕೊರತೆ, ಕೈಕೊಟ್ಟ ಮುಂಗಾರು ಹಾಗೂ ಬಿತ್ತನೆ ಆಗದ ಪರಿಣಾಮ ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರಲು ಕಾರಣವಾಗಿದೆ. ದಿನಸಿ ಬೆಲೆಗಳಲ್ಲದೆ ಸಾಂಬಾರು ಪದಾರ್ಥಗಳ ಬೆಲೆಯೂ ಶೇ. ೪೦ರಷ್ಟು ಹೆಚ್ಚಳವಾಗಿದೆ. ಈ ಎಲ್ಲಾ ಪದಾರ್ಥಗಳನ್ನು ಇತರೆ ರಾಜ್ಯ ಮತ್ತು ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದ್ದರೂ, ತೈಲಬೆಲೆ ಏರಿಕೆ ಹಾಗೂ ಕೇಂದ್ರ ಸರ್ಕಾರ ಮುಂಗಡ ಖರೀದಿ ಮಾರುಕಟ್ಟೆಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಕಳೆದ ವರ್ಷದ ಉತ್ಪಾದನೆಯಲ್ಲಿ (೨೦೦೭ರ) ಬಹುತೇಕ ದಿನಸಿ ಪದಾರ್ಥಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಖರೀದಿಸಿ ದಾಸ್ತಾನಿಟ್ಟಿವೆ. ಪರಿಣಾಮ ಈ ಉತ್ಪನ್ನಗಳ ಬೆಲೆ ಹೆಚ್ಚಳವಾಗಲು ಕಾರಣವಾಗಿದೆ. ೨೦೦೮ರಲ್ಲಿ ಇರುವ ದಿನಸಿ ಪದಾರ್ಥಗಳು ಹಾಗೂ ಸಾಂಬಾರು ಪದಾರ್ಥಗಳ ಬೆಲೆ (ಕಿಲೋಗೆ)ಗಳನ್ನು ಕೋಷ್ಟಕ ೮.೧೫ ರಲ್ಲಿ ನೀಡಿದೆ.

**ಕೋಷ್ಟಕ ೮.೧೫: ದಿನಸಿ ಪದಾರ್ಥಗಳು (ಪ್ರತಿ ಕೆ.ಜಿ.ಗೆ ₹ ಗಳಲ್ಲಿ)**

| ಪದಾರ್ಥ | ಜನವರಿ–೨೦೦೮ | ಜುಲೈ–೨೦೦೮ |
|---|---|---|
| **ತೊಗರಿಬೇಳೆ** | ೩೬ | ೪೪ |
| **ಉದ್ದಿನಬೇಳೆ** | ೩೩ | ೪೩ |
| **ಹೆಸರುಬೇಳೆ** | ೩೦ | ೪೦ |
| **ಕಾಬೂಲ್ ಕಡಲೆ** | ೪೩ | ೫೦ |
| **ಕಡ್ಲೇಬೇಳೆ** | ೩೦ | ೩೪ |
| **ಕಡ್ಲೇಕಾಳು** | ೨೪ | ೩೨ |
| **ಮೈಸೂರು ಬೇಳೆ** | ೪೪ | ೪೮ |

**ಕೋಷ್ಟಕ ೮.೧೫: (ಮುಂದುವರೆದಿದೆ) ಸಾಂಬಾರು ಪದಾರ್ಥಗಳ ಬೆಲೆ (ಪ್ರತಿ ಕೆ.ಜಿ.ಗೆ ₹ ಗಳಲ್ಲಿ)**

| ಪದಾರ್ಥ | ೨೦೦೮ರ ಜುಲೈ ಮೊದಲವಾರ | ೨೦೦೮ರ ಜುಲೈ ೨ನೇ ವಾರ |
|---|---|---|
| ಜೀರಿಗೆ | ೮೦ | ೧೦೦ |
| ಏಲಕ್ಕಿ | ೫೫೦ | ೬೪೦ |
| ಚಕ್ಕೆ | ೭೮ | ೮೫ |
| ಲವಂಗ | ೨೫೦ | ೩೧೦ |
| ಬಾದಾಮಿ | ೩೨೦ | ೩೬೦ |

# ಭೂಮಿಯ ಮೌಲ್ಯ

ಭೂಮಿ, ಶ್ರಮ, ಬಂಡವಾಳ ಹಾಗೂ ಸಂಘಟನೆ ಇವುಗಳು ಉತ್ಪಾದನಾಂಗಗಳಾಗಿದ್ದು, ಭೂಮಿ, ಶ್ರಮ ಹಾಗೂ ಬಂಡವಾಳ. ಈ ಮೂರು ಉತ್ಪಾದನಾಂಗಗಳನ್ನು ಒಟ್ಟುಗೂಡಿಸಿ, ಉತ್ಪಾದನೆ ಮಾಡುವುದೇ ಸಂಘಟನೆ. ನಿಸರ್ಗದಿಂದ ಮಾನವನಿಗೆ ಕೊಡಲ್ಪಟ್ಟಿರುವ ಎಲ್ಲಾ ಸಂಪನ್ಮೂಲಗಳಿಗೆ ಅರ್ಥಶಾಸ್ತ್ರದಲ್ಲಿ ಭೂಮಿ ಎಂದು ಕರೆಯಲಾಗುತ್ತದೆ. ಮಣ್ಣಿನ ಮೇಲ್ಮೈ, ಜಲಸಂಪತ್ತು, ಅರಣ್ಯಸಂಪತ್ತು, ಖನಿಜಪತ್ತು, ತೈಲ, ಬೆಟ್ಟಗುಡ್ಡಗಳು, ಗಾಳಿ, ಬೆಳಕು, ಹವಾಮಾನ ಮೊದಲಾವೆಲ್ಲವೂ ಭೂಮಿಯ ವ್ಯಾಪ್ತಿಗೆ ಸೇರುತ್ತವೆ.

ಕಳೆದ ಮೂರು ದಶಕಗಳಲ್ಲಿ ಕೃಷಿ ಭೂಮಿಯ ಮೌಲ್ಯ ಹಲವು ಪಟ್ಟು ಹೆಚ್ಚಳಗೊಂಡಿದ್ದರೂ, ಅದು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗೊಂಡಿದೆ. ಕೃಷಿ ಭೂಮಿಯ ಫಲವತ್ತತೆ, ಜನಸಂಖ್ಯೆಯಲ್ಲಿ ಹೆಚ್ಚಳ, ಹೆಚ್ಚೆಚ್ಚು ಭೂಮಿ ಹೊಂದಬೇಕೆಂಬ ಹಂಬಲ, ಪಟ್ಟಣಗಳ ಸಮೀಪದ ಕೃಷಿ ಭೂಮಿಯನ್ನು ನಗರದ ವಿಸ್ತರಣೆಗೆ ಬಳಸುತ್ತಿರುವುದು, ಜನರ ಆದಾಯದಲ್ಲಿ ಹೆಚ್ಚಳ, ನೀರಾವರಿ ಸೌಲಭ್ಯದ ಹೆಚ್ಚಳ, ಕೈಗಾರಿಕೀಕರಣ ಮತ್ತಿತರ ಅಂಶಗಳು ಭೂಮಿಯ ಮೌಲ್ಯ ಹೆಚ್ಚಳಕ್ಕೆ ಕಾರಣಗಳಾಗಿವೆ. ಸಬ್–ರಿಜಿಸ್ಟ್ರಾರ್ ಕಛೇರಿಯಲ್ಲಿ ವ್ಯವಸಾಯ ಭೂಮಿ ನೋಂದಣಿಗೊಂಡು ಮಾರಾಟಗೊಂಡ ಸರಾಸರಿ ಭೂಮಿಯ ಮೌಲ್ಯದ ವಿವರವನ್ನು ಕೋಷ್ಟಕ ೮.೧೬ ಮತ್ತು ೮.೧೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೬: ಜಿಲ್ಲೆಯಲ್ಲಿನ ಸರಾಸರಿ ಭೂಮಿಯ ಮೌಲ್ಯದ ವಿವರ**

**ಪ್ರತಿ ಎಕರೆಗೆ ₹ ಗಳಲ್ಲಿ**

| ತಾಲೂಕು | ಭೂಮಿ | ೧೯೬೫–೬೬ | ೧೯೭೦–೭೧ | ೧೯೭೫–೭೬ | ೧೯೮೦–೮೧ | ೧೯೮೫–೮೬ | ೧೯೮೬–೮೭ |
|---|---|---|---|---|---|---|---|
| ಚಾಮರಾಜನಗರ (ಪೂರ್ವ) | ಒಣಭೂಮಿ | ೫೪೨ | ೧,೨೫೩ | ೨,೫೬೧ | ೪,೯೦೬ | ೪,೪೧೬ | ೪,೬೬೦ |
| | ತರಿ | ೩,೧೪೫ | ೩,೬೦೫ | ೨,೨೩೩ | ೩,೯೫೫ | ೫,೯೦೮ | ೯೦,೧೨೦ |
| | ಭಾಗಾಯ್ತು ಭೂಮಿ | ೩,೨೨೬ | ೩,೬೮೧ | ೨,೬೮೧ | ೭,೧೮೧ | ೯,೭೪೫ | ೧೮,೪೨೩ |
| ಯಳಂದೂರು | ಒಣಭೂಮಿ | ೧,೦೦೨ | ೧,೫೪೪ | ೨,೯೨೪ | ೩,೧೧೩ | ೬,೪೮೩ | ೬,೨೩೬ |
| | ತರಿ | ೨,೨೦೪ | ೩,೩೬೨ | ೫,೬೮೮ | ೬,೨೧೨ | ೧೦,೦೭೭ | ೧೨,೫೫೮ |
| | ಭಾಗಾಯ್ತು ಭೂಮಿ | ೨,೭೬೦ | ೬,೧೨೦ | ೧೦,೧೨೦ | ೬,೬೨೬ | ೨೧,೪೧೪ | ೧೪,೦೦೦ |

**ಕೋಷ್ಟಕ ೮.೧೭: ೧೯೯೦–೯೧ ರಿಂದ ೨೦೦೭–೦೮ರ ವರೆಗಿನ ಆಯ್ದ ವರ್ಷಗಳಲ್ಲಿ ತಾಲೂಕುವಾರು ಭೂಮಿಯ ಸರಾಸರಿ ಮೌಲ್ಯ.**
**ಪ್ರತಿ ಎಕರೆಗೆ ₹ ಗಳಲ್ಲಿ**

| ತಾಲೂಕು | ಭೂಮಿ | ೧೯೯೦–೯೧ | ೧೯೯೫–೯೬ | ೨೦೦೦–೦೧ | ೨೦೦೫–೦೬ | ೨೦೦೭–೦೮ | ೨೦೧೧–೧೨ |
|---|---|---|---|---|---|---|---|
| ಚಾಮರಾಜ ನಗರ | ಒಣಭೂಮಿ | – | ೩೦,೦೦೦ | ೧,೫೦,೦೦೦ | ೨,೦೦,೦೦೦ | – | ೩,೦೦,೦೦೦ |
| | ತರಿ | – | ೩೨,೦೦೦ | ೧,೮೦,೦೦೦ | ೨,೦೦,೦೦೦ | – | ೩,೨೫,೦೦೦ |
| | ಭಾಗಾಯ್ತು ಭೂಮಿ | – | ೪೬,೦೦೦ | ೧,೫೦,೦೦೦ | ೨,೦೦,೦೦೦ | – | ೩,೫೦,೦೦೦ |
| ಕುದೇರು | ಒಣಭೂಮಿ | ೧೦,೨೫೦–೦೦ | ೧೯,೫೦೦–೦೦ | ೨೫,೦೦೦–೦೦ | ೨೭,೫೦೦–೦೦ | ೩೯,೨೫೦–೦೦ | – |
| | ತರಿ | ೧೬,೫೦೦–೦೦ | ೨೯,೦೦೦–೦೦ | ೫೫,೦೦೦–೦೦ | ೬೦,೦೦೦–೦೦ | ೬೫,೦೦೦–೦೦ | – |
| | ಭಾಗಾಯ್ತು ಭೂಮಿ | ೨೬,೦೦೦–೦೦ | ೪೭,೦೦೦–೦೦ | ೬೦,೦೦೦–೦೦ | ೬೫,೦೦೦–೦೦ | ೭೨,೦೦೦–೦೦ | – |
| ಕೊಳ್ಳೇಗಾಲ | ಒಣಭೂಮಿ | ೬,೦೦೦–೦೦ | ೨೦,೦೦೦–೦೦ | ೩೦,೦೦೦–೦೦ | ೪೦,೦೦೦–೦೦ | ೫೦,೦೦೦–೦೦ | ೫೪,೦೦೦ |
| | ತರಿ | ೧೪,೦೦೦–೦೦ | ೪೮,೦೦೦–೦೦ | ೬೫,೦೦೦–೦೦ | ೭೦,೦೦೦–೦೦ | ೮೦,೦೦೦–೦೦ | ೮೦,೦೦೦ |
| | ಭಾಗಾಯ್ತು ಭೂಮಿ | ೨೮,೦೦೦–೦೦ | ೭೦,೦೦೦–೦೦ | ೮೦,೦೦೦–೦೦ | ೮೫,೦೦೦–೦೦ | ೯೦,೦೦೦–೦೦ | ೮೭,೫೦೦ |
| ಗುಂಡ್ಲುಪೇಟೆ | ಒಣಭೂಮಿ | – | – | – | – | – | ೧,೦೦,೮೮೦ |
| | ತರಿ | – | – | – | – | – | ೧,೩೧,೮೨೫ |
| | ಭಾಗಾಯ್ತು ಭೂಮಿ | – | – | – | – | – | ೧,೬೫,೯೮೦ |
| ಯಳಂದೂರು | ಒಣಭೂಮಿ | ೧೯,೦೦೦–೦೦ | ೨೭,೦೦೦–೦೦ | ೩೮,೫೦೦–೦೦ | ೫೪,೫೦೦–೦೦ | ೭೯,೦೦೦–೦೦ | – |
| | ತರಿ | ೨೮,೫೦೦–೦೦ | ೪೪,೦೦೦–೦೦ | ೭೯,೦೦೦–೦೦ | ೮೪,೦೦೦–೦೦ | ೧,೧೨,೦೦೦–೦೦ | – |
| | ಭಾಗಾಯ್ತು ಭೂಮಿ | ೫೭,೫೦೦–೦೦ | ೬೬,೫೦೦–೦೦ | ೮೮,೫೦೦–೦೦ | ೧,೦೨,೦೦೦–೦೦ | ೧,೫೫,೫೦೦–೦೦ | – |

*ಆಧಾರ: ಉಪನೋಂದಣಾಧಿಕಾರಿಗಳ ಕಛೇರಿ, ಚಾಮರಾಜನಗರ, ಕುದೇರು, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು.*

ಭೂ ಕಾಯಿದೆಯ ಫಲವಾಗಿ ವ್ಯವಸಾಯೇತರ ವೃತ್ತಿಯಲ್ಲಿ ತೊಡಗಿದಂತವರು ವಾರ್ಷಿಕ ₹ ೧೨,೦೦೦ ಗಳಿಗಿಂತ ಹೆಚ್ಚು ಆದಾಯ ತರುವಂತ ಕೃಷಿ ಭೂಮಿಯನ್ನು ಖರೀದಿಸುವಂತಿರಲಿಲ್ಲ ಎಂಬ ನಿರ್ಬಂಧ, ಹಾಗೆಯೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮಂಜೂರಾಗಿದ್ದ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸದಂತೆ ವಿಧಿಸಿದ ನಿರ್ಬಂಧ ಹಾಗೂ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬಳಸದಂತೆ ನಿರ್ಬಂಧ ವಿಧಿಸಿದ್ದು, ಭೂ ಮೌಲ್ಯದ ಏರಿಕೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ನೆರವಾಯಿತು.

# ಬೆಲೆ ನಿಯಂತ್ರಣ

ಅಮೇರಿಕಾದಲ್ಲಿ ೧೯೩೦ರಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನಿಂದಾಗಿ, ಬೆಲೆ ಕುಸಿತಕ್ಕೊಳಗಾದ ಕೆಲವು ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಿಸಲು ಸರ್ಕಾರ ಮುಂದಾಯಿತು. ಇದಕ್ಕೂ ಮೊದಲು ೧೯೨೦ರ ದಶಕದಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಾದ ಹೆಚ್ಚಳದಿಂದಾಗಿ ರೈತರ ಆದಾಯ ಹೆಚ್ಚಳ ಹಾಗೂ ಉತ್ತಮ ಜೀವನಮಟ್ಟದ ಭರವಸೆ ಇತ್ತಾದರೂ ೧೯೩೦ರಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟಿನಿಂದಾಗಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಶೇ. ೫೦ರಷ್ಟು ಕುಸಿತ ಕಂಡಿತು. ಇದು ವ್ಯವಸಾಯಗಾರರಿಗೂ, ವ್ಯಾಪಾರಸ್ಥರಿಗೂ ಹಾಗೂ ಲೇವಾದೇವಿಗಾರರಿಗೂ ಪರೋಕ್ಷವಾಗಿ ಆಘಾತ ಉಂಟಾಯಿತು. ಆಗ ಸರ್ಕಾರ ೧೯೩೩–೩೪ರಲ್ಲಿ ಬೆಲೆ ನಿಯಂತ್ರಿಸಲು ಸಲಹೆ ಸೂಚನೆ ಕೇಳಿ ಒಂದು ಕಮಿಟಿಯನ್ನು ನೇಮಿಸಿತು. ಈ ಸಮಿತಿ ರೈತರಿಗೆ ತಕ್ಕಾವಿ ಸಾಲ ಸುಲಭವಾಗಿ ಸಿಗಬೇಕು ಹಾಗೂ ಕೃಷಿಗೆ ನೀಡುತ್ತಿದ್ದ ಅನುದಾನವನ್ನು ಮನ್ನಾ ಮಾಡಲು ಶಿಫಾರಸ್ಸು ಮಾಡಿತು.

ಎರಡನೇಯ ಜಾಗತಿಕ ಯುದ್ಧ ಆರಂಭಗೊಂಡ ನಂತರ ಹಲವು ಸಮಸ್ಯೆಗಳು ಸೃಷ್ಟಿಗೊಂಡವು. ಬೆಲೆಯ ಹೆಚ್ಚಳವನ್ನು ನಿಯಂತ್ರಿಸಲು ಕ್ರಮ ಕೈಗೊಂಡಿತು. ಅಲ್ಲದೆ ಅಗತ್ಯ ವಸ್ತುಗಳ ಸರಬರಾಜನ್ನು ಸರಳಗೊಳಿಸಲು ವ್ಯಾಪಾರಸ್ಥರಿಂದ ದಾಸ್ತಾನಾಗುವ ಅಗತ್ಯ ವಸ್ತುಗಳ ಮೇಲೆ ಗಮನಹರಿಸಲಾಯಿತು. ೧೯೪೦–೪೧ರಲ್ಲಿ ಹಲವು ಅಗತ್ಯ ವಸ್ತುಗಳ ಬೆಲೆಯನ್ನು ನಿಯಂತ್ರಿಸಲು, ಬೆಲೆಯನ್ನು ನಿಗದಿಗೊಳಿಸಲು ಯೋಚಿಸಲಾಯಿತು. ಪರಿಣಾಮವಾಗಿ ೧೯೪೦–೪೧ರಲ್ಲಿ ಒಂದು ಜಿಲ್ಲಾ ಕಮಿಟಿಯನ್ನು ರಚಿಸಲಾಯಿತು. ಅಗತ್ಯಕ್ಕಿಂತ ಹೆಚ್ಚಾಗಿ ಹೊಂದಿರುವ ಜಿಲ್ಲೆಗಳಿಂದ ಅಗತ್ಯ ವಸ್ತುಗಳನ್ನು ಪಡೆದು ಸಮನಾಗಿ ಹಾಗೂ ಸಮರ್ಪಕವಾಗಿ ಹಂಚುವ ಉದ್ದೇಶದಿಂದ ೧೯೪೨–೪೩ರಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಆರಂಭಿಸಲಾಯಿತು. ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯ ಭಾಗವಾಗಿತ್ತಾದರೂ, ಅಗತ್ಯ ವಸ್ತುಗಳನ್ನು ಅಗತ್ಯಕ್ಕಿಂತ ಹೆಚ್ಚಾಗಿ ಹೊಂದಿದ್ದ ಜಿಲ್ಲೆಯಾಗಿತ್ತು. ಆದರೂ ಮೈಸೂರು ನಗರ ಅಗತ್ಯ ವಸ್ತುಗಳ ಕೊರತೆಯನ್ನು ಅನುಭವಿಸುತ್ತಿತ್ತು. ಜಿಲ್ಲೆಯಲ್ಲಿ ಕೋಟಾ (Quota) ಪದ್ಧತಿಯನ್ನು ೧೯೪೨ರಲ್ಲಿ ಪರಿಚಯಿಸಲಾಯಿತು ಹಾಗೂ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಅಗತ್ಯ ವಸ್ತುಗಳ ಸಾಕಷ್ಟು ಖರೀದಿ ಹಾಗೂ ದಾಸ್ತಾನು ಮಾಡಿಕೊಳ್ಳಲು ಪರಮಾಧಿಕಾರ ನೀಡಿತು. ಅಲ್ಲದೆ ಮೈಸೂರು ನಗರದಲ್ಲಿ ಜನರಿಗೆ ಅಗತ್ಯ ವಸ್ತುಗಳನ್ನು ನಿಗದಿಪಡಿಸಿ ಪಡಿತರ ಪದ್ಧತಿಯನ್ನು (Rationing System) ಜಾರಿಗೆ ತಂದಿತು. ಅಲ್ಲದೆ ಕಾಲಾನುಕಾಲಕ್ಕನುಗುಣವಾಗಿ ಅಗತ್ಯ ವಸ್ತುಗಳ ಬೆಲೆಯನ್ನು ನಿಗದಿಪಡಿಸಲಾಗುತ್ತಿತ್ತು. ೧೯೪೩ರಲ್ಲಿ ಹಾರ್ವೆಸ್ಟ್ ಆಕ್ವಿಸಿಷನ್ ಆರ್ಡರ್ ೧೯೪೩ (Harvest Acquisition order 1943), ಸ್ಟಾಟ್ಯೂಟರಿ ರೇಷನಿಂಗ್ ಆಫ್ ಫುಡ್ ಗ್ರೈನ್ಸ್ (Statutory rationing of food graiņ) ಗಳನ್ನು ದಿ. ೯–೮–೧೯೪೩ ರಿಂದ ಮೈಸೂರು ನಗರದಲ್ಲಿ ಕಾರ್ಯಾಚರಣೆಗೆ ತರಲಾಯಿತು. ಬಟ್ಟೆ, ಖಾದ್ಯ ತೈಲ ಮತ್ತಿತರ ಅಗತ್ಯ ಸರಕುಗಳನ್ನು ಸರ್ಕಾರಿ ಡಿಪೋಗಳು ಹಾಗೂ ಸಹಕಾರಿ ಸಂಘಗಳ ಮೂಲಕ ನಿಯಂತ್ರಿತ ಬೆಲೆಯಲ್ಲಿ ವಿತರಿಸಲಾಯಿತು. ಹತ್ತಿಬಟ್ಟೆ ಹಾಗೂ ದಾರ ನಿಯಂತ್ರಣ ಕಾಯ್ದೆ (A Cotton cloth and Yarn control order) ಅನ್ನು ೧೯೪೩ರಲ್ಲಿ ಪ್ರಸಾರಣೆ ಮಾಡಲಾಯಿತು.

ಪಡಿತರ ಕಾರ್ಡುದಾರರನ್ನು 'ಎ' ಮತ್ತು 'ಬಿ' ವರ್ಗವಾಗಿ ವಿಂಗಡಿಸಿ ದಿ. ೧–೭–೧೯೪೫ ರಿಂದ ಪ್ರತಿ ವಯಸ್ಕನಿಗೆ ಪ್ರತಿದಿನಕ್ಕೆ ೧೫.೬ ಔನ್ಸ್ ಅಕ್ಕಿ ಮತ್ತು ಉಪತೃಣ ಧಾನ್ಯಗಳನ್ನು ನಿಗದಿಪಡಿಸಲಾಯಿತು.

ಸರ್ಕಾರದಿಂದ ಅಗತ್ಯ ವಸ್ತುಗಳಾದ ಭತ್ತ, ಅಕ್ಕಿ, ಜೋಳ, ರಾಗಿ ಹಾಗೂ ಗೋಧಿಗಳ ನಿಯಂತ್ರಿತ ಬೆಲೆಯನ್ನು ನಿಗದಿಪಡಿಸಲಾಯಿತು. ೧೯೪೫–೪೬ರಲ್ಲಿ ಮೈಸೂರು ನಗರದಲ್ಲಿ ೨೫ ನ್ಯಾಯಬೆಲೆ ಅಂಗಡಿಗಳ ಮೂಲಕ ಉರುವಲು ಸಾಮಗ್ರಿಗಳನ್ನು ವಿತರಿಸಲಾಯಿತು. ಹೀಗೆ ೧೯೪೬ರಲ್ಲಿ ಉತ್ತಮ ವಿತರಣೆ, ಅಗತ್ಯ ವಸ್ತುಗಳ ಪ್ರಮಾಣದ ಕಡಿಮೆ ಮುಂತಾದ ಹಲವು ಉತ್ತಮ ಕ್ರಮಗಳನ್ನು ಸರ್ಕಾರ ಕೈಗೊಂಡಿತು. ಈ ಕ್ರಮಗಳಂತೆ ಪ್ರತಿ ದಿನಕ್ಕೆ ೧೨ ಔನ್ಸ್ ಹಾಗೂ ೩ ೩/೪ ಸೇರುಗಳಿಂದ ೩ ೧/೪ ಸೇರು ಸಕ್ಕರೆಯನ್ನು 'ಎ' ವರ್ಗದ ಕಾರ್ಡುದಾರರಿಗೆ ನಿಗದಿಪಡಿಸಿತು. 'ಬಿ' ವರ್ಗದ ಕಾಡುದಾರರಿಗೂ ಒಟ್ಟು ಪ್ರಮಾಣದಲ್ಲಿ ಕಡಿಮೆ ಮಾಡಲಾಯಿತು. ೧೯೪೬ರಲ್ಲಿ ಜರುಗಿಸಿದ ಉಗ್ರ ಕ್ರಮಗಳಲ್ಲಿ ಮೈಸೂರು ಫುಡ್ ಆರ್ಡರ್ ಆಕ್ಟ್ ೧೯೪೬, ಆಹಾರದ ಕೊರತೆ ಸಂಭವಿಸಿದ ಪ್ರದೇಶಗಳಲ್ಲಿ ಉಚಿತ ಅಡುಗೆ ಮನೆಗಳ ಆರಂಭ, ಬೆಲ್ಲ ನಿಯಂತ್ರಣ ಕಾಯ್ದೆ ೧೯೪೬, ಮೈಸೂರು ಬ್ರೆಡ್ ರೇಷನಿಂಗ್ ಆರ್ಡ್‌ರ್ ೧೯೪೬ ಪ್ರಮುಖವಾದವುಗಳು. ವಿವಿಧ ಗುಣಮಟ್ಟದ ಚರಕಾ ಹಾಗೂ ಫಿಲೇಚರ್ ಸಿಲ್ಕ್‌ಗೆ ಬೆಲೆ ನಿಗದಿಪಡಿಸಲು ಮೈಸೂರು ಸಿಲ್ಕ್ (ನಿಯಂತ್ರಣ ಹಾಗೂ ಹಂಚಿಕೆ) ಆರ್ಡರ್, ಸೆಪ್ಟೆಂಬರ್ ೧೯೪೫; ಕಾಗದ ನಿಯಂತ್ರಣ ಆದೇಶ ೧೯೪೬; ಮೈಸೂರು ಹ್ಯಾಂಡ್‌ಲೂಮ್ (ಕೈಮಗ್ಗ) ಕ್ಲಾತ್ (ಬೆಲೆ ನಿಯಂತ್ರಣ) ಆರ್ಡರ್, ೧೯೪೭ ಅನ್ನು ಕೈಮಗ್ಗದ ವಿವಿಧ ತೆರನಾದ ಉತ್ಪನ್ನಗಳಿಗೆ ಬೆಲೆ ನಿಗದಿಗೊಳಿಸಲು, ಎಣ್ಣೆ, ಎಣ್ಣೆ ಬೀಜಗಳು, ಆಲೂಗಡ್ಡೆ, ಈರುಳ್ಳಿ, ಹುಣಸೆಹಣ್ಣು ಹಾಗೂ ಮೆಣಸಿನಕಾಯಿಗಳನ್ನು ವಿತರಿಸುವುದಕ್ಕಾಗಿ ಆಡ್‌ಹಾಕ್ ಕಮಿಟಿ (ad hoc committee) ಅನ್ನು ೧೯೪೬–೪೭ ರಚಿಸಲಾಯಿತು. ಜುಲೈ ಒಂದು, ೧೯೪೮ ರಿಂದ ಪಡಿತರ ಕಾಯಿದೆಯನ್ನು ಮೈಸೂರು ನಗರವನ್ನು ಹೊರತುಪಡಿಸಿ ಜಿಲ್ಲೆಯಾದ್ಯಂತ ತೆಗೆದುಹಾಕಲಾಯಿತು. ಸರ್ಕಾರ ಆಹಾರ ಪದಾರ್ಥಗಳ ಸಂಗ್ರಹಣಾ ಕಾಯಿದೆ ೧೯೪೮ ಅನ್ನು (ಸುಗ್ಗಿ) ನವೆಂಬರ್ ೧೯೪೯ರಲ್ಲಿ ಘೋಷಿಸಿತು. ಅಲ್ಲದೆ ಸಂಗ್ರಹಿಸುವ ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಿತು. ಅದರಂತೆ ಮೊದಲ ದರ್ಜೆಯ ಭತ್ತಕ್ಕೆ ₹ ೨೨, ಎರಡನೇಯ ದರ್ಜೆಯ ಭತ್ತಕ್ಕೆ ₹ ೨೦ ಗಳನ್ನು ನಿಗದಿಗೊಳಸಿತು. ೧೯೪೯ರಲ್ಲಿ ಇಡ್ಲಿ, ದೋಸೆ ಹಾಗೂ ಇತರೆ ತಿನಿಸುಗಳನ್ನು ತಯಾರಿಸಿ ಮಾರಾಟ ಮಾಡಲಾಯಿತು. ಇದೇ ಅವಧಿಯಲ್ಲಿ ಆಹಾರ ಉತ್ಪಾದನೆಗಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿ ಹೆಚ್ಚು ಆಹಾರ ಪದಾರ್ಥಗಳನ್ನು ಉತ್ಪಾದಿಸುವ ಚಳುವಳಿ(೧೯೪೨)ಯಂತೆ ವಾಣಿಜ್ಯ ಬೆಳೆಗಳನ್ನು ಕಡಿಮೆಗೊಳಿಸಿ, ಹೆಚ್ಚೆಚ್ಚು ಆಹಾರ ಪದಾರ್ಥಗಳ ಉತ್ಪಾದನೆಗೆ ಪ್ರಥಮ ಆದ್ಯತೆ ನೀಡಲಾಯಿತು. ಆಮದು ಮಾಡಿಕೊಳ್ಳುವ ಸರಕುಗಳ ಸರಬರಾಜನ್ನು ರಾಜ್ಯ ಹಾಗೂ ಜಿಲ್ಲೆಗಳಲ್ಲಿ ದಿ ೧–೧–೧೯೫೦ ನಿಗದಿಗೊಳಿಸಲಾಯಿತು ಹಾಗೂ ಪ್ರತಿ ಮಾಂಡ್ ಅಕ್ಕಿಗೆ ₹ ೨೨, ಗೋಧಿಹಿಟ್ಟು ₹ ೧೯.೫೦, ಗೋಧಿ ₹ ೧೫.೦೦, ಉಪತೃಣ ಧಾನ್ಯಗಳು ₹ ೧೧.೨೫ ಗಳಿದ್ದರೂ, ಇದನ್ನು ಕಾಲಕಾಲಕ್ಕೆ ಕೇಂದ್ರ ಸರ್ಕಾರ ಹೆಚ್ಚಿಸುತ್ತಿತ್ತು. ೧೯೫೦–೫೧ರಲ್ಲಿ ಪಾಲಿಷ್ಡ್ ಅಕ್ಕಿಯನ್ನು ಒಬ್ಬ ಗೌರವಾನ್ವಿತ ಪ್ರಯಾಣಿಕ ಕೂಡ ಒಂದು ಪಡಿತರ ರಹಿತ ಪ್ರದೇಶದಿಂದ (Non-rationed area) ಮತ್ತೊಂದು ಪಡಿತರ ರಹಿತ ಪ್ರದೇಶಕ್ಕೆ ಹತ್ತು ಸೇರುಗಳಿಗಿಂತ ಹೆಚ್ಚು ಆಹಾರ ಪದಾರ್ಥಗಳನ್ನು ಕೊಂಡೊಯ್ಯುವಂತಿರಲಿಲ್ಲ.

ಭಾರತ ಸರ್ಕಾರ ೧೯೫೬–೫೭ರಲ್ಲಿ ಬೆಲೆ ನಿಯಂತ್ರಣ ಯೋಜನೆಯನ್ನು ಜಾರಿಗೆ ತಂದು ಆಮದು ಮಾಡಿಕೊಂಡ ಅಕ್ಕಿಯನ್ನು ರಾಜ್ಯಕ್ಕೆ ಸರಬುರಾಜು ಮಾಡಿತು. ಇದೇ ಅವಧಿಯಲ್ಲಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯ ವೈಫಲ್ಯದಿಂದಾಗಿ ಕ್ಷಾಮ ಸಂಭವಿಸಿದ್ದರ ಫಲವಾಗಿ ಅಕ್ಕಿಯ ಬೆಲೆಯಲ್ಲಿ ಹೆಚ್ಚಳ ಉಂಟಾಯಿತು. ಇದರಿಂದಾಗಿ ೧೯೫೭ರಲ್ಲಿ ಹಾಗೂ ಅನಂತರ ಹಲವು ಬೆಲೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಯಿತು. ಅದರಲ್ಲೂ ಅಕ್ಕಿಯ ಬಗ್ಗೆ ಅಂತರ–ಜಿಲ್ಲಾ ವಹಿವಾಟನ್ನು ನಿರ್ಬಂಧಿಸಲಾಯಿತು. ಮಾರಾಟಗಾರರು ಹಾಗೂ

ಮಿಲ್ಲು ನಡೆಸುವವರು ಅಕ್ಕಿಯ ಲಭ್ಯತೆ ಹಾಗೂ ಬೆಲೆಯನ್ನು ಪ್ರದರ್ಶಿಸಬೇಕಾಯಿತು. ಸೀಮೆಎಣ್ಣೆ ಹಾಗೂ ಅಗತ್ಯ ವಸ್ತುಗಳ ಬೆಲೆಯ ನಿಯಂತ್ರಣ ಆದೇಶವನ್ನು ಪುನಃ ಘೋಷಿಸಲಾಯಿತು. ರಾಜ್ಯ ಸರ್ಕಾರವು ೧೯೬೫–೬೬ರಲ್ಲಿ ತನ್ನ ಆಹಾರ ನೀತಿಯನ್ನು ಪ್ರಕಟಿಸಿತು. ಪರಿಣಾಮಕಾರಿಯಾಗಿ ಭತ್ತ, ರಾಗಿ, ಜೋಳ, ಸಜ್ಜೆ ಮತ್ತಿತರ ಆಹಾರ ಪದಾರ್ಥಗಳನ್ನು ಸಂಗ್ರಹಿಸುವುದನ್ನು ಮುಂದುವರಿಸಲಾಯಿತು. ಅಲ್ಲದೆ, ಪೆಟ್ರೋಲಿಯಂ ಉತ್ಪನ್ನಗಳು, ಮೋಟಾರು ವಾಹನಗಳ ಬಿಡಿ ಭಾಗಗಳ ಬೆಲೆಯನ್ನು ಪ್ರದರ್ಶಿಸುವುದು, ಸೀಮೆಎಣ್ಣೆ, ಕಾಗದ, ಸೋಪುಗಳು, ತರಕಾರಿಗಳು ಎಣ್ಣೆ ಮೊದಲಾದವುಗಳು ಹಂಚಿಕೆಯ ನಿಯಂತ್ರಣವನ್ನು ಮುಂದುವರಿಸಲಾಯಿತು. ನಂತರ ೧೯೭೦ ಹಾಗೂ ೧೯೮೦ರ ದಶಕಗಳಲ್ಲಿ ಶಾಸನಗಳು ನಿಯಮಗಳ ಮೂಲಕ ಬೆಲೆ ನಿಯಂತ್ರಿಸಲಾಯಿತು. ವರ್ತಕರಿಗೆ ರಹದಾರಿ ನೀಡುವುದು, ಕಾಲಕಾಲಕ್ಕೆ ಅಗತ್ಯ ವಸ್ತುಗಳ ಬೆಲೆಯನ್ನು ನಿಗದಿಪಡಿಸುವುದು, ಅಗತ್ಯ ವಸ್ತುಗಳ ದಾಸ್ತಾನು ಹಾಗೂ ಬೆಲೆಯನ್ನು ಪ್ರದರ್ಶಿಸುವುದು, ಸಕ್ಕರೆ ಹಾಗೂ ಎಣ್ಣೆಯನ್ನು ಆಮದು ಮಾಡಿಕೊಳ್ಳುವುದು ಮತ್ತಿತರ ಕ್ರಮಗಳನ್ನು ಕರ್ನಾಟಕ ರಾಜ್ಯ ಮಾರುಕಟ್ಟೆ ಮಂಡಳಿ (Karnataka State Trading Corporation) ಮೂಲಕ ನಿರ್ವಹಿಸಲಾಗುತ್ತಿತ್ತು. ಇದು ಮುಂದೆ ಅಗತ್ಯ ಆಹಾರ ಪದಾರ್ಥಗಳ ಕೊರತೆ ಸಂಭವಿಸಿದರೆ ಶೀಘ್ರವಾಗಿ ಅಗತ್ಯ ಕ್ರಮ ಕೈಗೊಳ್ಳುತ್ತಿತ್ತು.

ಕರ್ನಾಟಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ವಯ, ೧೯೯೦–೯೧ರಲ್ಲಿ ಅವಶ್ಯಕ ಸರಕುಗಳನ್ನು ನ್ಯಾಯ ಬೆಲೆಗಳಲ್ಲಿ ವಿತರಣಾ ಕೇಂದ್ರಗಳ ಮೂಲಕ ವ್ಯವಸ್ಥೆಗೊಳಿಸಿತ್ತು. ರಾಜ್ಯದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಸಹಕಾರ ಸಂಘಗಳು ಮತ್ತು ಖಾಸಗಿ ಉದ್ಯಮಿಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ನ್ಯಾಯ ಬೆಲೆ ಅಂಗಡಿಗಳ ಚೌಕಟ್ಟಿನಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಕಾರ್ಯಗತವಾಗುತ್ತಿದೆ. ಅಕ್ಕಿ, ಗೋಧಿ, ಸಕ್ಕರೆ, ಪಾಮೋಲಿನ್ ಖಾದ್ಯತೈಲ ಮತ್ತು ಸೀಮೆಎಣ್ಣೆ ಮತ್ತಿತರ ಅವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸರಬರಾಜು ಮಾಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಾರ್ಷಿಕ ಆದಾಯ ₹ ೩,೫೦೦ಕ್ಕಿಂತ ಕಡಿಮೆ ಇರುವ ಕುಟುಂಬಗಳಿಗೆ ಅವಶ್ಯಕ ಸಾಮಗ್ರಿಗಳನ್ನು ರಿಯಾಯಿತಿ ದರಗಳಲ್ಲಿ ಸರಬರಾಜು ಮಾಡಲಾಗುತ್ತಿದೆ. ಭೂರಹಿತ ಕೃಷಿ ಕಾರ್ಮಿಕರು, ಗ್ರಾಮೋದ್ಯೋಗಿಗಳು, ಸಣ್ಣ ಮತ್ತು ಅತಿಸಣ್ಣ ರೈತರು, ವೃದ್ಧಾಪ್ಯವೇತನಗಳನ್ನು ಪಡೆಯುತ್ತಿರುವವರು, ಅಂಗವಿಕಲರು ಮತ್ತು ವಿಧವಾವೇತನ ಪಡೆಯುತ್ತಿರುವ ಮಹಿಳೆಯರು ಇದರ ಫಲಾನುಭವಿಗಳಾಗಿದ್ದರು. ಪ್ರತಿಯೊಂದು ಫಲಾನುಭವಿ ಕುಟುಂಬಕ್ಕೆ ಹಸಿರು ಪಡಿತರ ಚೀಟಿಯನ್ನು ವಿತರಣೆ ಮಾಡಲಾಗಿದ್ದು, ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು ಐದು ಕೆ.ಜಿ. ಅಕ್ಕಿ, ಐದು ಕೆ.ಜಿ. ಗೋಧಿಯನ್ನು ಕ್ರಮವಾಗಿ ₹ ೨.೫೦ ಮತ್ತು ₹ ೧.೬೦ರಂತೆ ರಿಯಾಯಿತಿ ದರಗಳಲ್ಲಿ ನೀಡಲಾಗುತ್ತಿತ್ತು. ಈ ಯೋಜನೆಯನ್ನು ೨೦,೦೦೦ ಜನ ಸಂಖ್ಯೆಗಿಂತ ಕಡಿಮೆ ಇರುವ ಪಟ್ಟಣ ಪ್ರದೇಶಗಳಿಗೂ ವಿಸ್ತರಿಸಲಾಗಿದೆ.

ಕರ್ನಾಟಕದಲ್ಲಿ ೧೯೮೬ರ ಜನವರಿ ಒಂದರಿಂದ ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು ಹಾಗೂ ಮೈಸೂರು ಜಿಲ್ಲೆಗಳಲ್ಲಿ (ಈಗಿನ ಚಾಮರಾಜನಗರ ಜಿಲ್ಲೆಯು ಸೇರಿದಂತೆ) ಹರಡಿಕೊಂಡಿರುವ ೨೩ ತಾಲೂಕುಗಳಲ್ಲಿ 'ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ' ಜಾರಿಗೆ ಬಂದಿದ್ದು, ಈ ಯೋಜನೆಯಡಿ ಹಸಿರು ಪಡಿತರ ಚೀಟಿಯನ್ನು ಹೊಂದಿರುವ ಗಿರಿಜನ ಕುಟುಂಬಗಳು ತಿಂಗಳಿಗೆ ೧೦ ಕೆ.ಜಿ. ಅಕ್ಕಿ ಮತ್ತು ಐದು ಕೆ.ಜಿ. ಗೋಧಿಯನ್ನು ರಿಯಾಯಿತಿ ಬೆಲೆಗಳಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡೆಯುತ್ತಿದ್ದವು.

ಗ್ರಾಹಕರ ಹಾಗೂ ಉತ್ಪಾದಕರ ಹಿತರಕ್ಷಣೆಯಾಗುವಂತೆ ಬೆಲೆಗಳ ಸ್ಥಿರತೆ ಮತ್ತು ಹತೋಟಿಯನ್ನು ಖಾತ್ರಿಪಡಿಸಲು, ರಾಷ್ಟ್ರಮಟ್ಟದಲ್ಲಿ ನಿರೂಪಿಸಲಾದ ಬೆಲೆಗಳ ನೀತಿಯನ್ನು ಕರ್ನಾಟಕ ಸರ್ಕಾರ

ಅನುಷ್ಠಾನಗೊಳಿಸುತ್ತದೆ. ಬಡತನ ರೇಖೆಯ ಮೇಲಿರುವ ಜನರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸಲಾಗುವ ಉತ್ತಮ ಮತ್ತು ಅತ್ಯುತ್ತಮ ಅಕ್ಕಿಯ ದರ್ಜೆಗಳನ್ನು ವಿಲೀನಗೊಳಿಸಿ 'ಎ' ದರ್ಜೆ ಎಂದು ಪರಿಗಣಿಸಿ, ಅದರ ಬೆಲೆಯನ್ನು ಕಿಲೋ ಒಂದಕ್ಕೆ ₹ ೭.೬೦ ಗಳೆಂದು ಕೇಂದ್ರ ಸರ್ಕಾರ ವಿತರಣಾ ಬೆಲೆಯನ್ನು ನಿಗದಿಗೊಳಿಸಿದೆ. ದಿ ೨೯–೦೧–೧೯೯೯ ರಿಂದ ಅನ್ವಯವಾಗುವಂತೆ ಕಿಲೋ ಒಂದರ ವಿತರಣಾ ಬೆಲೆಯನ್ನು ₹ ೯.೮೦ಗಳೆಂದು ಪರಿಷ್ಕರಿಸಲಾಗಿದೆ.

ಆದಾಗ್ಯೂ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಸಾರ್ವಜನಿಕ ಪಡಿತರ ವಿತರಣೆ ಪದ್ಧತಿಯಲ್ಲಿ ವಿತರಿಸುವ ಅಕ್ಕಿ ಹಾಗೂ ಗೋಧಿಯ ಬೆಲೆ ಕ್ರಮವಾಗಿ ₹ ೩.೫೦ ಹಾಗೂ ₹ ೨.೫೦ ಆಗಿದ್ದು, ದರಗಳಲ್ಲಿ ಬದಲಾವಣೆಯಾಗಿರುವುದಿಲ್ಲ. ಭಾರತ ಸರ್ಕಾರದ ೧೬ನೇ ಮೇ ೧೯೯೫ರ ಆದೇಶದನ್ವಯ ರಾಜ್ಯ ಸರ್ಕಾರವು ೧೯೯೮–೯೯ನೇ ಸಾಲಿಗೆ ಆಹಾರ ಮತ್ತು ನಾಗರೀಕ ಸರಬರಾಜು ಆಯುಕ್ತರು ಪ್ರತಿ ಜಿಲ್ಲೆಯಲ್ಲಿನ ಭತ್ತದ ಉತ್ಪಾದನೆ ಮತ್ತು ಅಕ್ಕಿ ಗಿರಣಿಗಳ ಸಂಖ್ಯೆಗಳನ್ನು ಆಧರಿಸಿ ಸಂಬಂಧಪಟ್ಟ ಜಿಲ್ಲೆಗೆ ಲೆವಿ ಸಂಗ್ರಹಣೆಯ ಗುರಿಯನ್ನು ನಿಗದಿಪಡಿಸುತ್ತಾರೆ. ಅದರಂತೆ ಗಿರಣಿ ಮಾಲೀಕರು/ವರ್ತಕರು ಎಲ್ಲಾ ಲೇವಿ ಅಕ್ಕಿಯನ್ನು ೫೦ ಕಿ.ಗ್ರಾಂ. ಸೆಣಬು ಚೀಲಗಳಲ್ಲಿ ಸರ್ಕಾರದ ವಶಕ್ಕೆ ಒಪ್ಪಿಸಬೇಕು.

೧೯೯೮–೯೯ರ ರಾಜ್ಯ ಸರ್ಕಾರದ ಆಹಾರ ಶೇಖರಣೆಯ ನೀತಿಯಂತೆ, ಗಿರಣಿ ಮಾಲೀಕರು/ವರ್ತಕರು ತಮ್ಮ ಲೆಕ್ಕದಲ್ಲಿ ಮಿಲ್ ಮಾಡಿದ ಶೇ. ೩೩೧/೩ ರಷ್ಟು ಭತ್ತವನ್ನು ಒಪ್ಪಿಸಬೇಕು. ೧೯೮೪ರ ಕರ್ನಾಟಕ ಲೆವಿ ಅಕ್ಕಿ ಸಂಗ್ರಹಣಾ ಆದೇಶದಲ್ಲಿನ ನಿಯಮಗಳ ಪ್ರಕಾರ ಭತ್ತವನ್ನು ಅಕ್ಕಿಗೆ ಪರಿವರ್ತಿಸದೆ, ಭತ್ತವನ್ನೇ ಮಾರುವ ದಾಸ್ತಾನುಗಾರರು/ವರ್ತಕರು (ಕೇಂದ್ರ ಸರ್ಕಾರ ನಿಗದಿಪಡಿಸಿದ ಬೆಲೆಗಳಲ್ಲಿ) ಕೊಳ್ಳುವ ಪ್ರತಿ ಕ್ವಿಂಟಾಲ್ ಭತ್ತಕ್ಕೆ ಪ್ರತಿಯಾಗಿ ಶೇ. ೩೩೧/೩ ಭಾಗದಷ್ಟು ಭತ್ತವನ್ನಾಗಲೀ ಅಥವಾ ೨೩ ಕಿ.ಗ್ರಾಂ. ಅಕ್ಕಿಯನ್ನಾಗಲೀ ಒಪ್ಪಿಸುವ ಐಚ್ಛಿಕ ಅವಕಾಶವನ್ನು ಹೊಂದಿರುತ್ತಾರೆ.

ಬೇಲೂರು ಘೋಷಣೆ ಮತ್ತು ಸಂವಿಧಾನದ ೭೩ನೇ ವಿಧಿ ತಿದ್ದುಪಡಿ ಅನುಷ್ಠಾನದ ಅನ್ವಯ ಗ್ರಾಮೀಣ ಪ್ರದೇಶದ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ನೀಡಲಾಗುವ ಆಹಾರ ಧಾನ್ಯಗಳ ವಿತರಣಾ ಕಾರ್ಯದ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗಿದೆ. "ಆಹಾರ ಖಾತರಿ ಸಮಿತಿ"ಯನ್ನು ರಚಿಸಲಾಗಿದ್ದು, ಇದರಲ್ಲಿ ಒಬ್ಬ ಪರಿಶಿಷ್ಟ ಜಾತಿ, ಒಬ್ಬ ಪರಿಶಿಷ್ಟ ಪಂಗಡ ಹಾಗೂ ಒಬ್ಬ ಮಹಿಳಾ ಗ್ರಾಮ ಪಂಚಾಯ್ತಿ ಸದಸ್ಯರು ಸದಸ್ಯರುಗಳಾಗಿದ್ದು, ಗ್ರಾಮ ಪಂಚಾಯಿತಿಯ ಸಮಾಜಿಕ ಸಮಿತಿಯ ಅಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಉಸ್ತುವಾರಿ ಕಾರ್ಯನಿರ್ವಹಿಸುತ್ತವೆ.

## ಉದ್ಯೋಗ

ಹಿಂದಿನ ಕಾಲದಲ್ಲಿ ವ್ಯವಸಾಯ ಮತ್ತು ಅದಕ್ಕೆ ಸಂಬಂಧಿತ ಚಟುವಟಿಕೆಗಳು ಉದ್ಯೋಗದ ಪ್ರಮುಖ ಮೂಲಗಳಾಗಿದ್ದವು. ಉತ್ಪಾದಿತ ಕ್ಷೇತ್ರ ಕಡಿಮೆ ಪ್ರಮಾಣದ ಉದ್ಯೋಗ ನೀಡುತ್ತಿದ್ದು, ಪ್ರಮುಖವಾಗಿ ಸ್ಪಿನ್ನಿಂಗ್, ರೇಷ್ಮೆ ಸಾಕಾಣಿಕೆ, ತಂಬಾಕು ಸಂಸ್ಕರಣೆ ಮೊದಲಾದವು ಗ್ರಾಮೀಣರಿಗೆ ಋತು ಕಾಲಿಕ ಉದ್ಯೋಗಗಳಾಗಿದ್ದವು. ನೂಲು ತೆಗೆಯುವುದು ಮಹಿಳೆಯರಿಗೆ ಸಾಮಾನ್ಯ ಕೆಲಸವಾಗಿತ್ತು. ಇವರಿಗೆ ಪೂರ್ಣಕಾಲಿಕ ನೂಲು

ತೆಗೆಯುವವರು ಫಾರಂಗಳಲ್ಲಿ ಕೆಲಸ ಮಾಡುವವರಿಗಿಂತ ಹೆಚ್ಚು ಗಳಿಸುತ್ತಿದ್ದರು. ಸಂಪ್ರದಾಯಿಕ ಉದ್ಯೋಗಗಳಾದ ಎಣ್ಣೆ ತೆಗೆಯುವುದು, ಮರಗೆಲಸ, ಕುಂಬಾರಿಕೆ, ಕಮ್ಮಾರಿಕೆ, ಬುಟ್ಟಿ ಹೆಣೆಯುವಿಕೆ, ಚಾಪೆ ನೇಯುವಿಕೆ, ಉಪ್ಪು ತಯಾರಿಕೆ, ಸುಣ್ಣ ತಯಾರಿಕೆ, ಆಲೆಮನೆಯಲ್ಲಿ ಬೆಲ್ಲ ತಯಾರಿಸುವುದು, ಮೀನುಗಾರಿಕೆ ಹಾಗೂ ಬೇಟೆಗಾರಿಕೆ ಸಹ ಕೆಲವು ಮಂದಿಗೆ ಉದ್ಯೋಗ ನೀಡಿದ್ದವು.

ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ೯,೬೫,೪೬೨ ಜನಸಂಖ್ಯೆ ಇದ್ದು, ಇದರಲ್ಲಿ ಇದು ೪,೪೮,೩೬೯ ಮಂದಿ ಒಟ್ಟು ಕೆಲಸಗಾರರಿದ್ದರು, ೩,೩೬,೯೬೧ ಮುಖ್ಯ ಕೆಲಸಗಾರರು, ೧,೧೧,೪೦೮ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರು ಹಾಗೂ ೫,೧೭,೦೯೩ ಕೆಲಸಗಾರರಲ್ಲದವರಿದ್ದರು. ೪,೪೮,೩೬೯ ಮಂದಿ ಒಟ್ಟು ಕೆಲಸಗಾರರಲ್ಲಿ ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರಿದ್ದು, ಇವರಲ್ಲಿ ೧,೧೬,೬೬೦ ಮಂದಿ ವ್ಯವಸಾಯಗಾರರು, ೧,೧೨,೨೮೯ ಮಂದಿ ಕೃಷಿ ಕಾರ್ಮಿಕರು, ೧೪,೨೮೧ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೯೩,೭೩೧ ಇತರೆ ಕಾರ್ಮಿಕರು ಸೇರಿದ್ದರು. ಹಾಗೆಯೇ ೧,೧೧,೪೦೮ ಮಂದಿ ಸೀಮಾಂತ ಕೆಲಸಗಾರರಿದ್ದು, ಇವರಲ್ಲಿ ೭,೬೫೨ ಮಂದಿ ವ್ಯವಸಾಯಗಾರರು, ೮೦,೬೮೯ ಮಂದಿ ಕೃಷಿ ಕಾರ್ಮಿಕರು, ೫,೩೧೩ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧೭,೭೫೪ ಮಂದಿ ಇತರೆ ಕೆಲಸಗಾರರಿದ್ದರು. ಹೀಗೆ ೪,೪೮,೩೬೮ ಒಟ್ಟು ಕೆಲಸಗಾರರಲ್ಲಿ ೩,೧೭,೨೯೦ ಮಂದಿ (ಶೇ. ೭೦.೭೭) ಕೃಷಿ ಕ್ಷೇತ್ರದಲ್ಲಿ ಉದ್ಯೋಗಿಗಳಾಗಿದ್ದರೂ, ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಅರೆ ಉದ್ಯೋಗ (ಅಂಡರ್ ಎಂಪ್ಲಾಯ್ಮೆಂಟ್) ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಕಾಣಿಸುತ್ತಿದೆ. ಈ ಅರೆ ಉದ್ಯೋಗದಲ್ಲಿ ಎರಡು ಬಗೆ. ದೃಶ್ಯ ಮತ್ತು ಅದೃಶ್ಯ. ದೃಶ್ಯ ಅಥವಾ ಕಾಣುವಂತಹ ಅರೆ ಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುತಿಸಬಹುದು. ಆದರೆ ಕಾಣದೇ ಇರುವ ಅರೆ ಉದ್ಯೋಗವು ಕಡಿಮೆ ಆದಾಯ ಕೌಶಲ್ಯದ ಅಪೂರ್ಣ ಉಪಯೋಗ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಡಗಿರುವುದು.

ಉದ್ಯೋಗಾವಕಾಶಗಳನ್ನೊದಗಿಸುವುದು ಭಾರತದ ಪಂಚವಾರ್ಷಿಕ ಯೋಜನೆಗಳ ಮುಖ್ಯ ಧ್ಯೇಯಗಳಲ್ಲಿ ಒಂದು. ಈ ದಿಸೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ತರಬೇತಿ ಸಂಸ್ಥೆಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಉದ್ಯೋಗ ವಿನಿಮಯ ಕಛೇರಿಗಳು ನಿರುದ್ಯೋಗಿಗಳಿಗೆ ಉದ್ಯೋಗವನ್ನೂ, ಮಾಲೀಕರಿಗೆ ಒಳ್ಳೆಯ ಕೆಲಸಗಾರರನ್ನೂ ಒದಗಿಸಿಕೊಡುವುದರಲ್ಲಿ ಸಹಕಾರಿಯಾಗಿವೆ. ಈ ಕೇಂದ್ರಗಳು ತಮ್ಮ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಹೆಸರುಗಳನ್ನು ನೋಂದಣಿ ಮಾಡುವ ಹಾಗೂ ಮಾಲೀಕರಿಗೆ ಸೂಕ್ತ ಅಭ್ಯರ್ಥಿಗಳನ್ನು ಒದಗಿಸುವ ಹೊಣೆಯನ್ನು ಹೊತ್ತಿವೆ.

ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವು ಜಿಲ್ಲೆಯಲ್ಲಿರುವ ಉದ್ಯೋಗಾಕಾಂಕ್ಷಿಗಳ ಹೆಸರುಗಳನ್ನು ನೋಂದಣಿ ಮಾಡಿಕೊಳ್ಳುವ ಮತ್ತು ನೋಂದಣಿ ಮಾಡಿಕೊಂಡವರ ಹೆಸರನ್ನು ಸಂಸ್ಥೆಗಳಿಗೆ ಒದಗಿಸುವ ಕಾರ್ಯದಲ್ಲಿ ತೊಡಗಿದ್ದು, ಕಛೇರಿಯ ಚಾಲ್ತಿ ರಿಜಿಸ್ಟರ್ ಪ್ರಕಾರ ಜಿಲ್ಲೆಯಲ್ಲಿ ಜಿಲ್ಲೆಯು ಆರಂಭವಾದ ವರ್ಷದಲ್ಲಿ (೧೯೯೭–೯೮) ಕೇವಲ ೧೮೪ ನಿರುದ್ಯೋಗಿಗಳು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ಮಂದಿ ನೋಂದಾಯಿಸಿಕೊಂಡಿದ್ದರು. ಈ ಸಂಖ್ಯೆ ೨೦೦೦–೦೧ ಸಾಲಿನಲ್ಲಿ ೭,೯೫೪ಕ್ಕೂ, ೨೦೦೪–೦೫ರಲ್ಲಿ ೧೮,೮೨೦ಕ್ಕೂ ಹೆಚ್ಚಳಗೊಂಡಿದ್ದರೆ, ೨೦೦೭–೦೮ರಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ೨೬,೦೮೬ಕ್ಕೆ ಹೆಚ್ಚಳಗೊಂಡಿರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ

೮.೧೮ ರಿಂದ ಸ್ಪಷ್ಟವಾಗುತ್ತದೆ. ಇದರಲ್ಲಿ ಮಹಿಳಾ ಉದ್ಯೋಗಾರ್ಥಿಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ನೀಡಲಾಗಿದ್ದು, ೧೯೯೭–೯೮ರಲ್ಲಿ ೩೮, ೨೦೦೦–೦೧ರಲ್ಲಿ ೧,೯೮೯, ೨೦೦೪–೦೫ರಲ್ಲಿ ೪,೬೫೬ ಹಾಗೂ ೨೦೦೭–೦೮ರಲ್ಲಿ ೬,೮೩೭ ಮಂದಿ ಮಹಿಳಾ ಉದ್ಯೋಗಾರ್ಥಿಗಳಿದ್ದ ಅಂಶ ವೇದ್ಯವಾಗುತ್ತದೆ.

**ಕೋಷ್ಟಕ ೮.೧೮: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಚಾಲ್ತಿ ದಾಖಲೆ ಪ್ರಕಾರ ೧೯೯೭–೯೮ ರಿಂದ ೨೦೧೧–೧೨ರ ವರೆಗೆ ನೋಂದಣಿಗೊಂಡ ಉದ್ಯೋಗಾರ್ಥಿಗಳ ವಿವರ.**

| ವರ್ಷಗಳು | ಪುರುಷ ನಿರುದ್ಯೋಗಸ್ಥರು (ಉದ್ಯೋಗಾರ್ಥಿಗಳು) | ಮಹಿಳಾ ನಿರುದ್ಯೋಗಸ್ಥರು (ಉದ್ಯೋಗಾರ್ಥಿಗಳು) | ಒಟ್ಟು ನಿರುದ್ಯೋಗಸ್ಥರು (ಉದ್ಯೋಗಾರ್ಥಿಗಳು) |
|---|---|---|---|
| ೧೯೯೭–೧೯೯೮ | ೧೪೬ | ೩೮ | ೧೮೪ |
| ೧೯೯೮–೧೯೯೯ | ೧,೯೪೦ | ೫೭೮ | ೨,೫೧೮ |
| ೧೯೯೯–೨೦೦೦ | ೪,೦೪೮ | ೧,೩೦೫ | ೫,೩೫೩ |
| ೨೦೦೦–೨೦೦೧ | ೫,೯೬೫ | ೧,೯೮೯ | ೭,೯೫೪ |
| ೨೦೦೧–೨೦೦೨ | ೮,೦೮೧ | ೨,೫೫೯ | ೧೦,೬೪೦ |
| ೨೦೦೨–೨೦೦೩ | ೧೦,೧೨೨ | ೩,೧೬೯ | ೧೩,೨೯೧ |
| ೨೦೦೩–೨೦೦೪ | ೧೨,೧೦೦ | ೩,೭೫೫ | ೧೫,೮೫೫ |
| ೨೦೦೪–೨೦೦೫ | ೧೪,೧೪೬ | ೪,೬೫೬ | ೧೮,೮೦೨ |
| ೨೦೦೫–೨೦೦೬ | ೧೫,೮೨೦ | ೫,೪೬೨ | ೨೧,೨೮೨ |
| ೨೦೦೬–೨೦೦೭ | ೧೭,೬೩೮ | ೬,೦೯೩ | ೨೩,೭೩೧ |
| ೨೦೦೭–೨೦೦೮ | ೧೯,೨೪೯ | ೬,೮೩೭ | ೨೬,೦೮೬ |
| ೨೦೦೮–೨೦೦೯ | ೨೦,೧೯೩ | ೭,೨೮೪ | ೨೭,೪೭೭ |
| ೨೦೦೯–೨೦೧೦ | ೨೧,೦೯೦ | ೭,೬೭೦ | ೨೮,೭೬೦ |
| ೨೦೧೦–೨೦೧೧ | ೨೨,೦೩೨ | ೮,೦೩೧ | ೩೦,೦೬೩ |
| ೨೦೧೧–೨೦೧೨ | ೨೨,೫೧೫ | ೮,೨೪೦ | ೩೦,೭೫೫ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಚಾಮರಾಜನಗರ,*

೧೯೯೭–೯೮ರಲ್ಲಿ ಚಾಮರಾಜನಗರ ಜಿಲ್ಲೆಯ ನಾಲ್ಕು ವಿವಿಧ ವಿಷಯಗಳ ಸ್ನಾತಕೋತ್ತರ ಪದವೀಧರರು (ಕಲೆ, ವಿಜ್ಞಾನ, ವಾಣಿಜ್ಯ, ಶಿಕ್ಷಣ), ಇಂಜಿನಿಯರಿಂಗ್ ಹಾಗೂ ವೈದ್ಯರು (ಮೆಡಿಕಲ್) ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಯಮ ಕಛೇರಿ, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ನೋಂದಾಯಿಸಿಕೊಂಡಿದ್ದರು. ೧೯೯೭–೯೮ರಲ್ಲಿ ೩೫೩ ಮಂದಿ, ೨೦೦೦–೦೧ ರಲ್ಲಿ ೩೪೩ ಮಂದಿ, ೨೦೦೪–೦೫ರಲ್ಲಿ ೨೭೬ ಮಂದಿ ಹಾಗೂ ೨೦೦೭–೦೮ರಲ್ಲಿ ೧೭೧ ಮಂದಿ ಉದ್ಯೋಗಾರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೯ ಅನ್ನು ನೋಡಿ.

**ಕೋಷ್ಟಕ ೮.೧೯: ೧೯೯೭–೯೮ ರಿಂದ ೨೦೧೦–೧೧ರ ವರೆಗೆ ಜಿಲ್ಲೆಯಲ್ಲಿ ನೋಂದಾಯಿತ ಸ್ನಾತಕೋತ್ತರ ಮತ್ತು ವೃತ್ತಿ ಪರ ಶಿಕ್ಷಣ ಪದವೀಧರರ ವಿವರ**

| ಕ್ರ. ಸಂ. | ವಿದ್ಯಾರ್ಹತೆ | ೧೯೯೭–೯೮ | | ೨೦೦೦–೦೧ | | ೨೦೦೪–೦೫ | | ೨೦೦೭–೦೮ | | ೨೦೧೦–೧೧ | |
|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ೧ | ಸ್ನಾತಕೋತ್ತರ ಪದವಿಧರರು | | | | | | | | | | |
| ಅ | ಕಲೆ | ೪೮ | ೨೨ | ೩೫ | ೧೬ | ೩೨ | ೧೪ | ೩೮ | ೦೯ | ೦೧ | – |
| ಆ | ವಿಜ್ಞಾನ | ೩೭ | ೧೭ | ೨೪ | ೧೧ | ೨೧ | ೧೦ | ೧೯ | ೦೭ | ೦೧ | – |
| ಇ | ವಾಣಿಜ್ಯ | ೨೯ | ೧೪ | ೨೨ | ೧೦ | ೧೯ | ೦೯ | ೧೮ | ೦೫ | – | – |
| ಈ | ಶಿಕ್ಷಣ | ೧೨ | ೦೩ | ೦೯ | ೦೩ | ೦೭ | ೦೨ | ೦೬ | ೦೧ | – | – |
| ಉ | ದೈಹಿಕ ಶಿಕ್ಷಣ | ೦೫ | ೦೧ | ೦೪ | ೦೧ | ೦೩ | – | ೦೩ | – | – | – |
| ೨ | ಇಂಜನೀರ್‌ಗಳು | | | | | | | | | | |
| ಅ | ಸಿವಿಲ್ | ೨೭ | ೦೨ | ೧೮ | ೦೩ | ೧೨ | ೦೩ | ೦೪ | – | ೦೧ | – |
| ಆ | ಮೆಕ್ಯಾನಿಕಲ್ | ೩೧ | ೦೩ | ೨೦ | ೦೩ | ೧೫ | ೦೨ | ೧೦ | – | ೦೨ | – |
| ಇ | ಎಲೆಕ್ಟ್ರಿಕಲ್ | ೩೫ | ೦೫ | ೨೫ | ೦೬ | ೧೭ | ೦೩ | ೦೩ | – | – | – |
| ೩ | ಇತರೆ | ೪೫ | ೧೮ | ೩೭ | ೧೧ | ೨೮ | ೦೮ | ೧೦ | ೦೩ | ೦೪ | ೦೨ |
| ೪ | ಎಂ.ಬಿ.ಬಿ.ಎಸ್. (ಮೆಡಿಸಿನ್) | ೦೪ | ೦೨ | ೦೩ | ೦೧ | ೦೨ | ೦೧ | ೦೧ | ೦೧ | – | – |
| ೫ | ವ್ಯವಸಾಯ * (ಎಂ.ಎಸ್ಸಿ ಅಗ್ರಿ) | ೧೧ | ೦೩ | ೦೭ | ೦೨ | ೦೬ | ೦೨ | ೦೪ | ೦೧ | – | – |
| ೧೨. | ಪಶು ವೈದ್ಯಕೀಯ | ೦೩ | – | ೦೨ | – | ೦೨ | – | ೦೧ | – | – | – |
| ೧೩. | ಇತರೇ ವೃತ್ತಿ ಪದವೀಧರರು | ೪೮ | ೨೭ | ೪೧ | ೨೯ | ೩೨ | ೨೬ | ೨೫ | ೧೧ | – | – |
| | **ಒಟ್ಟು** | **೨೪೧** | **೧೧೨** | **೨೪೭** | **೯೬** | **೧೯೬** | **೮೦** | **೧೩೨** | **೩೯** | **೦೯** | **೦೨** |

**ಬಿಎಸ್ಸಿ ಅಗ್ರಿಕಲ್ಚರ್; ಎಂ.ಎಸ್ಸಿ ಅಗ್ರಿಕಲ್ಚರ್;ಎಂ.ಎಸ್ಸಿ ಸಿರಿಕಲ್ಚರ್; ಎಂ.ಎಸ್ಸಿ, ಹಾರ್ಟಿಕಲ್ಚರ್; ಎಂ.ಎಸ್ಸಿ ಫ್ಲೋರಿಕಲ್ಚರ್ ಪದವೀಧರರು, ವ್ಯವಸಾಯ ಸ್ನಾತಕೋತ್ತರ ಪದವೀಧರರಲ್ಲಿ ಸೇರಿರುತ್ತಾರೆ.*

***ಆಧಾರ: ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಛೇರಿ, ಕೆಂಪೇಗೌಡ ರಸ್ತೆ, ಬೆಂಗಳೂರು.***

ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡವರ ಸಂಖ್ಯೆ ೧೯೯೭–೯೮ರಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ಬಿ.ಎಡ್. ಹಾಗೂ ಬಿ.ಪಿ.ಎಡ್. ಪದವೀಧರರ ಸಂಖ್ಯೆ ೨,೩೭೫ ಆಗಿದ್ದರೆ, ೨೦೦೦–೦೧ರಲ್ಲಿ ೨,೨೨೪ ಹಾಗೂ ೨೦೦೬–೦೭ರಲ್ಲಿ ೧,೮೩೭ ಆಗಿತ್ತು. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ನಿರ್ವಾಹಕ ಪರೀಕ್ಷೆಗಳಲ್ಲಿ ಪಾಸಾದವರು ಗಣನೀಯ ಸಂಖ್ಯೆಯಲ್ಲಿರುವ ಅಂಶ ಕೋಷ್ಟಕ ೮.೨೦ ರಿಂದ ಸ್ಪಷ್ಟವಾಗುತ್ತದೆ.

**ಕೋಷ್ಟಕ ೮.೨೦: ೧೯೯೭–೯೮ ರಿಂದ ೨೦೧೧–೧೨ರ ವರೆಗೆ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇದಕ್ಕನುಗುಣವಾಗಿ ಆಯ್ದ ವರ್ಷಗಳಲ್ಲಿ ನೋಂದಾಯಿಸಿಕೊಂಡವರ ವಿವರ**

| ಉದ್ಯೋಗ ಪ್ರಭೇದ | ನೋಂದಣಿಗೊಂಡ ವರ್ಷ | | | | | | | | | |
|---|---|---|---|---|---|---|---|---|---|---|
| | ೧೯೯೭–೧೯೯೮ | | ೨೦೦೦–೨೦೦೧ | | ೨೦೦೫–೦೬ | | ೨೦೦೯–೧೦ | | ೨೦೧೧–೧೨ | |
| | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ | ಪುರುಷ | ಮಹಿಳೆ |
| ಪದವೀಧರರು | | | | | | | | | | |
| ಕಲೆ | ೭೫೧ | ೧೮೦ | ೬೫೧ | ೧೮೨ | ೫೨೮ | ೧೯೨ | ೨೮೪ | ೧೮೪ | ೨೭೭ | ೧೮೮ |
| ವಿಜ್ಞಾನ | ೧೯೭ | ೫೫ | ೧೮೮ | ೫೫ | ೧೩೪ | ೩೮ | ೬೬ | ೨೯ | ೬೧ | ೨೯ |
| ವಾಣಿಜ್ಯ | ೧೬೮ | ೪೯ | ೧೫೪ | ೫೬ | ೧೨೭ | ೭೫ | ೧೦೨ | ೮೧ | ೧೦೨ | ೮೨ |
| ಬಿ.ಎಡ್. | ೭೦೪ | ೨೧೪ | ೬೨೧ | ೨೬೯ | ೪೬೪ | ೨೫೫ | ೨೬೪ | ೨೨೨ | ೨೬೦ | ೨೨೮ |
| ಬಿ.ಪಿ.ಎಡ್. ಇತರೆ | ೪೨ | ೦೫ | ೪೬ | ೦೨ | ೩೯ | – | ೧೧ | ೦೧ | ೧೧ | ೦೧ |
| ಡಿಪ್ಲೋಮಾದಾರರು | ೨೫೧ | ೧೧ | ೨೪೨ | ೧೧ | ೨೬೭ | ೧೨ | ೬೮ | ೦೩ | ೬೨ | ೦೩ |
| ಐ.ಟಿ.ಐ. ಉತ್ತೀರ್ಣ | ೬೦೮ | ೨೪ | ೬೪೧ | ೨೮ | ೭೨೦ | ೧೫ | ೨೨೭ | ೦೨ | ೧೯೯ | ೦೨ |
| ಬೆರಳಚ್ಚುಗಾರರು | ೧೯೧ | ೩೪೨ | ೧೮೦ | ೩೩೦ | ೧೪೪ | ೨೮೩ | ೮೧ | ೯೬ | ೭೩ | ೮೪ |
| ಶೀಘ್ರಲಿಪಿಗಾರರು | ೦೧ | ೦೯ | ೦೧ | ೧೧ | ೦೧ | ೧೩ | ೦೧ | ೦೪ | ೦೧ | ೦೪ |
| ಪ್ರಾಥಮಿಕ ಶಾಲಾ ಶಿಕ್ಷಕರು | ೫೪೧ | ೨೮೨ | ೪೪೨ | ೨೬೨ | ೨೯೦ | ೨೦೪ | ೨೭೭ | ೨೫೨ | ೨೮೩ | ೨೬೨ |
| ನರ್ಸರಿ ಶಿಕ್ಷಕರು | – | ೨೧೪ | – | ೨೩೧ | – | ೨೦೧ | – | ೯೭ | – | ೮೮ |
| ದೈಹಿಕ ಶಿಕ್ಷಕರು | ೩೩೨ | ೩೬ | ೩೧೪ | ೫೮ | ೨೦೯ | ೪೧ | ೬೦ | ೦೫ | ೫೨ | ೦೫ |
| ನಿರ್ವಾಹಕರು | ೭೭೪ | ೮೮ | ೬೦೮ | ೪೮ | ೬೭೦ | ೮೯ | ೩೧೧ | ೩೫ | ೩೫೩ | ೩೧ |
| ಎಸ್.ಎಸ್.ಎಲ್.ಸಿ ಉತ್ತೀರ್ಣ | ೯,೨೧೦ | ೨,೧೮೪ | ೮,೬೨೬ | ೨,೧೪೬ | ೮,೬೪೯ | ೧,೯೯೩ | ೩೦೬೦ | ೧೦೦೩ | ೩೦೭೩ | ೧೦೦೯ |
| ಪಿ.ಯು.ಸಿ. ಉತ್ತೀರ್ಣ | ೩,೮೯೨ | ೧,೨೩೧ | ೩,೫೪೦ | ೧,೨೮೪ | ೨,೯೬೩ | ೧,೨೮೨ | ೧೫೮೯ | ೭೧೮ | ೧೬೧೦ | ೬೭೯ |
| ಮಾಧ್ಯಮಿಕ ಪರೀಕ್ಷೆ ಉತ್ತೀರ್ಣ | ೧,೫೨೧ | ೨೦೯ | ೧,೪೪೬ | ೨೨೪ | ೧,೦೪೯ | ೧೮೫ | ೪೭೧ | ೯೩ | ೪೭೦ | ೯೧ |
| ಅಕ್ಷರಸ್ಥರು | ೪೬ | ೭೬ | ೫೯ | ೬೭ | ೬೮ | ೨೩ | ೩೪ | ೧೮ | ೩೪ | ೧೭ |
| ಅನಕ್ಷರಸ್ಥರು ಮತ್ತು ಇತರರು | ೩,೨೪೬ | ೬೪೦ | ೩,೧೪೮ | ೫೯೨ | ೨,೨೭೯ | ೩೭೧ | ೮೫೫ | ೨೩೧ | ೭೮೪ | ೨೨೪ |

ಜಿಲ್ಲಾ ಉದ್ಯೋಗ ವಿನಿಯಮ ಕಛೇರಿಯಲ್ಲಿ ೧೯೯೭–೯೮ ರಿಂದ ೨೦೧೧–೧೨ರ ವರೆಗೆ ನೋಂದಾಯಿಸಲ್ಪಟ್ಟ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಉದ್ಯೋಗ ಪಡೆದವರ ವಿವರಗಳನ್ನು ಕೋಷ್ಟಕ ೮.೨೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೧: ೧೯೯೭-೯೮ ರಿಂದ ೨೦೧೧-೧೨ರ ವರೆಗೆ ಜಿಲ್ಲಾ ಉದ್ಯೋಗ ವಿನಿಯಮ ಕಛೇರಿಯಲ್ಲಿ ನೋಂದಾಯಿಸಿಕೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿವರ**

| ವರ್ಷ | ನೋಂದಾಯಿಸಿಕೊಂಡವರು | | ಉದ್ಯೋಗ ಪಡೆದವರು | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ೧೯೯೭-೯೮ | ೭೪ | ೧೨ | – | – |
| ೧೯೯೮-೯೯ | ೯೪೬ | ೯೧ | ೫೫ | ೧೪ |
| ೧೯೯೯-೨೦೦೦ | ೧,೧೦೪ | ೬೨ | ೧೩೧ | ೨೩ |
| ೨೦೦೦-೦೧ | ೧,೦೧೭ | ೭೩ | ೧೮೬ | ೪೬ |
| ೨೦೦೧-೦೨ | ೧,೨೪೧ | ೧೧೨ | ೨೧ | ೦೪ |
| ೨೦೦೨-೦೩ | ೯೯೪ | ೬೭ | ೩೩ | ೦೬ |
| ೨೦೦೩-೦೪ | ೯೪೧ | ೫೪ | ೧೦ | – |
| ೨೦೦೪-೦೫ | ೧,೧೦೨ | ೮೦ | ೦೫ | – |
| ೨೦೦೫-೦೬ | ೮೯೨ | ೫೮ | ೦೯ | ೦೧ |
| ೨೦೦೬-೦೭ | ೭೯೧ | ೫೪ | ೦೮ | – |
| ೨೦೦೮-೦೯ | ೪೧೭ | ೫೪ | ೦೧ | – |
| ೨೦೦೯-೧೦ | ೪೬೧ | ೬೦ | ೦೧ | ೦೨ |
| ೨೦೧೦-೧೧ | ೪೦೦ | ೪೯ | ೦೬ | – |
| ೨೦೧೧-೧೨ | ೨೭೨ | ೪೪ | ೦೨ | ೦೧ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಚಾಮರಾಜನಗರ.*

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಖಾಲಿ ಹುದ್ದೆಗಳು ಹಾಗೂ ಭರ್ತಿಗೊಂಡ ಹುದ್ದೆಗಳ ವಿವರಗಳನ್ನು ಕೋಷ್ಟಕ ೮.೨೨ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೨: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಖಾಲಿ ಹುದ್ದೆಗಳು ಹಾಗೂ ಭರ್ತಿಗೊಂಡ ಹುದ್ದೆಗಳ ವಿವರ.**

| ವರ್ಷ | ನೋಂದಾಯಿಸಿಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೧೯೯೭-೯೮ | ೧೮೪ | – | – | – |
| ೧೯೯೮-೯೯ | ೨,೩೩೪ | ೫೬೪ | ೧೯೦ | – |
| ೧೯೯೯-೨೦೦೦ | ೨,೮೩೫ | ೧೭೦ | ೩೫೧ | – |
| ೨೦೦೦-೦೧ | ೨,೬೦೧ | ೭೭ | ೫೪೯ | – |
| ೨೦೦೧-೦೨ | ೨,೬೮೬ | ೪೬ | ೭೨ | – |
| ೨೦೦೨-೦೩ | ೨,೬೫೧ | ೬೯ | ೮೩ | – |
| ೨೦೦೩-೦೪ | ೨,೫೬೪ | ೨೮ | ೨೧ | – |
| ೨೦೦೪-೦೫ | ೨,೯೪೭ | ೨೫ | ೧೮ | – |
| ೨೦೦೫-೦೬ | ೨,೪೮೦ | ೦೭ | ೧೮ | – |

*ಮುಂದುವರೆದಿದೆ*

| ವರ್ಷ | ನೋಂದಾಯಿಸಿಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೨೦೦೬-೦೭ | ೨,೪೪೯ | ೧೩ | ೩೩ | – |
| ೨೦೦೮-೦೯ | ೧,೩೯೧ | ೦೧ | ೧೨ | – |
| ೨೦೦೯-೧೦ | ೧,೨೮೩ | ೦೫ | ೧೨ | – |
| ೨೦೧೦-೧೧ | ೧೩೦೩ | ೦೩ | ೧೧ | – |
| ೨೦೧೧-೨೦೧೨ | ೬೯೨ | ೦೩ | ೧೩ | – |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಚಾಮರಾಜನಗರ.*

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ನೆರವಿನೊಂದಿಗೆ ಕೇಂದ್ರ ಸರ್ಕಾರ, ಅರೆ ಕೇಂದ್ರ ಸರ್ಕಾರ, ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡ ವಿವರಗಳನ್ನು ಕೋಷ್ಟಕ ೮.೨೩ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೩: ೧೯೯೭-೯೮ ರಿಂದ ೨೦೧೧-೧೨ರ ವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಸೇವೆಯನ್ನು ಉಪಯೋಗಿಸಿಕೊಂಡ ಘಟಕಗಳು ಹಾಗೂ ಭರ್ತಿಗೊಂಡ ಬಗ್ಗೆ ವಿವರ.**

| ವರ್ಷಗಳು | ಸೇವೆಯನ್ನು ಉಪಯೋಗಿಸಿಕೊಂಡವರ ಸಂಖ್ಯೆ | | | | | | | ಭರ್ತಿಗೊಂಡವರ ಸಂಖ್ಯೆ | | | | | | |
|---|---|---|---|---|---|---|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೯೭-೯೮ | – | – | – | – | – | – | – | – | – | – | – | – | – | – |
| ೧೯೯೮-೯೯ | ೦೮ | ೦೨ | ೦೫ | ೦೬ | – | – | ೨೧ | ೦೩ | – | ೧೫೫ | ೩೨ | – | – | ೧೯೦ |
| ೧೯೯೯-೨೦೦೦ | ೧೦ | ೦೫ | ೧೩ | ೦೪ | – | ೦೩ | ೩೫ | ೧೧ | ೧೧ | ೩೨೯ | – | – | – | ೩೫೧ |
| ೨೦೦೦-೦೧ | ೦೭ | ೦೧ | ೦೩ | ೦೧ | – | ೦೧ | ೧೩ | ೦೨ | ೦೧ | ೫೩೯ | ೦೪ | – | ೦೩ | ೫೪೯ |
| ೨೦೦೧-೦೨ | ೦೭ | ೦೨ | ೦೮ | ೦೧ | – | – | ೧೮ | ೦೧ | ೦೪ | ೫೮ | ೦೯ | – | – | ೭೨ |
| ೨೦೦೨-೦೩ | ೧೦ | ೦೧ | ೦೨ | ೦೩ | – | – | ೧೬ | – | – | ೭೭ | ೦೬ | – | – | ೮೩ |
| ೨೦೦೩-೦೪ | ೦೯ | ೦೧ | – | – | – | ೦೨ | ೧೨ | ೦೧ | – | ೧೮ | ೦೧ | – | ೦೧ | ೨೧ |
| ೨೦೦೪-೦೫ | ೦೬ | – | ೦೧ | – | – | – | ೦೭ | ೦೧ | ೦೧ | ೧೬ | – | – | – | ೧೮ |
| ೨೦೦೫-೦೬ | ೦೪ | ೦೧ | ೦೨ | ೦೧ | – | ೦೧ | ೦೯ | – | ೦೫ | ೦೮ | – | ೦೫ | – | ೧೮ |
| ೨೦೦೬-೦೭ | ೦೬ | ೦೧ | ೦೨ | – | – | – | ೦೯ | ೦೩ | – | ೨೬ | ೦೪ | – | – | ೩೩ |
| ೨೦೦೮-೦೯ | ೦೧ | – | – | – | – | – | ೦೧ | – | – | ೦೯ | – | ೦೩ | – | ೧೨ |
| ೨೦೦೯-೧೦ | – | ೦೪ | ೦೧ | – | – | – | ೦೫ | – | – | ೧೧ | – | ೦೧ | – | ೧೨ |
| ೨೦೧೦-೧೧ | – | ೦೪ | – | – | – | – | ೦೪ | – | ೦೨ | ೦೫ | – | ೦೪ | – | ೧೧ |
| ೨೦೧೧-೧೨ | – | ೦೨ | – | – | – | – | ೦೨ | – | – | ೧೨ | – | ೦೧ | – | ೧೩ |

*ಆಧಾರ: ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಚಾಮರಾಜನಗರ.*

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯು ಮೂರು ತಿಂಗಳಿಗೊಮ್ಮೆ ಜಿಲ್ಲೆಯಲ್ಲಿನ ಕೇಂದ್ರ, ರಾಜ್ಯ, ಅರೆ ಸರ್ಕಾರ (ಕೇಂದ್ರ ಮತ್ತು ರಾಜ್ಯ), ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ವಲಯಗಳಲ್ಲಿನ ನಿಯೋಜಕರಿಂದ ಅವರ ಅಧೀನದಲ್ಲಿರುವ ಒಟ್ಟು ಉದ್ಯೋಗಿಗಳ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸುತ್ತದೆ. ಪ್ರತಿ ಮೂರು ತಿಂಗಳು, ಆರು ತಿಂಗಳು ಹಾಗೂ ವಾರ್ಷಿಕ ಮಾಹಿತಿಯನ್ನು ಕ್ರೋಢೀಕರಿಸಿ, ಪಟ್ಟಿಯನ್ನು ತಯಾರಿಸಿ, ನವದೆಹಲಿಯಲ್ಲಿರುವ ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯಕ್ಕೆ ಕಳುಹಿಸಿಕೊಡುತ್ತದೆ. ಈ ಮಾಹಿತಿ ಜಿಲ್ಲೆಯಲ್ಲಿನ ವಿವಿಧ ಉದ್ಯೋಗ ಕ್ಷೇತ್ರಗಳ ಸ್ವರೂಪ ಮತ್ತು ಉದ್ಯೋಗ ಬೇಡಿಕೆ ಪೂರೈಕೆಗಳ ಸಮತೋಲನ ಮತ್ತು ಅಸಮತೋಲನ ಮುಂತಾದ ವಿಶ್ಲೇಷಣೆಗಳನ್ನೊಳಗೊಂಡಿರುತ್ತದೆ. ಇದು ಮಾನವ ಶಕ್ತಿ ಸಂಪನ್ಮೂಲಗಳ ವಿಭಾಗದಲ್ಲಿ ಉದ್ಯೋಗ ಮತ್ತು ತರಬೇತಿ ಹಾಗೂ ಉದ್ಯೋಗ ಪ್ರವೃತ್ತಿಗಳ ಬಗ್ಗೆ ಅಧ್ಯಯನ ನಡೆಸಲು ಉಪಯುಕ್ತವಾಗಿರುತ್ತದೆ. ಜಿಲ್ಲೆಯಲ್ಲಿನ ಕೇಂದ್ರ, ರಾಜ್ಯ, ಅರೆರಾಜ್ಯ (ರಾಜ್ಯ ಹಾಗೂ ಕೇಂದ್ರ), ಸ್ಥಳೀಯ ಹಾಗೂ ಖಾಸಗಿ ವಲಯಗಳಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳ ವಿವರಗಳನ್ನು ಕೋಷ್ಟಕ ೮.೨೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೪: ೧೯೯೭–೯೮ ರಿಂದ ೨೦೦೯–೧೦ರ ವರೆಗಿನ ಕೇಂದ್ರ, ರಾಜ್ಯ, ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಸ್ಥರ ವಿವರ.**

| ವರ್ಷಗಳು | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ ವಲಯ | ಒಟ್ಟು |
|---|---|---|---|---|---|---|---|
| ೧೯೯೭–೯೮ | – | – | – | – | – | – | – |
| ೧೯೯೮–೯೯ | – | – | ೧೭೯ | ೧೧ | – | – | ೧೯೦ |
| ೧೯೯೯–೨೦೦೦ | ೦೮ | ೧೩ | ೩೩೦ | – | – | – | ೩೫೧ |
| ೨೦೦೦–೦೧ | ೦೨ | ೦೨ | ೫೩೮ | ೦೪ | – | ೦೩ | ೫೪೯ |
| ೨೦೦೧–೦೨ | ೦೫ | ೦೪ | ೫೪ | ೦೯ | – | – | ೭೨ |
| ೨೦೦೨–೦೩ | – | – | ೭೭ | ೦೬ | – | – | ೮೩ |
| ೨೦೦೩–೦೪ | ೦೧ | – | ೧೮ | ೦೧ | – | ೦೧ | ೨೧ |
| ೨೦೦೪–೦೫ | ೦೨ | – | ೧೫ | ೦೧ | – | – | ೧೮ |
| ೨೦೦೫–೦೬ | – | ೦೪ | ೦೮ | – | ೦೬ | – | ೧೮ |
| ೨೦೦೬–೦೭ | ೦೪ | – | ೨೫ | ೦೪ | – | – | ೩೩ |
| ೨೦೦೭–೦೮ | – | ೦೫ | ೨೧ | ೦೩ | – | – | ೨೯ |
| ೨೦೦೮–೦೯ | – | – | ೦೯ | – | ೦೩ | – | ೧೨ |
| ೨೦೦೯–೧೦ | – | – | ೧೧ | – | ೦೧ | – | ೧೨ |

*ಆಧಾರ: ಜಿಲ್ಲಾ ಉದ್ಯೋಗ ವಿನಿಯಮ ಕಛೇರಿ–ಚಾಮರಾಜನಗರ*

# ಭೂ ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮೊದಲಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ೧೯೯೯–೨೦೦೦ದಲ್ಲಿ ಜಿಲ್ಲೆಯ ಅರಣ್ಯ ಪ್ರದೇಶವು ಒಟ್ಟು ಭೌಗೋಳಿಕ ಪ್ರದೇಶದ ಶೇ. ೪೮.೩೬ರಷ್ಟಿದ್ದರೆ ೨೦೦೨–೦೩ರಲ್ಲಿ ಶೇ. ೪೮.೩೭ರಷ್ಟಾಗಿತ್ತು. ಮತ್ತೆ ೨೦೦೩–೦೪ರಲ್ಲಿ ಅರಣ್ಯ ಪ್ರದೇಶವು ಶೇ. ೪೮.೩೬ರಷ್ಟೇ ಇದೆ. ವ್ಯವಸಾಯೇತರ ಭೂಮಿಯು ೧೯೯೯–೨೦೦೦ರಿಂದ ೨೦೦೩–೦೪ರ ವರೆಗೆ ಶೇ. ೪.೩೦ರಷ್ಟಿದ್ದು, ಇದು ಸ್ಥಿರವಾಗಿದೆ. ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಿಲ್ಲದ ಪ್ರದೇಶವು ೧೯೯೯–೨೦೦೦ ರಿಂದ ೨೦೦೧–೨೦೦೨ರ ವರೆಗೆ ಶೇ. ೩.೭೬ರಷ್ಟಿದ್ದರೆ, ೨೦೦೨–೦೩ರಲ್ಲಿ ಶೇ. ೩.೭೭ಕ್ಕೆ ಹೆಚ್ಚಳಗೊಂಡಿತ್ತು. ಮತ್ತೆ ೨೦೦೩–೦೪ ರಲ್ಲಿ ಶೇ. ೩.೭೬ಕ್ಕೆ ಕಡಿಮೆಯಾಗಿದೆ. ಖಾಯಂ ಗೋಮಾಳ ಮತ್ತು ಹುಲ್ಲುಗಾವಲು ಪ್ರದೇಶವು ೧೯೯೯–೨೦೦೦ರಿಂದ ೨೦೦೧–೦೨ರ ವರೆಗೆ ಶೇ. ೩.೯೯ರಷ್ಟಿದ್ದರೆ, ೨೦೦೨–೦೩ರಲ್ಲಿ ಶೇ. ೪.೦೦ಕ್ಕೆ ಹೆಚ್ಚಳಗೊಂಡಿದೆ. ಮತ್ತೆ ೨೦೦೩–೦೪ರಲ್ಲಿ ಶೇ. ೩.೯೯ಕ್ಕೆ ಕುಸಿದಿದೆ. ನಿವ್ವಳ ಬಿತ್ತನೆಯಾದ ಪ್ರದೇಶವು ೧೯೯೯–೨೦೦೦ದಲ್ಲಿ ಶೇ. ೬೯.೯೪ ಆಗಿದ್ದು, ಇದು ೨೦೦೦–೦೧ರಲ್ಲಿ ಶೇ. ೭೨.೩೮ಕ್ಕೂ, ೨೦೦೧–೦೨ರಲ್ಲಿ ೬೯.೬೯ಕ್ಕೂ, ೨೦೦೨–೦೩ರಲ್ಲಿ ಶೇ. ೭೧.೩೯ಕ್ಕೂ, ೨೦೦೩–೦೪ರಲ್ಲಿ ಶೇ. ೬೯.೮೫ರಷ್ಟಾಗಿತ್ತು. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶವು ೧೯೯೯–೨೦೦೦ದಲ್ಲಿ ಶೇ. ೧೭.೭೦ರಷ್ಟಿತ್ತು. ಇದು ೨೦೦೦–೦೧ರಲ್ಲಿ ಶೇ. ೧೭.೮೬ರಷ್ಟು, ೨೦೦೧–೦೨ರಲ್ಲಿ ಶೇ. ೩೨.೮೯ರಷ್ಟು ಹೆಚ್ಚಳಗೊಂಡಿದ್ದರೆ, ಮತ್ತೆ ೨೦೦೨–೦೩ರಲ್ಲಿ ೨೫.೧೫ರಷ್ಟು ಹಾಗೂ ೨೦೦೩–೦೪ರಲ್ಲಿ ಶೇ. ೧೭.೯೭ರಷ್ಟಕ್ಕೆ ಕಡಿಮೆಯಾಗಿದೆ. ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಒಟ್ಟು ನೀರಾವರಿಯಾದ ಪ್ರದೇಶವು ೧೯೯೯–೨೦೦೦ದಲ್ಲಿ ಶೇ. ೨೯.೬೪, ೨೦೦೦–೦೧ರಲ್ಲಿ ಶೇ. ೨೮.೭೮, ೨೦೦೧–೦೨ರಲ್ಲಿ ಶೇ. ೩೦.೦೧, ೨೦೦೨–೦೩ರಲ್ಲಿ ಶೇ. ೩೮.೭೫ಕ್ಕೆ ಹೆಚ್ಚಳಗೊಂಡಿತ್ತು. ಮತ್ತೆ ೨೦೦೩–೦೪ರಲ್ಲಿ ಶೇ. ೨೪.೮೫ಕ್ಕೆ ಕಡಿಮೆಯಾಗಿದೆ.

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೫,೬೯,೯೦೧ ಹೆಕ್ಟೇರುಗಳಾಗಿದ್ದು, ಇದರಲ್ಲಿ ೨೦೦೫–೦೬ರಲ್ಲಿ ಅರಣ್ಯ ಪ್ರದೇಶ ೨,೭೫,೬೮೯ ಹೆ., ಸಾಗುವಳಿಗೆ ಲಭ್ಯವಿಲ್ಲದ (ವ್ಯವಸಾಯೇತರ ಹಾಗೂ ಬಂಜರು ಭೂಮಿ ಸೇರಿದಂತೆ) ಭೂಮಿ ೪೫,೯೪೦ ಹೆ., ಸಾಗುವಳಿಮಾಡದಿರುವ ಇತರೆ ಭೂಮಿ ೩೫,೧೨೮ ಹೆ., (ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ೭,೬೩೭ ಹೆ., ಖಾಯಂಗೋಮಾಳ ೨೨,೭೫೦ ಹೆ. ಹಾಗೂ ವೃಕ್ಷ ಮತ್ತು ತೋಪುಗಳು ೪೭೪೧ ಹೆ. ಸೇರಿದೆ). ಬೀಳುಭೂಮಿ ೩೬,೨೪೪ ಹೆ. (ಇದರಲ್ಲಿ ಚಾಲ್ತಿ ಬೀಳು ಭೂಮಿ ೧೨,೭೬೩ ಹೆ. ಇತರೆ ೨೩,೪೮೧ ಹೆ. ಸೇರಿದೆ) ಹಾಗೂ ಬಿತ್ತನೆಯಾದ ಪ್ರದೇಶ ೨,೧೬,೬೩೦ ಹೆ. (ಇದರಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ ೧,೭೬,೯೭೯ಹೆ., ಒಂದಕ್ಕಿಂತ ಹೆಚ್ಚು ಭಾರಿ ಬಿತ್ತನೆಯಾದ ಪ್ರದೇಶ ೩೯,೬೫೧ ಹೆ. ಸೇರಿದೆ) ಆಗಿತ್ತು. ಹಾಗೆಯೇ ೨೦೦೯–೧೦ರಲ್ಲಿ ೨೭೫೬೧೦ಹೆ ಅರಣ್ಯ, ೪೬೦೪೦ ಸಾಗುವಳಿಗೆ ಲಭ್ಯವಿಲ್ಲದ ಭೂಮಿ (೨೧೪೩೪ಹೆ ಬಂಜರು ಹಾಗೂ ೨೪೬೦೬ ವ್ಯವಸಾಯೇತರ ಭೂಮಿ), ೩೪೮೯ಹೆ ಸಾಗುವಳಿ ಮಾಡದಿರುವ ಇತರೆ ಭೂಮಿ (೭೬೩೭ ಸಾಗುವಳಿಗೆ ಯೋಗ್ಯವಾದ ಬಂಜರು, ೨೨೭೫೦ ಹೆ ಖಾಯಂ ಗೋಮಾಳ ಹಾಗೂ ೪೭೪೧ ವೃಕ್ಷ ಮತ್ತು ತೋಪುಗಳು), ೨೬೫೦೭ ಹೆ.ಬೀಳುಭೂಮಿ (೧೦೭೦೮ ಚಾಲ್ತಿ ಬೀಳೂಭೂಮಿ ಹಾಗೂ ೧೫೮೬೯ಹೆ ಇತರೆ ಬೀಳುಭೂಮಿ, ೨೨೫೨೮೮ ಬಿತ್ತನೆಯಾದ ಪ್ರದೇಶ (೧೮೬೬೧೬ ನಿವ್ವಳ ಹಾಗೂ ೩೮೬೭೨ ಹೆ ಒಂದಕ್ಕಿಂತ ಹೆಚ್ಚು) ಆಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೫ ಅನ್ನು ನೋಡಿ.

## ಕೋಷ್ಟಕ ೮.೨೫: ಚಾಮರಾಜನಗರ ಜಿಲ್ಲೆಯ ಭೂ ಬಳಕೆಯ ವಿವರ

| ವರ್ಷ | ಭೌಗೋಳಿಕ ವಿಸ್ತೀರ್ಣ | ಅರಣ್ಯ ಪ್ರದೇಶ | ಭೂ ಬಳಕೆ | | | | | | | | | | | | |
|---|---|---|---|---|---|---|---|---|---|---|---|---|---|---|---|
| | | | ಸಾಗುವಳಿಗೆ ಲಭ್ಯವಿರುವ ಭೂಮಿವಿ | | | ಸಾಗುವಳಿ ಮಾಡದಿರುವ ಇತರೆ ಭೂಮಿ | | | | ಬೀಳು ಭೂಮಿ | | | ಬಿತ್ತನೆಯಾದ ಪ್ರದೇಶ | | |
| | | | ವ್ಯವಸಾಯೇತರ | ಬಂಜರು | ಒಟ್ಟು | ಸಾಗುವಳಿಗೆ ಯೋಗ್ಯವಾದ ಬಂಜರು | ಖಾಯಂ ಗೋಮಾಳ | ವೃಕ್ಷ ಮತ್ತು ತೋಪುಗಳು | ಒಟ್ಟು | ಚಾಲ್ತಿ | ಇತರೆ | ಒಟ್ಟು | ನಿವ್ವಳ | ಒಂದಕ್ಕಿಂತ ಹೆಚ್ಚು | ಒಟ್ಟು |
| ೧೯೯೭-೯೮ | ೫,೬೯,೯೦೧ | ೨,೭೫,೬೧೦ | ೨,೭೫,೬೧೦ | ೨೧,೪೩೪ | ೨೪,೪೧೬ | ೪೫,೮೫೦ | ೮,೦೪೦ | ೨೨,೭೫೦ | ೪,೭೩೬ | ೩೫,೫೨೬ | ೨೫,೦೮೭ | ೨೯,೧೭೩ | ೧,೮೬,೫೬೫ | ೧,೫೮,೮೨೭ | ೨೮,೪೩೦ |
| ೧೯೯೮-೯೯ | ೫,೬೯,೯೦೧ | ೨,೭೫,೬೧೦ | ೨೧,೪೩೪ | ೨೪,೪೮೮ | ೪೫,೯೨೨ | ೮,೧೭೭ | ೨೨,೭೫೦ | ೪,೭೩೬ | ೩೫,೬೬೩ | ೨೮,೭೩೯ | ೩೨,೦೦೧ | ೬೦,೭೪೦ | ೧,೫೧,೯೬೬ | ೨೬,೮೩೧ | ೧,೭೮,೭೯೭ |
| ೧೯೯೯-೦೦ | ೫,೬೯,೯೦೧ | ೨,೭೫,೬೧೦ | ೨೧,೪೩೪ | ೨೪,೫೦೬ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೨೬,೮೦೬ | ೨೩,೪೧೦ | ೫೦,೨೧೫ | ೧,೬೩,೦೦೮ | ೨೬,೪೯೭ | ೧,೮೯,೫೦೫ |
| ೨೦೦೦-೦೧ | ೫,೬೯,೯೦೧ | ೨,೭೫,೬೧೦ | ೨೧,೪೩೪ | ೨೪,೫೦೬ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೩೧,೯೫೨ | ೨೬,೭೯೯ | ೫೮,೭೫೧ | ೧,೫೪,೪೭೨ | ೨೭,೩೪೩ | ೧,೮೧,೮೧೫ |
| ೨೦೦೧-೦೨ | ೫,೬೯,೯೦೧ | ೨,೭೫,೬೧೦ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೨೮,೩೭೯ | ೨೪,೯೦೯ | ೫೩,೨೮೮ | ೧,೫೯,೯೩೫ | ೨೮,೫೪೧ | ೧,೮೮,೪೭೬ |
| ೨೦೦೨-೦೩ | ೫,೬೯,೯೦೧ | ೨,೭೫,೬೧೦ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೩೫,೦೫೦ | ೨೪,೯೦೯ | ೫೯,೯೫೯ | ೧,೫೩,೨೬೪ | ೫೦,೪೧೮ | ೨,೦೩,೬೮೧ |
| ೨೦೦೩-೦೪ | ೫,೬೯,೯೦೧ | ೨,೭೫,೬೧೦ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೩೦,೬೫೯ | ೨೪,೯೦೯ | ೫೫,೫೬೮ | ೧,೫೭,೬೫೫ | ೩೯,೬೪೯ | ೧,೯೭,೩೦೪ |
| ೨೦೦೪-೦೫ | ೫,೬೯,೯೦೧ | ೨,೭೫,೬೧೦ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೧೩,೧೮೩ | ೨೪,೨೦೬ | ೩೭,೩೮೯ | ೧,೭೫,೮೩೪ | ೩೮,೫೦೭ | ೨,೧೪,೩೪೧ |
| ೨೦೦೫-೦೬ | ೫,೬೯,೯೦೧ | ೨,೭೫,೬೧೦ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೧೨,೭೬೩ | ೨೩,೪೮೧ | ೩೬,೨೪೪ | ೧,೭೬,೯೭೯ | ೩೯,೬೫೧ | ೨,೧೬,೬೩೦ |
| ೨೦೦೬-೦೭ | ೫,೬೯,೯೦೧ | ೨,೭೫,೬೦೯ | ೨೪,೫೦೬ | ೨೧,೪೩೪ | ೪೫,೯೪೦ | ೭,೬೩೭ | ೨೨,೭೫೦ | ೪,೭೪೧ | ೩೫,೧೨೮ | ೧೨,೧೯೭ | ೩೪,೬೫೩ | ೩೬,೮೫೦ | ೧,೭೬,೩೭೩ | ೨೫,೩೨೨ | ೨,೦೧,೬೯೫ |
| ೨೦೦೮-೦೯ | ೫,೬೯,೯೦೧ | ೨,೭೫,೬೧೦ | ೨೪,೬೦೬ | ೨೧,೪೩೪ | ೪೬,೦೪೦ | ೭,೬೩೭ | ೨೨,೭೫೦ | ೪,೭೮೨ | ೩೫,೧೬೯ | ೭,೭೪೩ | ೧೩,೫೦೧ | ೨೧,೨೪೪ | ೧,೯೧,೮೩೮ | ೩೮,೭೦೬ | ೨,೩೦,೫೪೪ |
| ೨೦೦೯-೧೦ | ೫,೬೯,೯೦೧ | ೨,೭೫,೬೧೦ | ೨೪,೬೦೬ | ೨೧,೪೩೪ | ೪೬,೦೪೦ | ೭,೬೩೭ | ೨೨,೭೫೦ | ೪,೭೪೧ | ೩೪,೮೯೯ | ೧೦,೭೦೮ | ೧೫,೭೯೯ | ೨೬,೫೦೭ | ೧,೮೬,೬೧೬ | ೩೮,೬೭೨ | ೨,೨೫,೨೮೮ |

## ಭೂ ಹಿಡುವಳಿ

ಭೂಹಿಡುವಳಿ ಜಿಲ್ಲೆಯಲ್ಲಿ ಕೃಷಿ ಗಣತಿಯ ಪ್ರಕಾರ ೨೦೦೦–೦೧ರಲ್ಲಿ ಸರಾಸರಿ ಭೂ ಹಿಡುವಳಿ ಗಾತ್ರ ೧.೧೨ ಹೆ. ಆಗಿತ್ತು. ಪರಿಶಿಷ್ಟ ಜಾತಿಯವರ ಸರಾಸರಿ ಭೂ ಹಿಡುವಳಿಯ ಗಾತ್ರ ೦.೯೧ಹೆ., ಪರಿಶಿಷ್ಟ ಪಂಗಡದವರ ಸರಾಸರಿ ಭೂ ಹಿಡುವಳಿಯ ಗಾತ್ರ ೧.೦೦ ಹೆ., ಸರಾಸರಿ ಎಲ್ಲಾ ಜಾತಿಗಳ ಸಣ್ಣ ಭೂ ಹಿಡುವಳಿ ಗಾತ್ರ ೧.೪೧ಹೆ., ಸರಾಸರಿ ಎಲ್ಲಾ ಜಾತಿಗಳ ಅರೆ ಮಧ್ಯಮ (Semi medium) ಭೂ ಹಿಡುವಳಿ ಗಾತ್ರ ೨.೬೩ಹೆ, ಸರಾಸರಿ ಎಲ್ಲಾ ಜಾತಿಗಳ ಮಧ್ಯಮ ಭೂ ಹಿಡುವಳಿ ಗಾತ್ರ ೫.೪೮ಹೆ., ಸರಾಸರಿ ಎಲ್ಲಾ ಜಾತಿಗಳ ದೊಡ್ಡ ಪ್ರಮಾಣದ ಭೂ ಹಿಡುವಳಿ ಗಾತ್ರ ೧೪.೯೭ಹೆಕ್ಟೇರುಗಳಾಗಿತ್ತು.

ಜಿಲ್ಲೆಯಲ್ಲಿ ೨೦೦೫–೦೬ರ ಕೃಷಿ ಗಣತಿಯಂತೆ ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂ ಹಿಡುವಳಿ ಹೊಂದಿದ್ದರೆ, ಅಂತಹವರನ್ನು ಸಣ್ಣ ಹಿಡುವಳಿ (ಮಾರ್ಜಿನಲ್)ದಾರರೆಂತಲೂ, ಆ ಪ್ರಕಾರ ೧,೨೦,೦೨೮ ಅತಿ ಸಣ್ಣ ಭೂ ಹಿಡುವಳಿದಾರರಿದ್ದು, ೫೩,೪೨೬ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದರು. ೧–೨ ಹೆಕ್ಟೇರ್ ಭೂ ಹಿಡುವಳಿ ಹೊಂದಿದ್ದರೆ, ಅಂತಹವರನ್ನೂ ಸಣ್ಣ ಹಿಡುವಳಿದಾರರೆಂತಲೂ, ಇವರ ಸಂಖ್ಯೆ ೫೧,೯೬೭ ಆಗಿದ್ದು, ೭೨,೩೩೭ ಹೆಕ್ಟೇರ್ ಪ್ರದೇಶವನ್ನು ಹೊಂದಿದ್ದರು. ೨–೪–ಹೆಕ್ಟೇರ್ ಭೂ ಹಿಡುವಳಿ ಹೊಂದಿದ್ದರೆ ಅರೆ ಮಧ್ಯಮ ಹಿಂಡುವಳಿದಾರರೆಂತಲೂ, ಇವರ ಸಂಖ್ಯೆ ೨೦,೬೩೧ ಆಗಿದ್ದು, ೫೪,೫೪೧ ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದರು. ೪–೧೦ ಹೆ. ವಿಸ್ತೀರ್ಣ ಹೊಂದಿದ್ದರೆ ಅವರನ್ನು ಮಧ್ಯಮ ಭೂ ಹಿಡುವಳಿದಾರರೆಂತಲೂ, ಇವರ ಸಂಖ್ಯೆ ೪,೮೦೪ ಆಗಿದ್ದು, ೨೬,೧೨೧ ಹೆ. ಭೂ ವಿಸ್ತೀರ್ಣ ಹೊಂದಿದ್ದರು. ೧೦ ಹೆಕ್ಟೇರ್‌ಗಳಿಗಿಂತ ಹೆಚ್ಚು ಭೂಮಿ ಹೊಂದಿದ್ದರೆ, ಅವರನ್ನು ದೊಡ್ಡ ಹಿಡುವಳಿದಾರರೆಂತಲೂ, ಇವರ ಸಂಖ್ಯೆ ೩೫೧ ಆಗಿದ್ದು, ೫,೨೩೩ ಭೂ ವಿಸ್ತೀರ್ಣ ಹೊಂದಿದ್ದರು. ಹೀಗೆ ಜಿಲ್ಲೆಯಲ್ಲಿ ಒಟ್ಟು ೧೯೭೭೮೧ ಮಂದಿ ಭೂ ಹಿಡುವಳಿದಾರರಿದ್ದು, ೨೧೧೬೫೮ ಹೆಕ್ಟೇರ್ ವಿಸ್ತೀರ್ಣವನ್ನು ಹೊಂದಿದ್ದರು. ಜಿಲ್ಲೆಯಲ್ಲಿ ಸಣ್ಣ ಸಣ್ಣ ಭೂ ಹಿಡುವಳಿದಾರರ ಸಂಖ್ಯೆ ಹೆಚ್ಚಾಗಿರುವುದು ಈ ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೬ರಲ್ಲಿ ನೋಡಿ.

**ಕೋಷ್ಟಕ ೮.೨೬ ತಾಲೂಕುವಾರು ಭೂ–ಹಿಡುವಳಿದಾರ ಸಂಖ್ಯೆ ಹಾಗೂ ಅವರು ಹೊಂದಿದ್ದ ಭೂವಿಸ್ತೀರ್ಣದ ವಿವರ**

| ೧೯೯೫–೯೬ರ ಕೃಷಿ ಗಣತಿ | | | | | | | | | | | | |
|---|---|---|---|---|---|---|---|---|---|---|---|---|
| ತಾಲ್ಲೂಕು | ಅತಿ ಸಣ್ಣ ೧ ಹೆಕ್ಟೇರ್‌ಗಿಂತ ಕಡಿಮೆ | | ಸಣ್ಣ ೧–೨ ಹೆಕ್ಟೇರ್ | | ಅರೆ ಮಧ್ಯಮ ೨–೪ ಹೆಕ್ಟೇರ್ | | ಮಧ್ಯಮ ೪–೧೦– ಹೆಕ್ಟೇರ್ | | ದೊಡ್ಡ ೧೦ ಹೆಕ್ಟೇರ್ ಗಿಂತ ಹೆಚ್ಚು | | ಒಟ್ಟು | |
| | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ಚಾಮರಾಜ ನಗರ | ೩೦,೯೬೪ | ೧೫,೮೯೦ | ೧೬,೫೯೩ | ೨೩,೬೦೨ | ೭,೧೮೯ | ೧೯,೦೪೩ | ೨,೦೧೧ | ೧೧,೦೮೨ | ೧೭೯ | ೨,೬೯೫ | ೫೬,೯೩೬ | ೭೧,೫೧೨ |
| ಗುಂಡ್ಲುಪೇಟೆ | ೧೬,೨೯೮ | ೮,೮೬೦ | ೧೨,೯೩೩ | ೧೮,೬೦೫ | ೬,೭೬೬ | ೧೭,೮೬೪ | ೧,೯೩೩ | ೧೦,೬೯೯ | ೧೫೭ | ೨,೨೩೦ | ೩೮,೦೮೭ | ೫೮,೨೫೮ |
| ಕೊಳ್ಳೇಗಾಲ | ೨೫,೫೦೭ | ೧೩,೭೯೦ | ೧೫,೭೭೦ | ೨೨,೫೨೩ | ೬,೭೬೪ | ೧೭,೨೫೧ | ೧,೨೯೬ | ೭,೦೨೪ | ೭೭ | ೧,೫೬೨ | ೪೯,೪೧೪ | ೬೨,೧೫೦ |
| ಯಳಂದೂರು | ೧೧,೪೬೮ | ೪,೦೯೧ | ೧,೯೨೦ | ೨,೫೮೯ | ೭೭೨ | ೧,೯೭೭ | ೨೧೧ | ೧,೧೪೭ | ೧೪ | ೧೬೭ | ೧೪,೩೮೫ | ೯,೭೭೧ |
| **ಜಿಲ್ಲಾ ಮೊತ್ತ** | **೮೪,೨೩೭** | **೪೧,೮೩೧** | **೪೭,೨೧೬** | **೬೭,೩೧೯** | **೨೪,೪೯೧** | **೫೬,೧೩೫** | **೫,೪೫೧** | **೨೯,೯೫೨** | **೪೨೭** | **೬,೬೫೪** | **೧,೫೮,೮೨೨** | **೨,೦೧,೮೯೧** |

| ತಾಲ್ಲೂಕುಗಳು | ಅತಿ ಸಣ್ಣ ೧ ಹೆಕ್ಟೇರ್‌ಗಿಂತ ಕಡಿಮೆ | | ಸಣ್ಣ ೧-೨ ಹೆಕ್ಟೇರ್ | | ಅರೆ ಮಧ್ಯಮ ೨-೪ ಹೆಕ್ಟೇರ್ | | ಮಧ್ಯಮ ೪-೧೦- ಹೆಕ್ಟೇರ್ | | ದೊಡ್ಡ ೧೦ ಹೆಕ್ಟೇರ್ ಕ್ಕಿಂತ ಹೆಚ್ಚು | | ಒಟ್ಟು | |
|---|---|---|---|---|---|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| **೨೦೦೦-೦೧ ಕೃಷಿ ಗಣತಿ** | | | | | | | | | | | | |
| ಚಾಮರಾಜ ನಗರ | ೪೧,೨೭೪ | ೧೮,೭೧೫ | ೧೭,೬೯೪ | ೨೪,೫೭೦ | ೬,೪೯೧ | ೧೭,೦೫೨ | ೧,೬೬೮ | ೯,೦೪೦ | ೧೧೯ | ೧,೫೨೪ | ೬೭,೨೪೬ | ೭೦,೯೦೧ |
| ಗುಂಡ್ಲುಪೇಟೆ | ೨೧,೧೧೪ | ೧೦,೯೮೦ | ೧೩,೭೪೯ | ೧೯,೪೫೮ | ೬,೧೧೯ | ೧೬,೨೦೪ | ೧,೫೮೨ | ೮,೭೭೨ | ೧೨೪ | ೧,೮೨೫ | ೪೨,೬೮೮ | ೫೭,೨೩೯ |
| ಕೊಳ್ಳೇಗಾಲ | ೨೯,೩೧೭ | ೧೪,೯೭೯ | ೧೬,೦೮೬ | ೨೩,೨೨೮ | ೬,೫೬೧ | ೧೭,೨೩೯ | ೧,೧೬೬ | ೬,೩೮೫ | ೭೪ | ೧,೧೦೧ | ೫೩,೨೦೪ | ೬೨,೯೩೨ |
| ಯಳಂದೂರು | ೧೪,೦೫೦ | ೪,೫೩೯ | ೨,೦೦೩ | ೨,೬೫೧ | ೭೦೭ | ೧,೮೪೮ | ೧೫೧ | ೮೧೯ | ೨೩ | ೩೧೬ | ೧೬,೯೩೪ | ೧೦,೧೭೩ |
| ಜಿಲ್ಲಾ ಮೊತ್ತ | ೧,೦೫,೭೫೫ | ೪೯,೨೧೩ | ೪೯,೫೩೨ | ೬೯,೯೦೭ | ೧೯,೮೬೮ | ೫೨,೩೪೩ | ೪,೫೬೭ | ೨೫,೦೧೬ | ೩೫೦ | ೪,೭೬೬ | ೧,೮೦,೦೭೨ | ೨,೦೧,೨೪೫ |
| **೨೦೦೫-೦೬ರ ಕೃಷಿ ಗಣತಿ** | | | | | | | | | | | | |
| ಚಾಮರಾಜ ನಗರ | ೪೪,೫೨೬ | ೧೯,೬೪೯ | ೧೭,೯೫೬ | ೨೪,೮೧೩ | ೬,೫೨೫ | ೧೭,೩೧೧ | ೧,೬೮೬ | ೯,೦೧೯ | ೧೧೪ | ೧,೭೩೮ | ೭೦,೮೦೭ | ೭೨,೫೩೦ |
| ಗುಂಡ್ಲುಪೇಟೆ | ೨೩,೨೮೭ | ೧೧,೯೨೧ | ೧೪,೭೫೮ | ೨೦,೮೪೭ | ೬,೩೬೮ | ೧೭,೪೧೩ | ೧,೭೧೬ | ೯,೪೮೮ | ೧೨೪ | ೧,೭೨೨ | ೪೬,೨೫೩ | ೬೧,೩೯೧ |
| ಕೊಳ್ಳೇಗಾಲ | ೩೬,೩೮೫ | ೧೭,೦೯೭ | ೧೭,೩೫೪ | ೨೪,೧೭೪ | ೭,೦೧೬ | ೧೭,೯೭೫ | ೧,೨೩೯ | ೬,೬೮೯ | ೯೨ | ೧,೪೫೬ | ೬೨,೦೮೬ | ೬೭,೩೯೧ |
| ಯಳಂದೂರು | ೧೫,೮೩೦ | ೪,೭೫೯ | ೧,೮೯೯ | ೨,೫೦೩ | ೭೨೨ | ೧,೮೪೨ | ೧೬೩ | ೯೨೫ | ೨೧ | ೩೧೭ | ೧೮,೬೩೫ | ೧೦,೩೪೬ |
| ಜಿಲ್ಲಾ ಮೊತ್ತ | ೧,೨೦,೦೨೮ | ೫೩,೪೨೬ | ೫೧,೯೬೭ | ೭೨,೩೩೭ | ೨೦,೬೩೧ | ೫೪,೫೪೧ | ೪,೮೦೪ | ೨೬,೧೨೧ | ೩೫೧ | ೫,೨೩೩ | ೧,೯೭,೭೮೧ | ೨,೧೧,೬೫೮ |

# ನೀರಾವರಿ

ಚಾಮರಾಜನಗರ ಜಿಲ್ಲೆಯು ಪ್ರಧಾನವಾಗಿ ಮಳೆಯಾಧಾರಿತ ಜಿಲ್ಲೆಯಾಗಿದ್ದು, ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ, ಜನರು ತಮ್ಮ ಜೀವನೋಪಾಯಕ್ಕಾಗಿ ಬಹುಪಾಲು ಬೇಸಾಯವನ್ನೇ ಅವಲಂಭಿಸಿದ್ದಾರೆ. ಜಿಲ್ಲೆಯಲ್ಲಿ ಸುವರ್ಣಾವತಿ, ಉಡುತೊರೆಹಳ್ಳ ಜಲಾಶಯ, ಗುಂಡಾಲ್ ಜಲಾಶಯ ಹಾಗೂ ಕಬಿನಿ ಬಲದಂಡೆ ಹಾಗೂ ಎಡದಂಡೆ ಕಾಲುವೆಗಳಿಂದ ನೀರಾವರಿ ಸೌಲಭ್ಯವಿದ್ದರೂ ರೈತರು ಕೃಷಿಗಾಗಿ ಮಳೆಯನ್ನೇ ನೆಚ್ಚಿಕೊಂಡಿದ್ದಾರೆ. ೧೯೮೪–೮೫ರಲ್ಲಿ ಚಾಮರಾಜನಗರ ತಾಲೂಕು ೪೯ ಹೆಕ್ಟೇರ್ ಕಾಲುವೆಗಳಿಂದಲೂ, ೨೧೧ ಹೆಕ್ಟೇರ್ ಕೆರೆಗಳಿಂದಲೂ, ೨೮೭೦ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ ನೀರಾವರಿ ಸೌಲಭ್ಯ ಪಡೆದಿತ್ತು. ಹಾಗೆಯೇ ಗುಂಡ್ಲುಪೇಟೆ ತಾಲೂಕು ೮೭೩ ಹೆಕ್ಟೇರ್ ಕೆರೆಗಳಿಂದಲೂ, ೪೫೩೭ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ, ೨೨ ಹೆಕ್ಟೇರ್ ಇತರೆ ನೀರಾವರಿ ಮೂಲಗಳಿಂದಲೂ, ಕೊಳ್ಳೇಗಾಲ ತಾಲೂಕು ೨೫೨ ಹೆಕ್ಟೇರ್ ಕಾಲುವೆಗಳಿಂದಲೂ, ೨೧೮ ಹೆಕ್ಟೇರ್ ಕೆರೆಗಳಿಂದಲೂ, ೯೬೩೯ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ, ೩೮೯ ಹೆಕ್ಟೇರ್ ಇತರೆ ನೀರಾವರಿ ಮೂಲಗಳಿಂದಲೂ ಹಾಗೂ ಯಳಂದೂರು ತಾಲೂಕು ೧,೧೦೮ ಹೆಕ್ಟೇರ್ ಕೆರೆಗಳಿಂದಲೂ, ೧,೪೬೬ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ ನೀರಾವರಿ ಸೌಲಭ್ಯ ಪಡೆದುಕೊಳ್ಳುತ್ತಿದ್ದವು. ಇದೇ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಯ ತಾಲೂಕುಗಳಲ್ಲಿ ಲಭ್ಯವಿದ್ದ ನೀರಾವರಿ ಮೂಲಗಳು ಹೀಗಿವೆ. ಚಾಮರಾಜನಗರ ತಾಲೂಕಿನಲ್ಲಿ ೩೧,೫೫೭ ಹೆಕ್ಟೇರ್ ಆಗುವಷ್ಟು ಮೇಲ್ಜಲ ಹಾಗೂ ೫,೬೫೨ ಹೆಕ್ಟೇರ್ ಅಂತರರ್ಜಲ ಹೀಗೆ

ಒಟ್ಟು ೩೭,೨೮೯ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಬಹುದಾಗಿತ್ತು. ಹಾಗೆಯೇ ಗುಂಡ್ಲುಪೇಟೆ ತಾಲೂಕಿನಲ್ಲಿ ಕ್ರಮವಾಗಿ ೫,೭೬೪ ಹೆಕ್ಟೇರ್, ೧,೮೫೬ ಹೆಕ್ಟೇರ್ ಹೀಗೆ ಒಟ್ಟು ೭,೬೨೦ ಹೆಕ್ಟೇರ್, ಕೊಳ್ಳೇಗಾಲ ತಾಲೂಕಿನಲ್ಲಿ ೨೫,೧೩೬ ಹೆಕ್ಟೇರ್, ೮,೫೯೮ ಹೆಕ್ಟೇರ್ ಹೀಗೆ ಒಟ್ಟು ೩೩,೭೩೪ ಹೆಕ್ಟೇರ್ ಹಾಗೂ ಯಳಂದೂರು ೧೨,೩೯೭ ಹೆಕ್ಟೇರ್, ೮೨೯ ಹೆಕ್ಟೇರ್ ಹೀಗೆ ಒಟ್ಟು ೧೩,೨೨೬ ಹೆಕ್ಟೇರಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿತ್ತು. ಹೀಗೆ ಜಿಲ್ಲೆಯಲ್ಲಿ ಒಟ್ಟು ೯೧,೭೪೯ ಹೆಕ್ಟೇರಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದ್ದರೂ, ಕೇವಲ ೨೧,೬೦೪ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನಿವ್ವಳ ನೀರಾವರಿ ಸೌಲಭ್ಯ ಕಲ್ಪಸಲಾಗಿತ್ತು. ೧೯೯೬–೯೭ರಲ್ಲಿ ಒಟ್ಟು ೩೬,೫೪೯ ಹೆಕ್ಟೇರು ಪ್ರದೇಶ ನಿವ್ವಳ ನೀರಾವರಿ ಪ್ರದೇಶವಾಗಿತ್ತು. ಅದರಲ್ಲಿ ೭,೭೬೨ ಹೆಕ್ಟೇರ್ ಕಾಲುವೆಗಳಿಂದಲೂ, ೪,೭೭೭ ಹೆಕ್ಟೇರ್ ಕೆರೆಗಳಿಂದಲೂ, ೧೯,೭೮೪ ಹೆಕ್ಟೇರ್ ಬಾವಿಗಳಿಂದಲೂ, ೩,೪೦೧ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ ಹಾಗೂ ೬೭೫ ಹೆಕ್ಟೇರ್ ಪ್ರದೇಶ ಇತರೆ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದಿತ್ತು. ೨೦೦೯–೧೦ರಲ್ಲಿ ಜಿಲ್ಲೆಯಲ್ಲಿ ೧೨,೭೨೬ ಹೆಕ್ಟೇರ್ ಪ್ರದೇಶ ಕಾಲುವೆಗಳಿಂದಲೂ, ೫೨೬೦ ಹೆಕ್ಟೇರ್ ಕೆರೆಗಳಿಂದಲೂ, ೪೪೩೦೨ ಹೆಕ್ಟೇರ್ ಬಾವಿಗಳಿಂದಲೂ, ೪೯೫೧ ಹೆಕ್ಟೇರ್ ಕೊಳವೆ ಬಾವಿಗಳಿಂದಲೂ ಹಾಗೂ ೪೩೨ ಹೆ. ಏತ ನೀರಾವರಿಯಿಂದ ಹೀಗೆ ಒಟ್ಟು ೬೭,೬೭೧ ಹೆಕ್ಟೇರ್ ಪ್ರದೇಶದಲ್ಲಿ ನಿವ್ವಳ ನೀರಾವರಿಯಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೭ ಅನ್ನು ನೋಡಿ.

**ಕೋಷ್ಟಕ ೮.೨೭: ಜಿಲ್ಲೆಯಲ್ಲಿ ೧೯೯೭–೯೮ ರಿಂದ ೨೦೦೯–೧೦ರ ವರೆಗೆ ವಿವಿಧ ಮೂಲಗಳಿಂದ ನೀರಾವರಿಯಾದ ಪ್ರದೇಶ**

*(ಹೆಕ್ಟೇರುಗಳಲ್ಲಿ)*

| ನೀರಾವರಿಯ ಮೂಲಗಳು | ೧೯೯೭–೯೮ | ೨೦೦೦–೦೧ | ೨೦೦೫–೦೬ | ೨೦೦೬–೦೭ | ೨೦೦೮–೦೯ | ೨೦೦೯–೧೦ |
|---|---|---|---|---|---|---|
| **ಕಾಲುವೆಗಳು** | ೭,೭೬೨ | ೧೧,೫೪೦ | ೭,೯೩೬ | ೭,೧೯೬ | ೧೨,೯೪೦ | ೧೨,೭೨೬ |
| **ಕೆರೆಗಳು** | ೪,೭೭೭ | ೪,೭೧೨ | ೬,೨೪೦ | ೬,೯೮೨ | ೯,೧೧೨ | ೫,೨೬೦ |
| **ಬಾವಿಗಳು** | ೧೯,೭೮೪ | ೧೭,೩೮೮ | ೩,೫೯೫ | ೩,೪೦೪ | ೬,೫೬೨ | ೪,೯೫೧ |
| **ಕೊಳವೆ ಬಾವಿಗಳಿಂದ** | ೩,೪೦೧ | ೧೨,೨೫೫ | ೪೦,೫೯೨ | ೪೩,೧೨೮ | ೩೮,೫೦೦ | ೪೪,೩೦೨ |
| **ಏತ ನೀರಾವರಿ ಯಿಂದ** | – | ೯೦೦ | ೪೦೦ | ೫೦೦ | ೫೦೦ | ೪೩೨ |
| **ಇತರೆ ಜಲ ಮೂಲಗಳಿಂದ** | ೬೯೫ | – | – | – | ೧೬ | – |
| **ಒಟ್ಟು** | **೩೬,೫೪೯** | **೪೬,೭೯೫** | **೫೮,೭೨೭** | **೬೧,೨೧೦** | **೬೭,೬೨೬** | **೬೭,೬೭೧** |

*ಆಧಾರ: ಚಾಮರಾಜನಗರ ಜಿಲ್ಲಾ ಅಂಕಿ ಅಂಶಗಳ ನೋಟ ೧೯೯೭–೯೮ ರಿಂದ ೨೦೦೭–೦೮*

## ಬೆಳೆಗಳು

ಜಿಲ್ಲೆಯಲ್ಲಿ ಧಾನ್ಯಗಳಾದ ಭತ್ತ, ರಾಗಿ, ಜೋಳ, ಸಜ್ಜೆ, ಗೋಧಿ, ಮುಸುಕಿನ ಜೋಳ ಮುಂತಾದ ಏಕದಳ ಹಾಗೂ ಉಪತೃಣ ಧನ್ಯಗಳು, ಕಡಲೆ, ತೊಗರಿ ಮುಂತಾದ ದ್ವಿದಳ ಧಾನ್ಯಗಳು, ಶೇಂಗಾ, ಸೂರ್ಯಕಾಂತಿ ಮುಂತಾದ ಎಣ್ಣೆಕಾಳುಗಳು ಹಾಗೂ ಇತರೆ ಆಹಾರೇತರ ಬೆಳೆಗಳನ್ನು ಬೆಳೆಯಲಾಗುತ್ತಿದೆ. ೧೯೯೭–೯೮ರಲ್ಲಿ ೬೨,೦೪೯ ಹೆಕ್ಟೇರ್ ಪ್ರದೇಶದಲ್ಲಿ ಏಕದಳ ಧಾನ್ಯಗಳನ್ನು, ೩೩,೮೪೯ ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲಾಗಿತ್ತು. ೨೦೦೬–೦೭ರಲ್ಲಿ ೮೩,೫೪೫ ಹೆಕ್ಟೇರ್ ಪ್ರದೇಶದಲ್ಲಿ ಏಕದಳ ಧಾನ್ಯಗಳನ್ನು, ೩೮,೯೫೫ ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು, ೧,೨೨,೫೦೦ ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು ಆಹಾರ ಧಾನ್ಯಗಳನ್ನು ಹಾಗೂ ೩೨,೬೩೦ ಹೆಕ್ಟೇರ್ ಪ್ರದೇಶದಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲಾಗುತ್ತಿತ್ತು. ಅಲ್ಲದೆ ೩,೭೯೪ ಹೆಕ್ಟೇರ್ ಪ್ರದೇಶದಲ್ಲಿ ಹಣ್ಣುಗಳನ್ನು, ೪,೧೪೯ ಹೆಕ್ಟೇರ್ ಪ್ರದೇಶದಲ್ಲಿ ತರಕಾರಿಗಳನ್ನು, ೧೨,೮೩೪ ಹೆಕ್ಟೇರ್ ಪ್ರದೇಶದಲ್ಲಿ

ಕಬ್ಬು, ೧೩೧ ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು, ೧,೫೧೧ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ, ೪೧ ಹೆಕ್ಟೇರ್ ಪ್ರದೇಶದಲ್ಲಿ ತೇಗ, ೨೪,೦೯೫ ಹೆಕ್ಟೇರ್ ಪ್ರದೇಶದಲ್ಲಿ ಇತರೆ ಬೆಳೆಗಳು ಹೀಗೆ ಒಟ್ಟು ೨,೦೧,೬೯೫ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯಲಾಗುತ್ತಿತ್ತು.

೨೦೦೮–೦೯ರಲ್ಲಿ ಜಿಲ್ಲೆಯಲ್ಲಿ ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳಲ್ಲಿ, ೧೯೨೯೪ ಹೆ.ನಲ್ಲಿ ಭತ್ತ, ೨೦೨೭೭ ಹೆ.ನಲ್ಲಿ ರಾಗಿ, ೧೭೯೨೨ ಹೆ.ನಲ್ಲಿ ಜೋಳ, ೪೭೯ ಹೆ.ನಲ್ಲಿ ಸಜ್ಜೆ, ೪೧೪೩೧ ಹೆ.ನಲ್ಲಿ ಮುಸುಕಿನ ಜೋಳ ಹಾಗೂ ೩೮ ಹೆ.ನಲ್ಲಿ ಉಪತೃಣ ಬೆಳೆಗಳನ್ನು ಬೆಳೆಯಲಾಗುತ್ತಿದ್ದು, ೨೦೫೪೭೧ ಮೆಟ್ರಿಕ್ ಟನ್ ಏಕದಳ ಹಾಗೂ ಉಪತೃಣ ಧಾನ್ಯಗಳನ್ನು ಉತ್ಪಾದಿಸಲಾಗಿತ್ತು. ಒಟ್ಟು ದ್ವಿದಳ ಧಾನ್ಯಗಳಲ್ಲಿ ೨೩೪೯ ಹೆ.ನಲ್ಲಿ ತೊಗರಿ, ೩೫೦೧ ಹೆ.ನಲ್ಲಿ ಕಡಲೆ, ೩೨,೪೭೩ ಹೆ.ನಲ್ಲಿ ಇತರೆ ದ್ವಿದಳ ಧಾನ್ಯಗಳನ್ನು ಬೆಳೆಯಲಾಗುತ್ತಿದ್ದು, ೧೬೮೧೭ ಮೆಟ್ರಿಕ್ ಟನ್ ದ್ವಿದಳ ಧಾನ್ಯಗಳನ್ನು ಉತ್ಪಾದಿಸಲಾಗಿತ್ತು. ತೋಟಗಾರಿಕಾ ಬೆಳೆಗಳಲ್ಲಿ ೧೬೪೪೮ ಹೆ.ನಲ್ಲಿ ನೆಲಗಡಲೆ, ೮೬೬೫ ಹೆ.ನಲ್ಲಿ ಕಬ್ಬು, ೪೩೩ ಹೆ.ನಲ್ಲಿ ಹತ್ತಿ ಬೆಳೆಯಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೮ ಅನ್ನು ನೋಡಿ.

**ಕೋಷ್ಟಕ ೮.೨೮: ಚಾಮರಾಜನಗರ ಜಿಲ್ಲೆಯಲ್ಲಿನ ಆಹಾರ ಪದಾರ್ಥಗಳ ಉತ್ಪಾದನಾ ವಿವರ.**

| ಆಹಾರ ಪದಾರ್ಥಗಳು | | ೧೯೯೯–೨೦೦೦ | ೨೦೦೪–೦೫ | ೨೦೦೭–೦೮ | ೨೦೦೮–೦೯ | ೨೦೦೯–೧೦ |
|---|---|---|---|---|---|---|
| ಏಕದಳ ಮತ್ತು ಉಪತೃಣ ಧಾನ್ಯಗಳು | ವಿಸ್ತೀರ್ಣ | ೭೦,೨೧೭ | ೮೬,೨೧೯ | ೯೪,೪೩೮ | ೯೯,೪೪೧ | ೯೨೮೩೪ |
| | ಉತ್ಪನ್ನ | ೧,೦೮,೦೯೬ | ೧,೭೫,೧೪೪ | ೧,೭೬,೭೮೭ | ೨೦೩೫೧೯ | ೧೬೨೫೬೭ |
| | ಇಳುವರಿ | ೧,೬೨೦ | ೨,೧೩೮ | ೧,೯೭೧ | ೨೧೫೪ | ೧೮೪೩ |
| ದ್ವಿದಳ ಧಾನ್ಯಗಳು | ವಿಸ್ತೀರ್ಣ | ೨೮,೪೬೧ | ೪೩,೫೯೧ | ೩೭,೭೦೭ | ೩೮,೩೨೩ | ೩೮೫೬೮ |
| | ಉತ್ಪನ್ನ | ೮,೩೭೩ | ೧೬,೬೮೩ | ೧೮,೫೫೭ | ೧೬೩೫೪ | ೨೩೭೫೭ |
| | ಇಳುವರಿ | ೩೧೦ | ೪೦೩ | ೫೧೮ | ೪೪೯ | ೬೪೮ |
| ಒಟ್ಟು ಆಹಾರ ಧಾನ್ಯಗಳು | ವಿಸ್ತೀರ್ಣ | ೯೮,೬೭೮ | ೧,೨೯,೮೧೦ | ೧,೩೨,೧೪೫ | ೧,೩೭,೭೬೪ | ೧೩೧೪೦೨ |
| | ಉತ್ಪನ್ನ | ೧,೧೬,೪೬೯ | ೧,೯೧,೮೨೭ | ೧,೯೫,೩೪೪ | ೨೧೯೮೭೩ | ೧೮೬೩೧೯ |
| | ಇಳುವರಿ | ೧,೨೪೨ | ೧೫೫೬ | ೧,೫೫೬ | ೧೬೮೦ | ೧೪೯೩ |
| ಎಣ್ಣೆ ಬೀಜಗಳು (ತೆಂಗು ಹೊರತುಪಡಿಸಿ) | ವಿಸ್ತೀರ್ಣ | ೨೧,೨೭೨ | ೨೯,೭೩೮ | ೩೦,೯೬೩ | ೩೭೭೬೨ | ೩೬೬೬೯ |
| | ಉತ್ಪನ್ನ | ೧೭,೦೫೭ | ೨೬,೩೪೯ | ೧೪,೩೭೫ | ೨೪೬೪೯ | ೧೪೨೧೬ |
| | ಇಳುವರಿ | ೮೪೪ | ೯೩೨ | ೪೮೯ | ೬೮೮ | ೪೦೮ |

*ವಿಸ್ತೀರ್ಣ– ಹೆಕ್ಟೇರುಗಳಲ್ಲಿ, ಉತ್ಪನ್ನ–ಟನ್ನುಗಳಲ್ಲಿ, ಇಳುವರಿ– ಹೆಕ್ಟೇರಿಗೆ ಕೆ.ಜಿ.ಗಳಲ್ಲಿ*

# ರೇಷ್ಮೆ

ರೇಷ್ಮೆಯು ರಾಜ್ಯದ ಗೃಹ ಕೈಗಾರಿಕೆಗಳಲ್ಲಿ ಒಂದಾಗಿರುವುದಲ್ಲದೆ, ವ್ಯವಸಾಯಕ್ಕೆ ಪೂರಕವಾಗಿದೆ. ಟಿಪ್ಪು ಸುಲ್ತಾನ್ ತನ್ನ ರಾಜ್ಯದ ದಕ್ಷಿಣ ಭಾಗದಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆ ಘಟಕವನ್ನು ಸ್ಥಾಪಿಸಿ, ಚೀನಾದಿಂದ ಮೊಟ್ಟೆಗಳನ್ನು ತರಿಸಿ, ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಯನ್ನು ಬೆಳೆಸಿದ್ದು, ಒಂದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯವನ್ನು ಪ್ರಪಂಚದ ರೇಷ್ಮೆ ಉತ್ಪಾದಿಸುವ ರಾಜ್ಯಗಳಲ್ಲಿ ಒಂದನ್ನಾಗಿ ಮಾಡುವುದು ಟಿಪ್ಪುವಿನ ಮಹದಾಕಾಂಕ್ಷೆಯಾಗಿತ್ತು. ಟಿಪ್ಪುವಿನ ನಂತರವೂ ಈ ಪರಂಪರೆ ಮುಂದುವರೆದು

೧೯೧೪ರಲ್ಲಿ ಹನ್ನೆರಡು ಜಾತಿಯ ರೇಷ್ಮೆ ಹುಳುಗಳ ತಳಿಗಳನ್ನು ಇಟಲಿಯಿಂದ ತರಿಸಿ, ಅಭಿವೃದ್ಧಿಪಡಿಸಲಾಯಿತು. ೧೯೧೫ರಲ್ಲಿ ಮೈಸೂರು ತಳಿ ಮತ್ತು ಇಟಲಿ ತಳಿಯನ್ನು ಸೇರಿಸಿ ಅಧಿಕ ಇಳುವರಿಯ ಮಿಶ್ರತಳಿಯನ್ನು ಅಭಿವೃದ್ಧಿಪಡಿಸಲಾಯಿತು.

ರೇಷ್ಮೆ ಕೈಗಾರಿಕೆಯು ಪ್ರಧಾನವಾಗಿ ಹಿಪ್ಪುನೇರಳೆಯನ್ನು ಬೆಳೆಯುವುದು, ರೇಷ್ಮೆ ಹುಳುಗಳನ್ನು ಸಾಕುವುದು ಮತ್ತು ನೂಲು ತಯಾರಿಸುವ ಕಾರ್ಯಗಳನ್ನೊಳಗೊಂಡಿದೆ. ಮೊದಲೆರಡು ಕಾರ್ಯಗಳು ಕೃಷಿಯ ವ್ಯಾಪ್ತಿಗೊಳಪಟ್ಟಿದ್ದರೆ, ಮೂರನೆಯದು ಸಂಪೂರ್ಣವಾಗಿ ಕೈಗಾರಿಕಾ ವ್ಯಾಪ್ತಿಗೊಳಪಟ್ಟಿದೆ. ಜಿಲ್ಲೆಯಲ್ಲಿ ರೇಷ್ಮೆ ಕೃಷಿಗೆ ಅನುಕೂಲಕರವಾದ ವಾತಾವರಣವಿದ್ದು, ಕೃಷಿ ಆಧಾರಿತ ವಾಣಿಜ್ಯ ಬೆಳೆಯಾಗಿದೆ. ಜಿಲ್ಲೆಯಲ್ಲಿನ ಎಲ್ಲಾ ತಾಲೂಕುಗಳಲ್ಲಿಯೂ ಹಿಪ್ಪುನೇರಳೆಯನ್ನು ಬೆಳೆಯಲಾಗುತ್ತಿದ್ದು, ಪ್ರಮುಖ ಗುಡಿ ಕೈಗಾರಿಕೆಯಾಗಿದೆ. ಈ ಕೈಗಾರಿಕೆಯು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ಜನರ ಬಡತನ ನಿರ್ಮೂಲನೆ ಹಾಗೂ ಆರ್ಥಿಕಾಭಿವೃದ್ಧಿ ಸಾಧಿಸುವುದರಲ್ಲಿ ಯಶಸ್ವಿಯಾಗಿದೆ. ಕಡಿಮೆ ಬಂಡವಾಳದಲ್ಲಿ ಹೆಚ್ಚಿನ ಆದಾಯ ತರಬಲ್ಲ ಮತ್ತು ಉದ್ಯೋಗ ಸೃಷ್ಟಿಸಬಲ್ಲ ಈ ಕೈಗಾರಿಕೆಯ ಅಭಿವೃದ್ಧಿಗಾಗಿ ಸರ್ಕಾರವು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದೆ. ಜಿಲ್ಲೆಯಲ್ಲಿ ಎಂ.೫, ಎಸ್.೧೩, ಎಸ್.೩೪, ಎಸ್.೩೬, ಎಸ್.೫೪, ವಿ.೧, ಎ.ಆರ್.೧೨, ಕೆಡಿಟಿ–೧, ಕೆಡಿಓ.೨ ಹಾಗೂ ಎಂಆರ್.೨ ಮೊದಲಾದ ಹೊಸ ರೇಷ್ಮೆ ತಳಿಗಳನ್ನು ಬಳಸಲಾಗುತ್ತಿದ್ದು, ಇದರೊಂದಿಗೆ ಸ್ಥಳೀಯ ತಳಿಗಳನ್ನು ರೇಷ್ಮೆ ಉತ್ಪಾದನೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿ ೪೪೭ ಹಳ್ಳಿಗಳಲ್ಲಿ ೧೦,೯೭೬ ರೇಷ್ಮೆ ಬೆಳೆಗಾರರು ಈ ಕಸುಬಿನಲ್ಲಿ ನಿರತರಾಗಿದ್ದು, ಇವರಲ್ಲಿ ೧,೭೨೩ ಮಂದಿ ಪರಿಶಿಷ್ಟ ಜಾತಿಗೂ, ೪೫ ಮಂದಿ ಪರಿಶಿಷ್ಟ ಪಂಗಡಕ್ಕೂ, ೯೧ ಮಂದಿ ಅಲ್ಪಸಂಖ್ಯಾತರರು ಹಾಗೂ ೯,೧೧೭ ಮಂದಿ ಇತರೆ ವರ್ಗಕ್ಕೂ ಸೇರಿದವರಾಗಿದ್ದರು. ಒಟ್ಟು ೫೪೧ ಮಂದಿ ಮಹಿಳೆಯರು ಹಾಗೂ ೧೦,೪೩೫ ಪುರುಷರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದಾರೆ. ೨೦೦೭–೦೮ರಲ್ಲಿ ರೇಷ್ಮೆಯನ್ನು ೧೭೯೧.೪೯ ಹೆಕ್ಟೇರ್ ನೀರಾವರಿ ಸೌಲಭ್ಯದಿಂದಲೂ ಮತ್ತು ೬೧೬೮.೩೫ ಹೆಕ್ಟೇರ್ ಮಳೆ ಆಶ್ರಯದಿಂದಲೂ ಬೆಳೆಯಲಾಗುತ್ತಿತ್ತು. ಜಿಲ್ಲೆಯಲ್ಲಿ ಐದು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರಗಳು, ಮೂರು ಸರ್ಕಾರಿ ಬಿತ್ತನೆ ಕೋಠಿಗಳು, ೨೨ ಖಾಸಗಿ ಬಿತ್ತನೆ ಕೋಠಿಗಳು, ೧೬ ತ್ರಾಂತ್ರಿಕ ಸೇವಾ ಕೇಂದ್ರಗಳು, ಎರಡು ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರಗಳು, ಐದು ರೇಷ್ಮೆ ಮಾರುಕಟ್ಟೆಗಳು, ಒಂದು ಖಾಸಗಿ ಚಾಕಿ ಸಾಕಾಣಿಕಾ ಕೇಂದ್ರ, ಒಂದು ರೇಷ್ಮೆ ತರಬೇತಿ ಸಂಸ್ಥೆ ಹಾಗೂ ಎರಡು ರೇಷ್ಮೆ ವಿನಿಮಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ೬೩೪ ಕುಟುಂಬಗಳು ನೂಲು ಬಿಚ್ಚಾಣಿಕೆಯಲ್ಲಿ ತೊಡಗಿದ್ದು, ಇವರಲ್ಲಿ ೩೩೪ ಪರಿಶಿಷ್ಟ ಜಾತಿ, ೨೬ ಪರಿಶಿಷ್ಟ ಪಂಗಡದವರು, ೯೭ ಅಲ್ಪಸಂಖ್ಯಾತರರು ಹಾಗೂ ೧೭೭ ಇತರೆ ವರ್ಗದವರು ಸೇರಿದವರಾಗಿದ್ದಾರೆ. ೧೭೨೯ ಚರಕಗಳು, ೨೩೪ ಕಾಟೇಜ್ ಬೇಸಿನ್‌ಗಳು, ೭೯೫ ಫಿಲೇಚರ್ ಬೇಸಿನ್‌ಗಳು, ೪೦ ಮಲ್ಟಿ ಎಂಡ್ ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ. ೨೦೦೯–೧೦ರಲ್ಲಿ ರೇಷ್ಮೆಯನ್ನು ೪೬೫೧ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ೪೧೩.೧೦೬ ಟನ್ ರೇಷ್ಮೆ ಗೂಡು ಉತ್ಪಾದಿಸಲಾಗಿತ್ತು. ೫೩೩೨ ರೈತರು ರೇಷ್ಮೆ ಕೃಷಿಯಲ್ಲಿ ತೊಡಗಿದ್ದು, ೬೮೬.೭೯ಲಕ್ಷ ಮೌಲ್ಯದ ರೇಷ್ಮೆಯನ್ನು ಉತ್ಪಾದಿಸಿದ್ದರು. ೨೦೧೧ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೧೦೫೬.೦೪ ಹೆ. ಪ್ರದೇಶದಲ್ಲಿ ಮಳೆ ಆಶ್ರಯದಿಂದಲೂ, ೫೭೨.೪೩ ಹೆ. ಪ್ರದೇಶದಲ್ಲಿ ನೀರಾವರಿ ಸೌಲಭ್ಯದಿಂದ ರೇಷ್ಮೆ ಕೃಷಿ ಕೈಗೊಳ್ಳಲಾಗಿದೆ. ಇದೇ ಅವಧಿಯಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ೧೬ ತಾಂತ್ರಿಕ ಸೇವಾ ಕೇಂದ್ರಗಳು, ರಾಜ್ಯವಲಯ ವ್ಯಾಪ್ತಿಯಲ್ಲಿ ನಾಲ್ಕು ರೇಷ್ಮೆ ಕೃಷಿ ಕ್ಷೇತ್ರಗಳು, ಎರಡು ಸರ್ಕಾರಿ ಬಿತ್ತನೆ ಕೋಠಿ, ಎರಡು ತಾಂತ್ರಿಕ ಸೇವಾ (ರೀಲಿಂಗ್) ಕೇಂದ್ರ, ಐದು ರೇಷ್ಮೆ ಮಾರುಕಟ್ಟೆಗಳು, ಒಂದು ರೇಷ್ಮೆ ತರಬೇತಿ ಸಂಸ್ಥೆ, ಎರಡು ರೇಷ್ಮೆ ವಿನಿಮಯ ಕೇಂದ್ರ, ನಾಲ್ಕು ರೇಷ್ಮೆ ಕಾರ್ಖಾನೆ, ಒಂದು ಹುರಿ ಮತ್ತು ನೇಯ್ಗೆ ಕಾರ್ಖಾನೆ ಕೆಲಸ ನಿರ್ವಹಿಸುತ್ತಿದ್ದವು.

ತಾಲೂಕುವಾರು ರೇಷ್ಮೆಗೂಡಿನ ತುಲನಾತ್ಮಕ ಉತ್ಪಾದನಾ ವಿವರಗಳನ್ನು ಕೋಷ್ಟಕ ೮.೨೯ ಹಾಗೂ ೮.೩೦ ರೇಷ್ಮೆ ಕೃಷಿಯನ್ನು ಅವಲಂಬಿಸಿರುವವರ ವಿವರಗಳನ್ನು ನೀಡಿದೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ–೦೫ ಅನ್ನು ನೋಡಿ.

**ಕೋಷ್ಟಕ ೮.೨೯: ತಾಲೂಕುವಾರು ರೇಷ್ಮೆ ಗೂಡಿನ ತುಲನಾತ್ಮಕ ಉತ್ಪಾದನಾ ವಿವರ**

| ತಾಲೂಕುಗಳು | ೧೯೯೮–೯೯ | | | ೨೦೦೦–೦೧ | | | ೨೦೦೪–೨೦೦೫ | | | ೨೦೦೯–೧೦ | | | ೨೦೧೧–೧೨ | | |
|---|---|---|---|---|---|---|---|---|---|---|---|---|---|---|---|
| | ಹಿಪ್ಪು ನೇರಳೆಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) | ಹಿಪ್ಪು ನೇರಳೆಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) | ಹಿಪ್ಪು ನೇರಳೆ ಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆಗಳಲ್ಲಿ) | ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) | ಹಿಪ್ಪು ನೇರಳೆಬೆಳೆ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಚಾಕಿ ಕಟ್ಟಿದ ಮೊಟ್ಟೆಗಳು (ಸಂಖ್ಯೆಗಳಲ್ಲಿ) | ರೇಷ್ಮೆ ಗೂಡಿನ ಉತ್ಪಾದನೆ (ಮೆ.ಟನ್‌ಗಳಲ್ಲಿ) |
| ಗುಂಡ್ಲುಪೇಟೆ | ೮,೬೧೯.೦೮ | ೧೪೩.೦೨೪ | ೪,೨೨೧.೪೦೨ | ೮,೭೫೦.೫೭ | ೧೦೪.೨೧೩ | ೩,೦೫೯.೩೮೧ | ೬,೧೭೧.೭೮ | ೩೫.೮೦೫ | ೧,೦೯೩.೪೯೭ | ೩೧೩.೭೪ | ೧೯.೮೬೩ | ೬೪೬.೯೪ | ೨೬೧.೪೨ | – | ೫೦.೯೪೦ |
| ಚಾಮರಾಜನಗರ | ೧,೨೭೬.೬೮ | ೩೪.೮೭೭ | ೯೯೫.೭೨೨ | ೧,೩೨೩.೪೩ | ೧೪.೫೭೭ | ೪೬೮.೯೮೦ | ೫೬೮.೭೦ | ೩.೯೨೨ | ೧೫೩.೬೨೧ | ೩೬೨೩.೫೭ | ೨.೩೬೫ | ೧೦೩.೮೯೮ | ೧೨೪೪.೧೦ | – | ೨೩೫.೪೪೬ |
| ಕೊಳ್ಳೇಗಾಲ | ೨,೭೫೫.೨೬ | ೬೪.೦೧೭ | ೧,೮೬೧.೩೬೬ | ೨,೮೧೩.೬೬ | ೩೭.೩೪೬ | ೧,೦೯೦.೦೯೧ | ೧,೦೫೩.೨೩ | ೧೧.೯೧೫ | ೩೭೮.೨೫೯ | ೪೮೯.೩೮ | ೫.೯೦೬ | ೨೨೮.೬೪೨ | ೧೯೨.೭೦ | – | ೭೩.೪೮೬ |
| ಯಳಂದೂರು | ೧,೦೮೪.೬೨ | ೨೨.೫೨೧ | ೭೦೪.೯೪೩ | ೧,೧೧೬.೧೨ | ೧೩.೨೬೯ | ೪೦೧.೭೨೪ | ೫೧೯.೭೩ | ೪.೮೨೦ | ೧೪೫.೯೨೩ | ೨೨೦.೦೩ | ೨.೨೩೬ | ೭೫.೩೦೦ | ೮೦.೩೦ | – | ೨೦.೬೦೩ |
| ಒಟ್ಟು | **೧೩,೭೩೬.೨೪** | **೨೬೪.೪೩೯** | **೭,೭೮೩.೪೩೩** | **೧೪,೦೦೩.೭೮** | **೧೬೯.೪೦೫** | **೫,೦೨೦.೧೭೬** | **೮,೩೧೩.೪೪** | **೫೬.೪೬೨** | **೧,೭೭೧.೩೦೦** | **೪೬೫೦.೭೨** | **೩೦.೩೭೦** | **೧,೦೫೪.೮೩೪** | **೧೭೭೮೫೨** | – | **೩೮೦.೪೭೫** |

**ಕೋಷ್ಟಕ ೮.೩೦: ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ಕುಟುಂಬಗಳ ವಿವರ**

| ಕ್ರ. ಸಂ. | ರೇಷ್ಮೆ ಅವಲಂಬಿತ ಕುಟುಂಬಗಳು | ೧೯೯೯–೨೦೦೦ | | | | ೨೦೦೪–೦೫ | | | | ೨೦೦೬–೦೭ | | | | ೨೦೧೧–೧೨ | | | |
|---|---|---|---|---|---|---|---|---|---|---|---|---|---|---|---|---|---|
| | | ಗುಂಡ್ಲುಪೇಟೆ | ಚಾಮರಾಜನಗರ | ಕೊಳ್ಳೇಗಾಲ | ಯಳಂದೂರು | ಗುಂಡ್ಲು ಪೇಟೆ | ಚಾಮರಾಜನಗರ | ಕೊಳ್ಳೇಗಾಲ | ಯಳಂದೂರು | ಗುಂಡ್ಲುಪೇಟೆ | ಚಾಮರಾಜನಗರ | ಕೊಳ್ಳೇಗಾಲ | ಯಳಂದೂರು | ಗುಂಡ್ಲುಪೇಟೆ | ಚಾಮರಾಜನಗರ | ಕೊಳ್ಳೇಗಾಲ | ಯಳಂದೂರು |
| ೧. | ಹಿಪ್ಪುನೇರಳೆ ಅವಲಂಬಿಸಿರುವ ಗ್ರಾಮಗಳ ಸಂಖ್ಯೆ | ೧೨೯ | ೨೧೧ | ೧೭೦ | ೪೦ | ೭೭ | ೧೯೭ | ೧೩೧ | ೩೮ | ೮೬ | ೧೯೭ | ೧೨೯ | ೩೫ | – | – | – | – |
| ೨. | ಪರಿಶಿಷ್ಟ ಜಾತಿ | ೧೧೩ | ೧,೬೯೦ | ೯೭೨ | ೪೦೬ | ೫೯ | ೧೦೯೧ | ೩೮೦ | ೨೦೩ | ೭೪ | ೧,೦೮೭ | ೩೭೨ | ೧೯೦ | ೨೮ | ೨೬೨ | ೩೯ | ೧೮ |
| ೩. | ಪರಿಶಿಷ್ಟ ಪಂಗಡ | ೦೨ | ೨೬ | ೭೦ | ೧೬ | ೦೨ | ೧೩ | ೦೮ | ೧೪ | ೦೩ | ೧೬ | ೧೧ | ೧೫ | ೦೧ | ೦೭ | – | ೧೪ |
| ೪. | ಅಲ್ಪ ಸಂಖ್ಯಾತರು | ೦೧ | ೯೭ | ೩೫ | ೦೩ | ೦೧ | ೯೧ | ೧೦ | ೦೩ | ೦೧ | ೭೨ | ೧೫ | ೦೩ | – | ೧೭ | ೦೭ | ೦೧ |
| ೫. | ಇತರೆ | ೧,೩೮೨ | ೮,೧೭೯ | ೪,೦೭೩ | ೧,೩೨೩ | ೮೬೯ | ೫,೮೦೭ | ೧,೮೭೧ | ೬೮೭ | ೮೯೭ | ೫,೭೧೯ | ೧,೮೬೩ | ೬೩೮ | ೩೯೦ | ೧೯೬೨ | ೨೯೪ | ೮೮ |
| | ಒಟ್ಟು | ೧,೪೯೮ | ೯,೯೯೨ | ೫,೧೫೦ | ೧,೭೪೮ | ೯೩೧ | ೭,೦೦೨ | ೨,೨೬೯ | ೯೦೭ | ೯೭೫ | ೬,೮೯೪ | ೨,೨೬೧ | ೮೪೬ | ೪೧೯ | ೨೨೫೦ | ೩೪೦ | ೧೨೧ |

## ಪಶುಸಂಪತ್ತು

ಪಶುಪಾಲನೆ ಮಾನವನ ಅತ್ಯಂತ ಪುರಾತನ ಚಟುವಟಿಕೆಗಳಲ್ಲಿ ಒಂದು. ಕೃಷಿಯ ಅಭಿವೃದ್ಧಿಗೆ ಪೂರಕವಾದ ಈ ಚಟುವಟಿಕೆಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಉಂಟಾಗುವ ಲಾಭ ಅಪರಿಮಿತ. ಪಶುಪಾಲನೆ ಇಂದು ಒಂದು ಲಾಭದಾಯಕವಾದ ಉದ್ಯಮವಾಗಿರುವುದರ ಜೊತೆಗೆ ವಿವಿಧ ಬಗೆಯ ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಪೂರಕವಾಗಿದೆ. ಇದು ಹೈನುಗಾರಿಕೆಗೆ ಪೂರಕವಾಗಿದ್ದು, ಗ್ರಾಮೀಣ ಜನರ ಆರ್ಥಿಕ ಅಭಿವೃದ್ಧಿಗೆ ಹಾಗೂ ಜೀವನಮಟ್ಟ ಸುಧಾರಣೆಗೆ ಪೂರಕವಾಗಿದೆ. ಜಿಲ್ಲೆಯಲ್ಲಿ ೧೯೯೦ರ ಜಾನುವಾರು ಗಣತಿಯಂತೆ ೨,೭೬,೪೦೦ ದನಗಳು, ೫೭,೫೦೦ ಎಮ್ಮೆಗಳು, ೯೪,೧೦೦ ಕುರಿಗಳು, ೧,೧೪,೧೦೦ ಮೇಕೆಗಳು (ಆಡುಗಳು), ೧,೧೦೦ ಹಂದಿಗಳು, ೩೧,೭೦೦ ನಾಯಿಗಳು, ೬೦೦ ಇತರೆ ಜಾನುವಾರುಗಳು ಸೇರಿದಂತೆ ಒಟ್ಟು ೫,೭೬,೧೦೦ ಜಾನುವಾರುಗಳಿದ್ದವು. ಅಲ್ಲದೆ ೨,೨೬,೮೦೦ ಕೋಳಿಗಳಿದ್ದವು. ೨೦೦೩ರ ಜಾನುವಾರು ಗಣತಿಯಂತೆ ೨,೭೩,೬೪೨ ದನಕರಗಳು, ೨೮,೪೩೨ ಎಮ್ಮೆಗಳು, ೧,೩೩,೦೬೨ ಕುರಿಗಳು, ೧,೧೪,೮೮೪ ಮೇಕೆಗಳು ೧೦೦೫ ಹಂದಿಗಳು, ೨೦೨ ಮೊಲಗಳು, ೧೮೪೨೪ ನಾಯಿಗಳು, ಸೇರಿದಂತೆ ಒಟ್ಟು ೫,೭೦,೦೮೪ ಜಾನುವಾರುಗಳಿದ್ದವು. ೧,೯೧,೫೩೨ ಕೋಳಿಗಳಿದ್ದವು.

ಜಿಲ್ಲೆಯಲ್ಲಿ ೧೯೯೭-೯೮ರಲ್ಲಿ ನಾಲ್ಕು ಪಶುವೈದ್ಯ ಆಸ್ಪತ್ರೆಗಳು, ೧೬ ಪಶು ಚಿಕಿತ್ಸಾಲಯಗಳು, ೩೬ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ನಾಲ್ಕು ಸಂಚಾರಿ ಚಿಕಿತ್ಸಾಲಯಗಳು ಹಾಗೂ ಗುಂಡ್ಲುಪೇಟೆಯಲ್ಲಿ ಒಂದು ಕೃತಕ ಗರ್ಭಧಾರಣೆ ಕೇಂದ್ರವಿತ್ತು. ೨೦೧೧ರ ಮಾರ್ಚ್ ಅಂತ್ಯಕ್ಕೆ ಒಂಭತ್ತು ಪಶುವೈದ್ಯ ಆಸ್ಪತ್ರೆಗಳು, ೩೨ ಪಶು ಚಿಕಿತ್ಸಾಲಯಗಳು, ೨೪ ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, ನಾಲ್ಕು ಸಂಚಾರಿ ಚಿಕಿತ್ಸಾಲಯಗಳು, ೧೩ ಕೃತಕ ಗರ್ಭಧಾರಣ ಹಾಗೂ ೧೨ ಇತರೆ ಕೇಂದ್ರಗಳಿದ್ದವು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೧ರಲ್ಲಿ ನೋಡಿ.

**ಕೋಷ್ಟಕ ೮.೩೧: ಜಾನುವಾರು ಗಣತಿಯ ವಿವರಗಳು**

| ವಿವರ | ೧೯೯೦ | ೧೯೯೭ | ೨೦೦೩ | ೨೦೦೭ ತಾತ್ಕಾಲಿಕ |
|---|---|---|---|---|
| ದನಗಳು | ೨,೭೬,೪೦೦ | ೨,೭೧,೬೦೦ | ೨,೭೩,೬೪೨ | ೨,೭೩,೭೯೮ |
| ಎಮ್ಮೆಗಳು | ೫೭,೫೦೦ | ೪೦,೮೦೦ | ೨೮,೪೩೨ | ೨೮,೪೬೯ |
| ಕುರಿಗಳು | ೯೪,೧೦೦ | ೧,೧೭,೮೦೦ | ೧,೩೩,೦೬೨ | ೧,೩೩,೧೯೭ |
| ಮೇಕೆಗಳು | ೧,೧೪,೧೦೦ | ೯೮,೪೦೦ | ೧,೧೪,೮೮೪ | ೧,೧೪,೮೬೧ |
| ಹಂದಿಗಳು | ೧,೧೦೦ | ೧,೭೦೦ | ೧,೦೦೫ | ೧,೦೦೫ |
| ಮೊಲಗಳು | – | – | ೨೦೨ | ೧೫೬ |
| ನಾಯಿಗಳು | ೩೧,೭೦೦ | ೨೬,೫೦೦ | ೧೮,೪೨೪ | ೧೮,೪೨೧ |
| ಇತರೆ | ೬೦೦ | ೨,೭೧,೬೦೦ | – | ೪೮೦ |
| **ಒಟ್ಟು** | **೫,೭೬,೧೦೦** | **೧,೮೯,೧೦೦** | **೫,೭೦,೦೮೪** | **೫,೭೦,೩೯೩** |
| ಕೋಳಿಗಳು | ೨,೨೬,೮೦೦ | ೫,೫೬,೮೦೦ | ೧,೯೧,೫೩೨ | ೫೭೦೩೮೭ |

*ಆಧಾರ: ೧೮ನೇ ಜಾನುವಾರು ಗಣತಿ, ಕರ್ನಾಟಕ*

## ಹೈನುಗಾರಿಕೆ

ವಿಶ್ವ ಬ್ಯಾಂಕಿನ ನೆರವಿನೊಡನೆ ಆರಂಭಗೊಂಡ ಕರ್ನಾಟಕ ಹೈನು ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ಐದು ತಾಲೂಕುಗಳನ್ನೊಳಗೊಂಡ ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ದಿ ೨೩-೧೧-೧೯೭೬ ರಂದು ನೋಂದಾಯಿಸಲ್ಪಟ್ಟಿತು. ಗ್ರಾಮೀಣ ಜನರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಪ್ರಮುಖ ಉಪಕಸಬನ್ನಾಗಿ ರೂಪಿಸಿಕೊಳ್ಳುವಂತೆ ಮಾಡಿ ಅವರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ "ಅಮುಲ್" ಮಾದರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಕಾರ್ಯ ಆರಂಭವಾಯಿತು. ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು ದಿ ೧-೪-೧೯೮೭ ರಂದು ವಿಭಜಿಸಿ ಮಂಡ್ಯ ಜಿಲ್ಲೆಯ ಸಂಘಗಳನ್ನು ಪ್ರತ್ಯೇಕಿಸಲಾಯಿತು, ಪ್ರಸ್ತುತ ಮೈಸೂರು ಜಿಲ್ಲೆ ಹಾಗೂ ಚಾಮರಾಜನಗರ ಜಿಲ್ಲೆಗೆ ಸೀಮಿತವಾದಂತೆ ಈ ಒಕ್ಕೂಟ ಕಾರ್ಯನಿರ್ವಹಿಸುತ್ತಿದೆ. ಚಾಮರಾಜನಗರ ಜಿಲ್ಲೆಯಲ್ಲಿ ೨೦೦೩-೦೪ ರಲ್ಲಿ ೨೯೧ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದವು. ಇವುಗಳ ಸಂಖ್ಯೆ ೨೦೦೭-೦೮ಕ್ಕೆ ೩೪೮ಕ್ಕೆ ದಾಟಿದೆ. ೨೦೦೪-೦೫ರಲ್ಲಿ ೨೦,೪೧೯ ಮಹಿಳೆಯರು, ೧೧,೨೧೫ ಪರಿಶಿಷ್ಟ ಜಾತಿ, ೧,೭೬೫ ಪರಿಶಿಷ್ಟ ಪಂಗಡ, ೩೨,೧೬೬ ಸಣ್ಣ ರೈತರು, ೧೮,೯೯೮ ಅತಿಸಣ್ಣ ರೈತರು, ೧೫,೩೮೪ ಭೂರಹಿತ ಕಾರ್ಮಿಕರು ಹಾಗೂ ೧೧,೬೨೩ ಇತರೆ

ಸದಸ್ಯರು ಸೇರಿದ್ದರು. ಜೂನ್ ೨೦೧೨ರ ಅಂತ್ಯಕ್ಕೆ ೧,೦೨,೭೯೩ ಮಹಿಳೆಯರು, ೩೪,೪೭೬ ಪರಿಶಿಷ್ಟ ಜಾತಿ, ೧೧,೭೪೩ ಪರಿಶಿಷ್ಟ ಪಂಗಡ, ೭೪,೦೭೪ ಸಣ್ಣ ರೈತರು, ೧,೧೧೮೬೭ ಅತಿ ಸಣ್ಣ ರೈತರು, ೫೧,೩೭೨ ಭೂ–ರಹಿತ ಕಾರ್ಮಿಕರು ಹಾಗೂ ೩೮,೫೧೪ ಇತರ ಸದಸ್ಯರು ಹೈನುಗಾರಿಕೆಯಲ್ಲಿ ಸಕ್ರೀಯವಾಗಿ ತೊಡಗಿದ್ದು, ತಮ್ಮ ಜೀವನಮಟ್ಟವನ್ನು ಉತ್ತಮಪಡಿಸಿ ಕೊಂಡಿದ್ದಾರೆ. ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಉತ್ಪಾದಿಸಿರುವ ಹಾಲಿನ ಉತ್ಪನ್ನಗಳು ಹಾಗೂ ಮಾರಾಟದ ವಿವರಗಳನ್ನು ಕೋಷ್ಟಕ ೮.೩೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೨: ಹಾಲಿನ ಉತ್ಪನ್ನಗಳ ಉತ್ಪಾದನೆ**

| ಕ್ರ.ಸಂ | ಉತ್ಪನ್ನಗಳ ಹೆಸರು | ಯೂನಿಟ್ | ೨೦೦೪–೦೫ | ೨೦೦೫–೦೬ | ೨೦೦೬–೦೭ | ೨೦೦೭–೦೮ | ೨೦೧೦–೧೧ |
|---|---|---|---|---|---|---|---|
| ೧ | ತುಪ್ಪ | ಲೀಟರ್ | ೬,೦೮,೧೫೭ | ೭,೫೮,೨೬೫ | ೭,೮೦,೫೩೦ | ೧೦,೭೦,೧೯೪ | ೧೬,೦೮,೫೬೪ |
| ೨ | ಮೊಸರು | ಲೀಟರ್ | ೪೬,೪೦,೫೭೬ | ೫೫,೨೬,೨೯೩ | ೬೭,೦೪,೫೪೭ | ೭೪,೨೦,೯೨೫ | ೧,೧೫,೫೩,೭೦೮ |
| ೩ | ಲಸ್ಸಿ | ಲೀಟರ್ | ೧,೩೩,೭೩೮ | ೧,೪೫,೮೭೦ | ೨,೧೮,೬೧೮ | ೨,೩೬,೯೧೬ | ೩,೪೦,೮೮೯ |
| ೪ | ಮಸಾಲಾ ಮಜ್ಜಿಗೆ | ಲೀಟರ್ | ೧,೨೭,೦೮೪ | ೧,೩೮,೦೫೫ | ೨,೧೪,೮೨೨ | ೨,೪೩,೪೬೩ | ೪,೧೪,೩೫೫ |
| ೫ | ಸುವಾಸಿತ ಹಾಲು | ಲೀಟರ್ | ೩೯,೧೬೨ | ೩೫,೯೩೫ | ೨೩,೧೬೮ | – | – |
| ೬ | ಪೇಡಾ | ಕೆ.ಜಿ. | ೪೫,೧೨೧ | ೪೭,೬೧೩ | ೫೦,೬೬೨ | ೫೫,೨೫೬ | ೯೬,೬೧೨ |
| ೭ | ಮೈಸೂರು ಪಾಕ್ | ಕೆ.ಜಿ. | ೧೫,೫೧೯ | ೧೪,೧೫೪ | ೧೭,೧೫೭ | ೧೫,೯೩೯ | ೩೫,೨೫೯ |
| ೮ | ಬಾದಾಮ್ ಬರ್ಫಿ | ಕೆ.ಜಿ. | – | ೧೬೫ | ೧,೩೧೫ | – | – |
| ೯ | ಗೋಡಂಬಿ ಬರ್ಫಿ | ಕೆ.ಜಿ. | – | ೧೫೦ | ೧,೪೬೦ | – | ೯,೧೬೯ |
| ೧೦ | ಪನ್ನಿರ್ | ಕೆ.ಜಿ. | – | – | – | – | ೨೯,೧೭೮ |
| ೧೧ | ಕೋವಾ | ಕೆ.ಜಿ. | – | – | – | – | ೬,೫೭೮ |
| ೧೨ | ನಂದಿನಿ ಬೈಟ್ | ಕೆ.ಜಿ. | – | – | – | – | ೩,೮೬೦ |

**ಹಾಲಿನ ಉತ್ಪನ್ನಗಳ ಮಾರಾಟ**

| ಕ್ರ.ಸಂ. | ಉತ್ಪನ್ನಗಳ ಹೆಸರು | ಯೂನಿಟ್ | ೨೦೦೪–೦೫ | ೨೦೦೫–೦೬ | ೨೦೦೬–೦೭ | ೨೦೦೭–೦೮ | ೨೦೧೧–೧೨ |
|---|---|---|---|---|---|---|---|
| ೧. | ತುಪ್ಪ | ಲೀಟರ್ | ೮,೦೧,೬೪೩ | ೭,೩೯,೯೬೦ | ೭,೭೧,೦೬೪ | ೧೦,೬೯,೧೫೦ | ೧೪,೫೫,೨೫೧ |
| ೨. | ಮೊಸರು | ಲೀಟರ್ | ೪೫,೨೮,೮೩೩ | ೫೩,೮೦,೬೮೬ | ೬೪,೫೦,೪೭೭ | ೭೨,೩೬,೪೩೮ | ೧೧೨೫೮೩೬೮ |
| ೩. | ಲಸ್ಸಿ | ಲೀಟರ್ | ೧,೩೨,೯೭೬ | ೧,೪೩,೬೯೯ | ೨,೧೭,೩೦೨ | ೨,೩೭,೫೮೯ | ೩೩೬೫೬೪ |
| ೪. | ಮಸಾಲಾ ಮಜ್ಜಿಗೆ | ಲೀಟರ್ | ೧,೨೪,೪೭೯ | ೧,೩೩,೨೨೦ | ೨,೦೬,೦೧೦ | ೨,೩೧,೫೨೮ | ೪೦೧೮೮೬ |
| ೫. | ಸುವಾಸಿತ ಹಾಲು | ಲೀಟರ್ | ೩೮,೯೨೨ | ೩೪,೩೧೦ | ೨೨,೦೪೫ | – | – |
| ೬. | ಪೇಡಾ | ಕೆ.ಜಿ. | ೪೨,೫೫೨ | ೪೭,೨೪೮ | ೫೩,೪೭೩ | ೫೨,೬೩೨ | ೯೫೩೩೩ |

| ಕ್ರ.ಸಂ. | ಉತ್ಪನ್ನಗಳ ಹೆಸರು | ಯೂನಿಟ್ | ೨೦೦೪-೦೫ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೧೧-೧೨ |
|---|---|---|---|---|---|---|---|
| ೭. | ಮೈಸೂರು ಪಾಕ್ | ಕೆ.ಜಿ. | ೧೫,೨೯೧ | ೧೩,೯೬೨ | ೧೬,೮೬೨ | ೧೫,೭೧೪ | ೩೨೩೦೫ |
| ೮. | ಬಾದಾಮ್ ಬರ್ಫಿ | ಕೆ.ಜಿ. | – | ೧೪೦ | ೧,೩೦೧ | – | – |
| ೯. | ಗೋಡಂಬಿ ಬರ್ಫಿ | ಕೆ.ಜಿ. | – | ೧೨೭ | ೧,೪೪೨ | – | ೯೧೨೫ |
| ೧೦ | ಪನ್ನೀರ್ | ಕೆ.ಜಿ. | – | – | – | – | ೨೯೫೭೧ |
| ೧೧ | ಕೋವಾ | ಕೆ.ಜಿ. | – | – | – | – | ೬೫೪೯ |
| ೧೨ | ನಂದಿನಿ ಬೈಟ್ | ಕೆ.ಜಿ. | – | – | – | – | ೩೭೯೭ |

## ಖನಿಜ ಸಂಪತ್ತು

ಖನಿಜಗಳ ಲಭ್ಯತೆ ಆರ್ಥಿಕಾಭಿವೃದ್ಧಿಯ ದಿಕ್ಕನ್ನು ನಿರ್ಧರಿಸುತ್ತವೆ. ಏಕೆಂದರೆ ಖನಿಜಗಳು ಔದ್ಯಮಿಕ ಮತ್ತು ಕೃಷಿ ಪ್ರಗತಿಯ ಆಧಾರ ಸ್ತಂಭಗಳು. ಖನಿಜಗಳು ಕೈಗಾರಿಕೆಗಳಿಗೆ ಅವಶ್ಯಕವಾದ ಕಚ್ಚಾ ಸಂಪನ್ಮೂಲಗಳನ್ನು ಪೂರೈಸುತ್ತವೆ. ಖನಿಜಗಳಲ್ಲಿ ಸಮೃದ್ಧವಾಗಿರುವ ಯಾವುದೇ ಪ್ರದೇಶ ತೀವ್ರ ಆರ್ಥಿಕಾಭಿವೃದ್ಧಿ ಸಾಧಿಸಲು ಸಾಧ್ಯವಿದೆ. ಕಪ್ಪುಶಿಲೆಗಳು ಜಿಲ್ಲೆಯ ಎಲ್ಲಾ ತಾಲೂಕಗಳಲ್ಲಿಯೂ ಅಲ್ಲಿ ಲಭ್ಯವಿದ್ದು, ಈ ಶಿಲೆಯನ್ನು ಅಲಂಕಾರಿಕಗಳಿಗೆ ಬಳಸಲಾಗುತ್ತಿದೆ. ಇದನ್ನು ರಾಜ್ಯ ಅಂತರರಾಜ್ಯ ಹಾಗೂ ವಿದೇಶಗಳಿಗೂ ರಫ್ತು ಮಾಡಲಾಗುತ್ತಿದೆ. ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರ, ನಂಜೇದೇವನಪುರ, ಸಂತೇಮರಹಳ್ಳಿ, ಯಲಕ್ಕೂರು, ಹರದನಹಳ್ಳಿ, ವೀರನಪುರಗಳಲ್ಲಿಯೂ; ಯಳಂದೂರು ತಾಲೂಕಿನ ಗುಂಬಳ್ಳಿ, ಯರಗಂಬಳ್ಳಿಗಳಲ್ಲಿಯೂ; ಗುಂಡ್ಲುಪೇಟೆ ತಾಲೂಕಿನ ಅಂಗಳ, ಅಂಗಳಾಪುರ, ಬೋಮ್ಮನಹಳ್ಳಿ ಮತ್ತು ತೆರಕಣಾಂಬಿ ಹಾಗೂ ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿಯೂ ಹಾಗೂ ಕೊಳ್ಳೇಗಾಲ ತಾಲೂಕಿನ ಚಂಗಡಿ, ಪೊನ್ನಾಚಿ, ಮರೂರು, ಮಾರ್ಟಳ್ಳಿ, ಬೈಲೂರು, ಮೀಣ್ಯಂಗಳಲ್ಲಿಯೂ ಲಭ್ಯವಿದೆ. ಕಟ್ಟಡದ ಕಲ್ಲುಗಳನ್ನು ರಸ್ತೆ ಅಭಿವೃದ್ಧಿ, ಕಟ್ಟಡಗಳನ್ನು ನಿರ್ಮಿಸಲು ಉಪಯೋಗಿಸುತ್ತಾರೆ. ಇದು ಚಮರಾಜನಗರ, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳ ಎಲ್ಲಾ ಭಾಗಗಳಲ್ಲಿಯೂ ಸಾಮಾನ್ಯವಾಗಿ ಸಿಗುತ್ತಿದೆ. ಗುಂಡ್ಲುಪೇಟೆ ತಾಲೂಕಿನ ಹಸಗೂಲಿ, ಅರೇಪುರ, ಕೋಟೆಕೆರೆ, ಹಿರೇಕಾಟಿ, ರಾಘವಪುರ, ಬಾಚಹಳ್ಳಿ ಹಾಗೂ ಮಡಹಳ್ಳಿಗಳಲ್ಲಿ ಲಭ್ಯವಿದೆ. ಮರಳು ಸಹ ಚಾಮರಾಜನಗರ ತಾಲೂಕಿನ ಸುವರ್ಣಾವತಿ ನದಿ ಹಾಗೂ ಚಿಕ್ಕಹೊಳೆ ನದಿ ಪಾತ್ರಗಳಲ್ಲಿ ದೊರಕುತ್ತಿದೆ. ಕೊಳ್ಳೇಗಾಲ ತಾಲೂಕಿನ ಕಾವೇರಿ ತೀರಪ್ರದೇಶವಾದ ಮುಳ್ಳೂರು, ಹರಳೆ, ಹಳೇಹಂಪಾಪುರ, ಸರಗೂರು ಹಾಗೂ ದಾಸನಪುರಗಳಲ್ಲಿಯೂ ದೊರಕುತ್ತಿದ್ದರೆ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲೂಕಿನ ಕೆಲವು ಭಾಗಗಳಲ್ಲಿ ದೊರಕುತ್ತಿದೆ. ಮರಳನ್ನು ಕಟ್ಟಡ ಹಾಗೂ ಇತರೆ ಕಾಮಗಾರಿಗಳ ನಿರ್ಮಾಣಕ್ಕಾಗಿ ಬಳಸಲಾಗುತ್ತದೆ. ಜಿಲ್ಲೆಯಲ್ಲಿ ಸುಣ್ಣದ ಕಲ್ಲು ಗುಂಡ್ಲುಪೇಟೆ ತಾಲೂಕಿನ ಚಿಕ್ಕಣ್ಣಾಪುರದಲ್ಲಿ ಲಭ್ಯವಿದ್ದು, ಮನೆಯ ಗೋಡೆಗಳಿಗೆ ಉಪಯೋಗಿಸುತ್ತಾರೆ. ಬೆಣಚುಕಲ್ಲು ಕೊಳ್ಳೇಗಾಲ ತಾಲೂಕಿನ ಅಜ್ಜಿಪುರದಲ್ಲಿ ದೊರಕುತ್ತಿದ್ದು, ರಿಫ್ರಾಕ್ಟರಿಗಳಲ್ಲಿ ಉಪಯೋಗಿಸುತ್ತಾರೆ. ಹೀಗೆ ಇವು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿವೆ. ಉಪ ಖನಿಜಗಳ ಉತ್ಪಾದನೆ ಮತ್ತು ಅವುಗಳ ಮೌಲ್ಯವನ್ನು ಕೋಷ್ಟಕ ೮.೩೩ ರಲ್ಲಿ ನೀಡಿದೆ.

## ಕೋಷ್ಟಕ ೮.೩೩: ಉಪ ಖನಿಜಗಳ ಉತ್ಪಾದನೆ ಮತ್ತು ಅವುಗಳ ಮೌಲ್ಯಗಳ ವಿವರ

| ತಾಲೂಕುಗಳು | ೨೦೦೦-೦೧ | | | ೨೦೦೧೦-೧೧ | | |
|---|---|---|---|---|---|---|
| | ಖನಿಜದ ಉತ್ಪಾದನೆ (ಘ.ಮೀ. ಗಳಲ್ಲಿ) | ಖನಿಜದ ಮೌಲ್ಯ (₹ ಗಳಲ್ಲಿ) | ಖನಿಜದ ಮೇಲೆ ವಿಧಿಸಿರುವ ರಾಜಧನ (₹ ಗಳಲ್ಲಿ) | ಖನಿಜದ ಉತ್ಪಾದನೆ ((ಘ.ಮೀ.ಗಳಲ್ಲಿ/ ಮೆ.ಟನ್‌ಗಳಲ್ಲಿ) | ಖನಿಜದ ಮೌಲ್ಯ (₹ ಗಳಲ್ಲಿ) | ಖನಿಜದ ಮೇಲೆ ವಿಧಿಸಿರುವ ರಾಜಧನ (₹ ಗಳಲ್ಲಿ) |
| ೧ | ೨ | ೩ | ೪ | ೫ | ೬ | ೭ |
| | | | ಕಪ್ಪು ಗ್ರಾನೈಟ್ | | | |
| **ಚಾಮರಾಜನಗರ** | ೧೨,೬೦೩.೦೪೧ | – | ೨,೫೨,೦೬,೦೮೨ | ೧೧,೮೫೮.೪೦೬ | – | ೧೧೮೫೮೪೦೬೦ |
| **ಗುಂಡ್ಲುಪೇಟೆ** | ೧೭೬.೪೫೯ | – | ೩,೫೨,೯೧೮ | – | – | – |
| **ಕೊಳ್ಳೇಗಾಲ** | – | – | – | ೧,೯೬೨.೭೯ | – | ೧೯೬೨೭೯೦ |
| **ಯಳಂದೂರು** | ೧,೨೦೮.೦೮೨ | – | ೨೪,೧೬,೧೬೪ | ೭೯೭.೦೩೪ | – | ೭೯೭೦೩೪೦ |
| **ಒಟ್ಟು** | **೧೩,೯೮೭.೫೮೨** | – | **೨,೭೯,೭೫,೧೬೪** | **೧೪,೬೧೮.೧೪** | – | |
| | | | ಕಟ್ಟಡದ ಕಲ್ಲು | | | |
| **ಚಾಮರಾಜನಗರ** | ೧೪,೯೯೫ | – | ೧,೮೩,೮೯೫ | ೩೫,೪೧೦ | – | ೧೪೧೬೪೦೦ |
| **ಗುಂಡ್ಲುಪೇಟೆ** | ೧೮,೬೦೪ | – | ೨,೧೦,೬೧೮ | ೩೮,೩೩೦ | – | ೧೫೩೩೨೦೦ |
| **ಕೊಳ್ಳೇಗಾಲ** | ೪,೪೨೧ | – | ೨೧,೪೯೬ | ೧೨,೯೨೦ | – | ೫೧೬೮೦೦ |
| **ಯಳಂದೂರು** | ೨೦೦ | – | – | ೭೯೭.೦೩೪ | – | ೯೬೦೦ |
| **ಒಟ್ಟು** | **೩೮,೨೨೦** | – | **೪,೧೬,೦೦೯** | | – | |
| | | | ಸುಣ್ಣದ ಕಲ್ಲು | | | |
| **ಚಾಮರಾಜನಗರ** | – | – | – | | – | – |
| **ಗುಂಡ್ಲುಪೇಟೆ** | ೬,೨೩೦ | – | ೬೫,೮೩೦ | ೧,೪೫೦ | – | ೧೨,೮೩೫ |
| **ಕೊಳ್ಳೇಗಾಲ** | – | – | – | | – | – |
| **ಯಳಂದೂರು** | – | – | – | | – | – |
| **ಒಟ್ಟು** | **೬,೨೩೦** | – | **೬೫,೮೩೦** | | – | **೧೨,೮೩೫** |
| | | | ಮರಳು | | | |
| **ಚಾಮರಾಜನಗರ** | – | – | – | – | – | – |
| **ಗುಂಡ್ಲುಪೇಟೆ** | – | – | – | – | – | – |
| **ಕೊಳ್ಳೇಗಾಲ** | ೧,೦೨೫ | – | ೬೪,೦೫೧ | | | |
| **ಯಳಂದೂರು** | – | – | – | | | |
| **ಒಟ್ಟು** | **೧,೦೨೫** | – | **೬೪,೦೫೧** | | | |

*ಆಧಾರ: ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಾಮರಾಜನಗರ.*

# ಕೈಗಾರಿಕೆಗಳು

ಆರ್ಥಿಕತೆಯ ಎಲ್ಲ ವಲಯಗಳನ್ನು ಮೂರು ವಿಭಾಗಗಳಾಗಿ ವರ್ಗೀಕರಿಸಿದಾಗ ಕೈಗಾರಿಕೆಯು "ದ್ವಿತೀಯ" ವಲಯ ಎನ್ನಿಸಿಕೊಳ್ಳುತ್ತದೆ. ಮಾನವ ದೇಹಕ್ಕೆ ಪೂರ್ಣ ಚೈತನ್ಯವನ್ನು ಒದಗಿಸಲು ಮೂಳೆಗಳು ಹೇಗೆ ಅವಶ್ಯಕವೋ ಹಾಗೆಯೇ ಆರ್ಥಿಕತೆಗೆ ಚೇತನ ನೀಡಿ ದೀರ್ಘಕಾಲೀನ ಅಭಿವೃದ್ಧಿ ಸಾಧನೆಗೆ ನೆರವಾಗಲು ಕೈಗಾರಿಕೆಗಳು ಅತ್ಯಂತ ಅವಶ್ಯಕ. ಕೈಗಾರಿಕಾಭಿವೃದ್ಧಿ ಸಾಧಿಸಿದ ರಾಷ್ಟ್ರಗಳನ್ನು ಅಭಿವೃದ್ಧಿ ರಾಷ್ಟ್ರಗಳೆಂದೂ, ಕೈಗಾರಿಕೆಯಲ್ಲಿ ಹಿಂದುಳಿದು, ಕೃಷಿಯನ್ನೇ ಪ್ರಧಾನ ಕಸುಬಾಗಿ ಹೊಂದಿರುವ ರಾಷ್ಟ್ರಗಳನ್ನು ಅನಭಿವೃದ್ಧಿ ರಾಷ್ಟ್ರಗಳೆಂದೂ ಕರೆಯುವುದು ಆರ್ಥಿಕ ಸಾಹಿತ್ಯದಲ್ಲಿ ರೂಢಿಯಲ್ಲಿದೆ. ಕೃಷಿಯ ಪ್ರಗತಿಗೆ ಕೊಡುಗೆ ನೀಡುವುದು, ಆಧುನೀಕರಣಕ್ಕೆ ನೆರವು ನೀಡುವುದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು, ಜೀವನ ಮಟ್ಟ ಸುಧಾರಣೆ, ಆಂತರಿಕ ಹಾಗೂ ಬಾಹ್ಯ ಆರ್ಥಿಕತೆಗಳ ಪ್ರಯೋಜನ, ರಾಷ್ಟ್ರ ರಕ್ಷಣೆ, ವಿದೇಶೀ ವಿನಿಮಯ ಗಳಿಕೆ ಮೊದಲಾದ ಮಹತ್ವಗಳನ್ನು ಕೈಗಾರಿಕೀಕರಣ ಹೊಂದಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಉಪಕರಣಗಳ ತಯಾರಿಕೆ, ಹೆಂಚಿನ ತಯಾರಿಕೆ, ಇಟ್ಟಿಗೆ, ಸಾಬೂನು, ಬೆಂಕಿಪಟ್ಟಣ, ಪ್ಲಾಸ್ಟಿಕ್, ಬೀಡಿ, ಅಗರಬತ್ತಿ ತಯಾರಿಕೆ, ನೇಯ್ಗೆ ಮುಂತಾದ ಸಣ್ಣ ಪ್ರಮಾಣದ ಕೈಗಾರಿಕೆಗಳು ಕಾರ್ಯನಿರತವಾಗಿವೆ. ೨೦೧೧-೧೨ರಲ್ಲಿದ್ದಂತೆ ತಾಲೂಕುವಾರು ಸಣ್ಣ ಪ್ರಮಾಣದ ಕೈಗಾರಿಕೆಗಳು, ಅವುಗಳಲ್ಲಿ ತೊಡಗಿಸಿರುವ ಬಂಡವಾಳ ಹಾಗೂ ಕಾರ್ಮಿಕರ ಸಂಖ್ಯೆಯನ್ನು ನೀಡಲಾಗಿದೆ. ಚಾಮರಾಜನಗರ ತಾಲೂಕಿನಲ್ಲಿ ೨,೭೦೮ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ₹ ೪,೪೨೧.೬೦೫ ಲಕ್ಷಗಳ ಬಂಡವಾಳ ತೊಡಗಿಸಲಾಗಿದೆ. ಇವು ೧೧೧೫೩ ಮಂದಿಗೆ ಉದ್ಯೋಗ ಒದಗಿಸಿವೆ. ಹಾಗೆಯೇ ಕೊಳ್ಳೇಗಾಲ ತಾಲೂಕಿನಲ್ಲಿ ૩೦೫೭ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ₹ ૩,೪೪೧.೨೪ ಲಕ್ಷ ಬಂಡವಾಳ ತೊಡಗಿಸಿದ್ದು, ೧೪೯೫૩ ಮಂದಿಗೆ ಉದ್ಯೋಗ ಒದಗಿಸಿದ್ದವು. ಗುಂಡ್ಲುಪೇಟೆ ತಾಲೂಕಿನಲ್ಲಿ ೧೫೨೮ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ₹ ೧૩೮೦.૩೨ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೫,೬೨೫ ಮಂದಿಗೆ ಉದ್ಯೋಗ ಒದಗಿಸಿದ್ದವು. ಯಳಂದೂರು ತಾಲೂಕಿನಲ್ಲಿ ೧,૩೮೬ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ₹ ೧೦೪૩.೪೨೫ ಲಕ್ಷಗಳ ಬಂಡವಾಳ ತೊಡಗಿಸಲಾಗಿದ್ದು, ೭,೦೧೦ ಮಂದಿಗೆ ಉದ್ಯೋಗ ಒದಗಿಸಿದ್ದವು. ಹೀಗೆ ಜಿಲ್ಲೆಯಲ್ಲಿ ಒಟ್ಟು ೮,೫೭೯ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ₹ ೧೦,೨೮೫.೪೯ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ૩೬,೭೪೧ ಮಂದಿಗೆ ಉದ್ಯೋಗ ಸೃಷ್ಟಿಸಲಾಗಿತ್ತು. ಹಾಗೆಯೇ ಜಿಲ್ಲೆಯಲ್ಲಿ (ಮಹದೇಶ್ವರ) ಸಕ್ಕರೆ ಮೆ॥ ಬನ್ನಾರಿ ಅಮ್ಮನ್ ಕಾರ್ಖಾನೆ, ಕುಂತೂರು, ಕೊಳ್ಳೇಗಾಲ ತಾಲೂಕಿನಲ್ಲಿದೆ. ಇದರಲ್ಲಿ ₹ ೮೪೦೦.೨೫ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇದು ೨೦೦ ಮಂದಿಗೆ ಉದ್ಯೋಗ ಒದಗಿಸಿದೆ, ಮೆ॥ ವೇಲನ್ ಟೆಕ್ಸ್‌ಟೈಲ್ಸ್, ಅಂಕಶೆಟ್ಟಿಪುರ, ಚಾಮರಾಜನಗರ ತಾಲೂಕಿನಲ್ಲಿದ್ದು, ಇದರಲ್ಲಿ ₹ ૩೯೨.೧೬ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ಇದು ೬೯ ಮಂದಿಗೆ ಉದ್ಯೋಗ ಒದಗಿಸಿದೆ. ಮೆ॥ಎಸ್.ಎಲ್.ಎಸ್.ಪವರ್ ಪ್ರಾಜೆಕ್ಟ್, ಸತ್ತೇಗಾಲ ಕೊಳ್ಳೆಗಾಲ ತಾಲೂಕಿನಲ್ಲಿದ್ದು, ಇದರಲ್ಲಿ ₹ ೪೫೦೦ ಲಕ್ಷ ಬಂಡವಾಳ ತೊಡಗಿಸಿದ್ದು, ೨೦ ಮಂದಿಗೆ ಉದ್ಯೋಗ ಒದಗಿಸಿದೆ. ಇದು ಇನ್ನೂ ಪ್ರಯೋಗಿಕ ಉತ್ಪಾದನಾ ಹಂತದಲ್ಲಿದೆ. ಮೆ॥ ಪಯನೀರ್ ಪವರ್ ಕಾರ್ಪೋರೇಷನ್ ರಂಗನಾಥಸ್ವಾಮಿ ಮಿನಿ ಹೈಡೆಲ್ ಪ್ಲಾಂಟ್)(ಲಿ) ಶಿವಸಮುದ್ರಂ, ಕೊಳ್ಳೇಗಾಲ ತಾಲೂಕಿನಲ್ಲಿದ್ದು, ಇದರಲ್ಲಿ ₹ ೭,೬೭೮ ಲಕ್ಷ ಬಂಡವಾಳ ತೊಡಗಿಸಲಾಗಿದ್ದು, ೨೧ ಮಂದಿಗೆ ಉದ್ಯೋಗ ಒದಗಿಸಿದೆ. ಇದೂ ಸಹ ಪ್ರಯೋಗಿಕ ಉತ್ಪಾದನಾ ಹಂತದಲ್ಲಿದೆ.

# ವಿದ್ಯುಚ್ಛಕ್ತಿ

ಒಂದು ಪ್ರದೇಶದ ಆರ್ಥಿಕ ಅಭಿವೃದ್ಧಿಯು ವಿಪುಲವಾದ ಶಕ್ತಿ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ. ಚಾಮರಾಜನಗರ ಜಿಲ್ಲೆಯ ಎಸ್.ಎಲ್.ಎಸ್. ಪವರ್ ಪ್ರಾಜೆಕ್ಟ್, ಸತ್ತೇಗಾಲ, ಕೊಳ್ಳೇಗಾಲ ತಾಲೂಕು ಹಾಗೂ ಪಯನೀರ್ ಪವರ್ ಕಾರ್ಪೋರೇಷನ್ (ಲಿ), (೨೪.೭೫ ಮೆ.ವ್ಯಾ. ಸಾಮರ್ಥ್ಯದ) ಕೊಳ್ಳೇಗಾಲ ತಾಲೂಕು, ಇವು ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರಗಳಾಗಿವೆ. ನೆರೆಯ ಮಂಡ್ಯ ಜಿಲ್ಲೆಯ ಶಿಂಷಾದಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಕೊಳ್ಳೆಗಾಲ ವಿಭಾಗಕ್ಕೆ (೨೨೦/೬೬/೧೧ ಕೆ.ವಿ. ಮಧುವನಹಳ್ಳಿಯಿಂದ) ಸರಬರಾಜು ಮಾಡಲಾಗುತ್ತಿದೆ. ಚಾಮರಾಜನಗರ ವಿಭಾಗಕ್ಕೆ ಶರಾವತಿ ವಿದ್ಯುತ್ ಉತ್ಪಾದನಾ ಕೇಂದ್ರದಿಂದ (ಮಹಾತ್ಮಗಾಂಧಿ ವಿದ್ಯುತ್ ಉತ್ಪಾದನಾ ಕೇಂದ್ರ) ವಿದ್ಯುತ್ ಸರಬರಾಜಾಗುತ್ತಿದೆ. ಜಿಲ್ಲೆಯಲ್ಲಿ ೩೧–೩–೨೦೦೮ರಲ್ಲಿದ್ದ ಮಾಸ್ಟರ್ ಯೂನಿಟ್/ಉಪಕೇಂದ್ರಗಳು ತಾಲೂಕುವಾರು ಕೆಳಗಿನಂತಿವೆ. ಚಾಮರಾಜನಗರ ತಾಲೂಕಿನಲ್ಲಿ ೬೬/೧೧ ಕೆ.ವಿ. ಕೇಂದ್ರಗಳು ದೊಡ್ಡರಾಯಪೇಟೆ, ಸಂತೇಮರಹಳ್ಳಿ, ಹೊನ್ನಳ್ಳಿ, ಹರವೆ ಹಾಗೂ ಪುಣ್ಯದಹುಂಡಿಗಳಲ್ಲಿಯೂ, ೩೩/೧೧ ಕೆ.ವಿ. ಕೇಂದ್ರ ಚಂದಕವಾಡಿಯಲ್ಲಿದೆ. ಗುಂಡ್ಲುಪೇಟೆ ತಾಲೂಕಿನಲ್ಲಿ ೬೬/೧೧ ಕೆ.ವಿ. ಕೇಂದ್ರಗಳು ಬೊಮ್ಮಲಾಪುರ, ಬೇಗೂರು, ಹಂಗಳ ಹಾಗೂ ೩೩/೧೧ ಕೆ.ವಿ. ಕೇಂದ್ರ ತೆರಕಣಾಂಬಿಯಲ್ಲಿದೆ. ಕೊಳ್ಳೇಗಾಲ ತಾಲೂಕಿನಲ್ಲಿ ೨೨೦/೬೬/೧೧ ಕೆ.ವಿ. ಕೇಂದ್ರ ಮಧುವನಹಳ್ಳಿಯಲ್ಲಿಯೂ, ೬೬/೧೧ ಕೆ.ವಿ. ಕೇಂದ್ರಗಳು ಕೊಳ್ಳೇಗಾಲ, ಸತ್ತೇಗಾಲ, ದೊಡ್ಡಿಂದುವಾಡಿ, ಹನೂರು, ಕೌದಳ್ಳಿ, ರಾಮಾಪುರ, ಮಾರ್ಟಳ್ಳಿ ಹಾಗೂ ಪಿ.ಜಿ.ಪಾಳ್ಯಗಳಲ್ಲಿವೆ. ಯಳಂದೂರು ತಾಲೂಕಿನಲ್ಲಿ ೬೬/೧೧ ಕೆ.ವಿ. ಕೇಂದ್ರ ಸಂತೇಮರಹಳ್ಳಿಯಲ್ಲಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೪ ಅನ್ನು ನೋಡಿ.

**ಕೋಷ್ಟಕ ೮.೩೪: ಚಾಮರಾಜನಗರ ಜಿಲ್ಲೆಯಲ್ಲಿ ೩೧–೩–೨೦೧೨ರಲ್ಲಿದ್ದಂತೆ ಮಾಸ್ಟರ್ ಯುನಿಟ್/ಉಪಕೇಂದ್ರಗಳ ವಿವರ**

| ಕ್ರ. ಸಂ. | ತಾಲೂಕು | ವಿತರಣಾ ಕೇಂದ್ರದ ಹೆಸರು | ಸಾಮರ್ಥ್ಯ | ಪವರ್ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ | ಪವರ್ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ (ಎಂ.ವಿ.ಎ) | ಒಟ್ಟು ಸಾಮರ್ಥ್ಯ (ಎಂ.ವಿ.ಎ) |
|---|---|---|---|---|---|---|
| ೧. | ಚಾಮರಾಜನಗರ | ದೊಡ್ಡರಾಯಪೇಟೆ | ೬೬/೧೧ ಕೆ.ವಿ. | ೦೪ | ೨೦x೨<br>೧೨.೫x೨ | ೬೫ |
| ೨. | | ಸಂತೇಮರಹಳ್ಳಿ | ೬೬/೧೧ ಕೆ.ವಿ. | ೦೨ | ೧೨.೫x೧<br>೬.೩x೧ | ೧೮.೮ |
| ೩. | | ಹೊನ್ನಳ್ಳಿ | ೬೬/೧೧ ಕೆ.ವಿ. | ೦೨ | ೧೨.೫ x೨ | ೨೫ |
| ೪. | | ಹರವೆ | ೬೬/೧೧ ಕೆ.ವಿ. | ೦೨ | ೧೨.೫ x೨ | ೨೫ |
| ೫. | | ಚಂದಕವಾಡಿ | ೩೩/೧೧ ಕೆ.ವಿ. | ೦೨ | ೦೫ x೨ | ೧೦ |
| ೬. | | ಪಣ್ಯದಹುಂಡಿ | ೬೬/೧೧ ಕೆ.ವಿ | ೦೨ | ೦೮ x೨ | ೧೬ |
| ೭ | | ಅಟ್ಟಗುಳಿಪುರ | ೬೬/೧೧ ಕೆ.ವಿ | ೦೧ | ೦೮ | ೦೮ |

| ಕ್ರ. ಸಂ. | ತಾಲೂಕು | ವಿತರಣಾ ಕೇಂದ್ರದ ಹೆಸರು | ಸಾಮರ್ಥ್ಯ | ಪವರ್ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ | ಪವರ್ ಟ್ರಾನ್ಸ್‌ಫಾರ್ಮರ್‌ಗಳ ಸಾಮರ್ಥ್ಯ (ಎಂ.ವಿ.ಎ) | ಒಟ್ಟು ಸಾಮರ್ಥ್ಯ (ಎಂ.ವಿ.ಎ) |
|---|---|---|---|---|---|---|
| ೧. | **ಗುಂಡ್ಲುಪೇಟೆ** | ಬೊಮ್ಮಲಾಪುರ | ೬೬/೧೧ ಕೆ.ವಿ. | ೦೨ | ೦೮x೧<br>೬.೩x೧ | ೧೪.೩ |
| ೨. | | ಬೇಗೂರು | ೬೬/೧೧ ಕೆ.ವಿ. | ೦೨ | ೬.೩x೧<br>೦೮x೧ | ೧೪.೩ |
| ೩. | | ಹಂಗಳ | ೬೬/೧೧ ಕೆ.ವಿ. | ೦೨ | ೦೮ x೨ | ೧೬ |
| ೪. | | ಗುಂಡ್ಲುಪೇಟೆ | ೬೬/೧೧ ಕೆ.ವಿ. | ೦೨ | ೧೨.೫x೨ | ೨೫ |
| ೫. | | ತೆರಕಣಾಂಬಿ | ೩೩/೧೧ ಕೆ.ವಿ. | ೦೨ | ೦೫ x೨ | ೧೦ |
| ೧. | **ಕೊಳ್ಳೇಗಾಲ** | ಕೊಳ್ಳೇಗಾಲ | ೬೬/೧೧ ಕೆ.ವಿ. | ೦೨ | ೧೨.೫x೨ | ೨೫ |
| ೨. | | ಸತ್ತೇಗಾಲ | ೬೬/೧೧ ಕೆ.ವಿ. | ೦೨ | ೦೮ x೧<br>೬.೩x೧ | ೧೪.೩ |
| ೩. | | ದೊಡ್ಡಿಂದುವಾಡಿ | ೬೬/೧೧ ಕೆ.ವಿ. | ೦೨ | ೦೮ x೧<br>೦೫ x೧ | ೧೩ |
| ೪. | | ಮಧುವನಹಳ್ಳಿ | ೨೨೦/೬೬/೧೧ ಕೆ.ವಿ. | ೦೩ | ೧೦೦ x೨<br>೧೨.೫ x೧ | ೨೧೨.೫ |
| ೫. | | ಹನೂರು | ೬೬/೧೧ ಕೆ.ವಿ. | ೦೨ | ೦೮ x೧<br>೧೨.೫x೧ | ೨೦.೫ |
| ೬. | | ಕೌದಳ್ಳಿ | ೬೬/೧೧ ಕೆ.ವಿ. | ೦೨ | ೧೨.೫x೧<br>೬.೩x೧ | ೧೮.೮ |
| ೭. | | ರಾಮಾಪುರ | ೬೬/೧೧ ಕೆ.ವಿ. | ೦೨ | ೦೮ x೨ | ೧೬ |
| ೮. | | ಮಾರ್ಟಳ್ಳಿ | ೬೬/೧೧ ಕೆ.ವಿ. | ೦೧ | ೦೮x೧ | ೦೮ |
| ೯. | | ಪಿ. ಜಿ. ಪಾಳ್ಯ | ೬೬/೧೧ ಕೆ.ವಿ. | ೦೧ | ೦೮x೧ | ೦೮ |
| ೧. | **ಯಳಂದೂರು** | ಯಳಂದೂರು ತಾಲ್ಲೂಕು | ೬೬/೧೧ ಕೆ.ವಿ. | ೦೨ | ೦೮x೨ | ೧೬ |

***ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕಾರ್ಯ ಮತ್ತು ಪಾಲನಾ ವಿಭಾಗ, ಚಾಮರಾಜನಗರ***

ಜಲ ವಿದ್ಯುತ್ ಬಳಕೆ ಬಂದ ನಂತರ (೧೯೫೬ರಲ್ಲಿ) ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಹಳ್ಳಿಗಳಿಗೆ ಹಾಗೂ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು. ಜಿಲ್ಲೆಯಲ್ಲಿ ೨೦೦೧ರ ಜನಗಣತಿ ಪ್ರಕಾರ ೪೨೪ ಜನವಸತಿ ಇರುವ (Inhabited) ಗ್ರಾಮಗಳು, ೮೫ ಜನವಸತಿ ಇಲ್ಲದಿರುವ (Uninhabited) ಗ್ರಾಮಗಳು ಹಾಗೂ ೫೫೪ ಉಪ ಗ್ರಾಮಗಳಿದ್ದವು (Hamlet). ಜಿಲ್ಲೆಯಲ್ಲಿ ೩೧–೩–೨೦೦೧ರಲ್ಲಿದ್ದಂತೆ ಪ್ರವರ್ಗವಾರು ಬಳಕೆದಾರರ ವಿವರ ಹೀಗಿದೆ ೧,೦೩,೮೫೬ ಗೃಹಬಳಕೆದಾರರು, ೪೩,೩೫೪ ಭಾಗ್ಯಜ್ಯೋತಿ/ ಕುಟೀರಜ್ಯೋತಿ ಬಳಕೆದಾರರು, ೬,೨೬೬ ಸರ್ವ ವಿದ್ಯುತ್ ಗೃಹ ಬಳಕೆದಾರರು, ೧೨,೩೫೭ ವಾಣಿಜ್ಯ ಬಳಕೆದಾರರು, ೪,೩೩೯ ಎಲ್.ಟಿ. ಪವರ್, ೧,೩೩೬ ಜಲ ಕಾಮಗಾರಿ, ೧೬ ಹೆಚ್.ಟಿ. ಪವರ್, ೩೫,೫೮೧ ನೀರಾವರಿ ಪಂಪುಸೆಟ್ಟುಗಳು ಹಾಗೂ ೨೦,೫೧೧ ಬೀದಿ ದೀಪಗಳು ಹೀಗೆ ಒಟ್ಟು ೨,೦೭,೧೦೫ (ಇದರಲ್ಲಿ ಬೀದಿ ದೀಪ ಹೊರತುಪಡಿಸಿ) ಮಂದಿ ವಿದ್ಯುತ್ ಬಳಕೆದಾರರಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೩೫, ೮.೩೬ ಹಾಗೂ ೮.೩೭ ಅನ್ನು ನೋಡಿ.

ದಿ. ೧೬–೭–೧೯೯೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಎಂದು ನಾಮಕರಣ ಮಾಡಲಾಯಿತು. ಇದನ್ನು ದಿ ೧–೬–೨೦೦೨ರಲ್ಲಿ ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ ಹಾಗೂ ಮೆಸ್ಕಾಂಗಳೆಂಬ ನಾಲ್ಕು ಕಂಪನಿಗಳಾಗಿ ವಿಭಜಿಸಲಾಯಿತು. ಚಾಮರಾಜನಗರ ಜಿಲ್ಲೆಯು ಮೆಸ್ಕಾಂ ವ್ಯಾಪ್ತಿಗೆ ಒಳಪಟ್ಟಿತ್ತು. ಮತ್ತೆ ದಿ. ೧–೦೪–೨೦೦೫ರಲ್ಲಿ ಮೆಸ್ಕಾಂ ಅನ್ನು ಚೆಸ್ಕಾಂ ಹಾಗೂ ಮೆಸ್ಕಾಂ ಎಂಬ ಎರಡು ಕಂಪನಿಗಳಾಗಿ ವಿಭಜಿಸಲಾಯಿತು. ಪ್ರಸ್ತುತ ಚಾಮರಾಜನಗರ ಜಿಲ್ಲೆಯು ಚೆಸ್ಕಾಂ ವ್ಯಾಪ್ತಿಗೆ ಒಳಪಟ್ಟಿದೆ. ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳೂ ಸಹ ಚೆಸ್ಕಾಂ ವ್ಯಾಪ್ತಿಗೆ ಒಳಪಟ್ಟ ಜಿಲ್ಲೆಗಳಾಗಿವೆ.

**ಕೋಷ್ಟಕ ೮.೩೫ ಜಿಲ್ಲೆಯಲ್ಲಿ ೧೯೯೭–೯೮ ರಿಂದ ೨೦೦೫–೦೬ ಹಾಗೂ ೩೧–೦೩–೨೦೧೦ ರಲ್ಲಿದ್ದಂತೆ ಪ್ರವರ್ಗವಾರು ವಿದ್ಯುತ್ ಬಳಕೆದಾರರ ವಿವರ.**

| ವಿವರ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ | ೨೦೦೦–೦೧ | ೨೦೦೧–೦೨ | ೨೦೦೨–೦೩ | ೨೦೦೩–೦೪ | ೨೦೦೪–೦೫ | ೨೦೦೫–೦೬ | ೨೦೦೯–೧೦ |
|---|---|---|---|---|---|---|---|---|---|---|
| ಗೃಹ ಬಳಕೆ | ೧,೦೮,೭೭೩ | ೧,೧೪,೬೭೫ | ೯೦,೭೪೫ | ೯೦,೭೫೩ | ೯೦,೬೪೬ | ೧,೩೨,೫೫೯ | ೧,೩೯,೭೮೪ | ೧,೩೯,೯೨೯ | ೧,೫೦,೦೭೯ | ೧,೩೯,೮೮೮ |
| ಸರ್ವ ವಿದ್ಯುತ್ | ೬,೮೦೪ | ೬,೮೦೮ | ೫,೩೪೫ | ೫,೩೩೧ | ೫,೩೫೪ | ೫,೨೨೬ | ೫,೩೭೯ | ೫,೩೮೨ | ೫,೩೯೦ | ೧೪,೯೧೩ |
| ವಾಣಿಜ್ಯ | ೧೧,೭೮೮ | ೧೨,೬೪೯ | ೧೦,೦೦೧ | ೯,೯೨೭ | ೯,೧೯೬ | ೧೦,೨೯೦ | ೧೦,೭೭೦ | ೧೦,೭೫೫ | ೧೧,೬೬೪ | ೧೪,೯೧೩ |
| ಕೈಗಾರಿಕೆ | ೩,೮೪೫ | ೩,೮೯೯ | ೨,೯೭೯ | ೨,೯೯೨ | ೨,೩೧೨ | ೨,೧೯೨ | ೨,೨೬೪ | ೨,೨೨೬ | ೨,೧೭೧ | ೨,೫೪೨ |
| ಕುಡಿಯುವ ನೀರು ಸರಬರಾಜು | ೧,೧೨೫ | ೧,೩೩೧ | ೧,೨೧೯ | ೧,೨೧೧ | ೧,೪೮೧ | ೧,೬೦೭ | ೧,೭೨೨ | ೧,೭೩೦ | ೧,೮೧೫ | ೨,೨೨೦ |
| ನೀರಾವರಿ | ೩೨,೬೮೯ | ೩೬,೭೫೬ | ೩೩,೧೫೩ | ೩೩,೧೬೧ | ೩೭,೦೭೨ | ೪,೦೪೮೭ | ೩೯,೮೮೨ | ೪೦,೧೮೧ | ೪೦,೪೯೩ | ೪೪,೧೫೮ |
| ಬೀದಿ ದೀಪ | ೧,೦೦೮ | ೧,೦೮೫ | ೮೫೧ | ೮೫೧ | ೮೮೭ | ೮೮೫ | ೯೫೪ | ೯೦೬ | ೧,೧೮೦ | ೧,೭೫೩ |
| ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ೩೧,೧೪೫ | ೩೩,೩೨೫ | ೨೬,೬೪೭ | ೨೭,೨೩೦ | ೩೫,೫೩೯ | ೧೫,೩೨೦ | ೧೪,೧೫೪ | ೧೪,೦೭೩ | ೧೩,೯೮೪ | ೭೨,೧೮೧ |
| ಹೆಚ್.ಟಿ. | ೧೭ | ೧೫ | ೧೦ | ೧೦ | ೧೪ | ೨೦ | ೨೦ | ೨೦ | ೨೭ | ೩೯ |
| ಒಟ್ಟು (ಬೀದಿ ದೀಪ ಹೊರತು ಪಡಿಸಿ) | ೧,೯೬,೧೮೬ | ೨,೦೯,೪೫೮ | ೧,೭೦,೦೮೯ | ೧,೭೦,೬೧೫ | ೧,೮೧,೬೧೪ | ೨,೦೭,೭೦೧ | ೨,೧೩,೯೭೫ | ೨,೧೪,೨೯೬ | ೨,೨೫,೬೨೩ | ೨,೯೦,೮೫೪ |

*ಟಿಪ್ಪಣಿ: ೧೯೯೭–೯೮ ಹಾಗೂ ೧೯೯೮–೯೯ರಲ್ಲಿ ಟಿ. ನರಸೀಪುರ ಹಾಗೂ ಬನ್ನೂರು ಉಪವಿಭಾಗಗಳು ಚಾಮರಾಜನಗರ ವಿಭಾಗಕ್ಕೆ ಸೇರಿದ್ದವು.*

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚೆಸ್ಕಾಂ, ಚಾಮರಾಜನಗರ.*

**ಕೋಷ್ಟಕ ೮.೩೬: ಚಾಮರಾಜನಗರ ಜಿಲ್ಲೆಯಲ್ಲಿ ೩೧-೩-೨೦೧೦ರಲ್ಲಿದ್ದಂತೆ ವಿದ್ಯುತ್ ಮಾರ್ಗ ಮತ್ತು ವಿವಿಧ ಸಾಮರ್ಥ್ಯದ ಪರಿವರ್ತಕಗಳ ವಿವರ**

| ಕ್ರ.ಸಂ. | ತಾಲೂಕು | ಹೆಚ್.ಟಿ.ಲೈನ್ (ರೂಟ್ ಕಿ.ಮೀ) | ಎಲ್.ಟಿ.ಲೈನ್ (ರೂಟ್ ಕಿ.ಮೀ) | ಪರಿವರ್ತಕಗಳ (ಸಂಖ್ಯೆ) |
|---|---|---|---|---|
| ೧. | ಚಾಮರಾಜನಗರ | ೧೨೮೧.೮೯೭ | ೩೩೫೨.೨೪೬ | ೩೧೦೪ |
| ೨. | ಗುಂಡ್ಲುಪೇಟೆ | ೧೧೩೭.೬೯೭ | ೨೩೨೧.೩೧೪ | ೨೧೦೮ |
| ೩. | ಕೊಳ್ಳೇಗಾಲ | ೫೨೫.೯೧೦ | ೧೬೯೨.೦೧೦ | ೧೧೪೩ |
| ೪. | ಹನೂರು | ೭೮೨.೧೪೦ | ೩೪೨೫.೪೦೦ | ೧೨೨೩ |
| ೫ | ಯಳಂದೂರು | ೨೩೭.೮೬ | ೫೮೪.೪೫ | ೪೪೩ |
| | ಒಟ್ಟು | **೩,೯೬೫.೫೦೪** | **೧೧,೩೭೫.೩೮೦** | **೮,೦೨೧** |

*ಆಧಾರ: ಕಾರ್ಯನಿರ್ವಾಹಕ ಇಂಜನಿಯರ್ (ವಿ) ರವರ ಕಛೇರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚೆಸ್ಕಾಂ, ಚಾಮರಾಜನಗರ.*

**ಕೋಷ್ಟಕ ೮.೩೭: ಚಾಮರಾಜನಗರ ಜಿಲ್ಲೆಯಲ್ಲಿ ಜನವಸತಿ ತಾಲೂಕುವಾರು ವಿದ್ಯುಚ್ಛಕ್ತಿ ಪಡೆದ ಗ್ರಾಮ ಹಾಗೂ ಉಪಗ್ರಾಮಗಳು**

| ತಾಲೂಕು | ೨೦೦೧ರ ಜನಗಣತಿಯಂತೆ ಜನವಸತಿ ಇರುವ ಗ್ರಾಮಗಳ ಸಂಖ್ಯೆ | ೨೦೧೨ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಪಡೆದ ಗ್ರಾಮಗಳ ಸಂಖ್ಯೆ | ೨೦೦೧ರ ಜನಗಣತಿಯಂತೆ ಇರುವ ಉಪಗ್ರಾಮಗಳು | ೨೦೧೦ರ ಮಾರ್ಚ್ ಅಂತ್ಯಕ್ಕೆ ವಿದ್ಯುತ್ ಸಂಪರ್ಕ ಪಡೆದ ಉಪಗ್ರಾಮಗಳ ಸಂಖ್ಯೆ |
|---|---|---|---|---|
| ಚಾಮರಾಜನಗರ | ೧೭೧ | ೧೭೧ | ೯೭ | ೯೨ |
| ಗುಂಡ್ಲುಪೇಟೆ | ೧೪೦ | ೧೪೦ | ೫೫ | ೬೧ |
| ಕೊಳ್ಳೇಗಾಲ | ೮೫ | ೮೫ | ೩೭೬ | ೧೧೬ |
| ಯಳಂದೂರು | ೨೮ | ೨೮ | ೨೬ | ೦೮ |
| ಒಟ್ಟು | **೪೨೪** | **೪೨೪** | **೫೫೪** | **೨೭೭** |

## ಸಾರಿಗೆ ಮತ್ತು ಸಂಪರ್ಕ

ಸಾರಿಗೆ ಸಾರ್ವಜನಿಕ ಉಪಯುಕ್ತ ಸೇವೆಯಾಗಿದ್ದು, ಇದು ಸರಕು ಮತ್ತು ಸೇವೆಗಳಿಗೆ ಸ್ಥಳ ಮತ್ತು ಕಾಲ ತುಷ್ಟಿಗುಣವನ್ನು ನೀಡುತ್ತದೆ. ಆರ್ಥಿಕ ಅಭಿವೃದ್ಧಿಯ ಸಾಧನೆಗೆ ಅಗತ್ಯವಾದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲ ಉತ್ಪಾದನಾಶೀಲ ಕೃಷಿ, ಪ್ರಗತಿಶೀಲ ಕೈಗಾರಿಕೆ, ಕ್ರೀಯಾಶೀಲ ವಾಣಿಜ್ಯ, ಉದ್ಯಮಶೀಲ ಬ್ಯಾಂಕಿಂಗ್‌ಗಳಂತಹ ವಿವಿಧ ಆರ್ಥಿಕ ಚಟುವಟಿಕೆಗಳ ನಡುವೆ ಸಾರಿಗೆ ಸಮನ್ವಯ ಸಾಧಿಸುವ ಸಂಪರ್ಕ ಸೇತುವೆಯಾಗಿರುವುದು ಉಲ್ಲೇಖಾರ್ಹವಾಗಿದೆ. ಸಾರಿಗೆ ಒಂದು ಆರ್ಥಿಕ ವ್ಯವಸ್ಥೆಯ ಜೀವನಾಡಿ ಇದ್ದಂತೆ. ಆಗಾಗಿ ಕೃಷಿ ಮತ್ತು ಕೈಗಾರಿಕೆಗಳನ್ನು ಕ್ರಮವಾಗಿ ಮಾನವನ ಶರೀರ ಮತ್ತು ಮೂಳೆಗಳಿಗೆ ಹೋಲಿಸಿದರೆ, ಸಾರಿಗೆಯನ್ನು ದೇಹದ ನರಮಂಡಲಕ್ಕೆ ಹೋಲಿಸಿರುವುದು ಸಾರಿಗೆಯ ಮಹತ್ವವನ್ನು ಸಾರುತ್ತದೆ.

ಚಾಮರಾಜನಗರ ಜಿಲ್ಲೆಯು ೧೯೯೭–೧೯೯೮ರಲ್ಲಿ ಹೊಸದಾಗಿ ರಚನೆಗೊಂಡಾಗ ರಾಷ್ಟ್ರೀಯ ಹೆದ್ದಾರಿಗಳಿರಲಿಲ್ಲ. ೧೯೯೯–೨೦೦೦ರಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದ ೧೬೪ ಕಿ.ಮೀ. ಆಗಿದ್ದರೆ, ೨೦೦೫–೨೦೦೬ರಲ್ಲಿ ೧೮೫.೧೮ ಕಿ.ಮೀ. ಗಳಿಗೂ ಹಾಗೂ ೨೦೦೯–೨೦೧೦ರಲ್ಲಿ ೧೮೭ ಕಿ.ಮೀ.ಗಳಿಗೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ.

ಹಾಗೆಯೇ ರಾಜ್ಯ ಹೆದ್ದಾರಿಗಳು ಸದರಿ ವರ್ಷಗಳಲ್ಲಿ ಕ್ರಮವಾಗಿ ೨೨೨ ಕಿ.ಮೀ., ೯೪ ಕಿ.ಮೀ. ೩೩೯.೨೬ ಕಿ.ಮೀ., ೩೩೯.೨೬ ಕಿ.ಮೀ, ಹಾಗೂ ೩೩೯.೨೬ ಕಿ.ಮೀಗಳಾಗಿತ್ತು. ಮುಖ್ಯ ಜಿಲ್ಲಾ ರಸ್ತೆಗಳು ಕ್ರಮವಾಗಿ ೬೪೯ ಕಿ.ಮೀ, ೬೬೫ಕಿ.ಮೀ. ೯೧೩.೦೨ ಕಿ.ಮೀ, ೯೧೩.೦೨ಕಿ.ಮೀ ಹಾಗೂ ೯೯೪ ಕಿ.ಮೀ ಆಗಿತ್ತು. ಈ ರಸ್ತೆಗಳಲ್ಲದೆ ಇತರೆ ಜಿಲ್ಲಾ ರಸ್ತೆಗಳು, ಹಳ್ಳಿ ರಸ್ತೆಗಳು, ಟಿ.ಡಿ.ಬಿ. ರಸ್ತೆಗಳು, ಅರಣ್ಯ ರಸ್ತೆಗಳು, ನೀರಾವರಿ ಇಲಾಖೆ ರಸ್ತೆಗಳು, ಮುನಿಸಿಪಾಲಿಟಿ ರಸ್ತೆಗಳಿರುವುದು ವಿಶೇಷವಾಗಿದೆ. ೧೯೯೭–೯೮ರಲ್ಲಿ ೧,೦೧೪ ಕಿ.ಮೀ. ಹಳ್ಳಿರಸ್ತೆಗಳು, ೩೭೭ ಕಿ.ಮೀ. ಟಿ.ಡಿ.ಬಿ. ರಸ್ತೆಗಳು, ೪೨೯ ಕಿ.ಮೀ. ಅರಣ್ಯ ರಸ್ತೆಗಳು, ೩೪೩ ಕಿ.ಮೀ. ನೀರಾವರಿ ರಸ್ತೆಗಳು, ೨೧೪ ಮುನಿಸಿಪಾಲಿಟಿ ರಸ್ತೆಗಳು ಹೀಗೆ ಜಿಲ್ಲೆಯಲ್ಲಿ ಒಟ್ಟು ೨,೭೬೦ ಕಿ.ಮೀ. ಉದ್ದದ ರಸ್ತೆಗಳಿದ್ದವು. ಇವುಗಳ ಉದ್ದ ೨೦೦೭ರ ಮಾರ್ಚ್ ಅಂತ್ಯಕ್ಕೆ ೨,೧೧೬.೮೩ ಕಿ.ಮೀ. ಹಳ್ಳಿ ರಸ್ತೆಗಳು, ೨೩೬.೭೧ ಕಿ.ಮೀ ಮುನಿಸಿಪಾಲಿಟಿ ರಸ್ತೆಗಳು, ೨೯೦ ಕಿ.ಮೀ. ನೀರಾವರಿ ರಸ್ತೆಗಳು, ೪೮೬.೭೯ ಕಿ.ಮೀ. ಅರಣ್ಯ ರಸ್ತೆಗಳು, ಹೀಗೆ ಒಟ್ಟು ೩,೧೨೯.೪೩ ಕಿ.ಮೀ. ಉದ್ದದ ರಸ್ತೆಗಳಿದ್ದು, ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ.

ಜಿಲ್ಲೆಯ ನಾಲ್ಕು ತಾಲೂಕುಗಳ ಪೈಕಿ ಚಾಮರಾಜನಗರ ತಾಲೂಕು ೧೮ ಕಿ.ಮೀ. ಉದ್ದದ ಬ್ರಾಡ್‌ಗೇಜ್ ಮಾರ್ಗ ಹೊಂದಿದ್ದು, ಉಳಿದ ತಾಲೂಕುಗಳು ರೈಲು ಸಂಪರ್ಕದಿಂದ ವಂಚಿತವಾಗಿವೆ. ಚಾಮರಾಜನಗರ ಜಿಲ್ಲಾ ಕೇಂದ್ರಸ್ಥಾನವು ಮೈಸೂರಿಗೆ ೬೦ ಕಿ.ಮೀ. ಹಾಗೂ ಬೆಂಗಳೂರಿಗೆ ೨೦೦ ಕಿ.ಮೀ. ದೂರದಲ್ಲಿದ್ದು, ನೆರೆಯ ತಮಿಳುನಾಡು ರಾಜ್ಯದೊಂದಿಗೆ ರೈಲು ಸಂಪರ್ಕ ಹೊಂದಬೇಕಾಗಿದೆ.

**ಅಂಚೆ ಕಛೇರಿಗಳು:** ಅಂಚೆ ಕಛೇರಿಗಳು ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾದ ಮತ್ತೊಂದು ಸಂಪರ್ಕ ಮಾಧ್ಯಮವಾಗಿದೆ. ಜಿಲ್ಲೆಯಲ್ಲಿ ೧೯೯೭–೯೮ರಲ್ಲಿ ೨೦೧ ಅಂಚೆ ಕಛೇರಿಗಳು, ೧೩೩ ತಂತಿ ಕಛೇರಿಗಳು, ೪೧ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೭,೬೬೫ ದೂರವಾಣಿ ಸಂಪರ್ಕಗಳಿದ್ದವು. ಆದರೆ ೨೦೦೬–೦೭ರಲ್ಲಿ ೧೭೬ ಅಂಚೆ ಕಛೇರಿಗಳು, ೪೧ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೧೬,೮೭೩, ದೂರವಾಣಿ ಸಂಪರ್ಕಗಳನ್ನು ಹೊಂದಲಾಗಿತ್ತು. ೨೦೦೯–೧೦ರಲ್ಲಿ ೨೦೩ ಅಂಚೆಕ ಕಛೇರಿಗಳು, ೪೪ ದೂರವಾಣಿ ವಿನಿಮಯ ಕೇಂದ್ರಗಳು, ೧೧,೨೭೪ ದೂರವಾಣಿ ಸಂಪರ್ಕಗಳನ್ನು ಹೊಂದಲಾಗಿದೆ. ತ್ವರಿತ ಅಂಚೆ ಸೇವೆ, ಉಪಗ್ರಹ ಮಾನಿಯಾರ್ಡರ್, ಇ–ಮೇಲ್, ಫ್ಯಾಕ್ಸ್, ಎಸ್.ಎಂ.ಎಸ್, ಮೊಬೈಲ್‌ಗಳು ಮುಂತಾದವುಗಳಿಂದಾಗಿ ಅಂಚೆ ಕಛೇರಿಗಳ ಸಂಖ್ಯೆಯಲ್ಲಿ ಇಳಿಮುಖವಾಗಲು ಕಾರಣವಾಗಿದೆ. ಅಲ್ಲದೆ ಖಾಸಗಿ ಕೋರಿಯರ್‌ಗಳ ಸೇವೆಯೂ ಜಿಲ್ಲೆಯಾದ್ಯಂತ ಹರಡಿದೆ.

## ಸಹಕಾರ ಚಳುವಳಿ

ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರರ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನಿಸುವ ವ್ಯವಸ್ಥೆಯೇ ಸಹಕಾರ ಚಳುವಳಿ. ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವ-ಇಚ್ಛೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" (Each for All and All for Each) ಎಂಬುದು ಸಹಕಾರದ ಮೂಲ ತತ್ವವಾಗಿದೆ.

ಜಿಲ್ಲೆಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ವಿವಿಧೋದ್ದೇಶ ಸಹಕಾರ ಸಂಘ, ಹಾಲು ಉತ್ಪಾದಕರ ಸಹಕಾರಿ ಸಂಘ, ಗೃಹ ನಿರ್ಮಾಣ ಸಹಕಾರ ಸಂಘ, ಮಹಿಳಾ ಸಹಕಾರ ಸಂಘ ಮೊದಲಾದವುಗಳಿದ್ದು, ಜಿಲ್ಲೆಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿವೆ.

## ಮಾನವ ಸಂಪನ್ಮೂಲ

ಜಿಲ್ಲೆಯ ಜನಸಂಖ್ಯೆ ೨೦೦೧ರ ಜನಗಣತಿಯಂತೆ ೯,೬೫,೪೬೨ ಆಗಿದ್ದು, ಇದರಲ್ಲಿ ೨,೩೭,೬೨೪ ಮಂದಿ ಪರಿಶಿಷ್ಟ ಜಾತಿ ಹಾಗೂ ೧,೦೬,೧೧೧ ಮಂದಿ ಪರಿಶಿಷ್ಟ ಪಂಗಡದವರು ಸೇರಿದ್ದಾರೆ. ೧೯೦೧ ರಿಂದ ೨೦೧೧ರ ವರೆಗಿನ ಹನ್ನೊಂದು ದಶಕಗಳಲ್ಲಾಗಿರುವ ಜನಸಂಖ್ಯೆಯ ಬೆಳವಣಿಗೆಯ ದರ, ಸ್ತ್ರೀ ಪುರುಷರ ಪ್ರಮಾಣ (೧೦೦೦ ಪುರುಷರಿಗೆ ಲಭ್ಯವಿರುವ ಸ್ತ್ರೀಯರ ಸಂಖ್ಯೆ) ಹಾಗೂ ಜನಸಾಂದ್ರತೆಯನ್ನು ಕೋಷ್ಟಕ ೮.೩೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೮ ಜಿಲ್ಲೆಯಲ್ಲಿ ದಶಕವಾರು ಜನಸಂಖ್ಯಾ ಬೆಳವಣಿಗೆಯ ದರ**

| ಜನಗಣತಿ ವರ್ಷಗಳು | ಜನಸಂಖ್ಯೆ | ದಶವಾರ್ಷಿಕ ವ್ಯತ್ಯಾಸ | ದಶವಾರ್ಷಿಕ ಶೇಕಡಾ ವ್ಯತ್ಯಾಸ | ಪುರುಷರು | ಮಹಿಳೆಯರು | ಸ್ತ್ರೀ–ಪುರುಷರ ಪ್ರಮಾಣ | ಜನಸಾಂದ್ರತೆ (ಪ್ರತಿ ಚದರ ಕಿ.ಮೀ.) |
|---|---|---|---|---|---|---|---|
| ೧೯೦೧ | ೩,೩೪,೬೭೬ | – | – | ೧,೬೫,೩೧೪ | ೧,೬೯,೩೬೨ | ೧,೦೨೪ | ೬೬ |
| ೧೯೧೧ | ೩,೪೪,೪೧೪ | ೯,೭೩೮ | ೨.೯೧ | ೧,೭೦,೯೩೯ | ೧,೭೩,೪೭೫ | ೧,೦೧೫ | ೬೮ |
| ೧೯೨೧ | ೩,೨೮,೫೦೧ | –೧೫,೯೧೩ | –೪.೬೨ | ೧,೬೩,೬೮೬ | ೧,೬೪,೮೧೫ | ೧,೦೦೭ | ೬೪ |
| ೧೯೩೧ | ೩,೫೨,೪೮೫ | ೨೩,೯೮೪ | ೭.೩೦ | ೧,೭೬,೩೯೮ | ೧,೭೬,೦೮೭ | ೯೯೮ | ೬೯ |
| ೧೯೪೧ | ೩,೯೦,೩೩೭ | ೩೭,೮೫೨ | ೧೦.೭೪ | ೧,೯೭,೬೭೦ | ೧,೯೨,೬೬೭ | ೯೭೫ | ೭೭ |
| ೧೯೫೧ | ೪,೪೯,೪೪೮ | ೫೯,೧೧೧ | ೧೫.೧೪ | ೨,೨೭,೨೬೬ | ೨,೨೨,೧೮೨ | ೯೭೮ | ೮೮ |
| ೧೯೬೧ | ೫,೩೩,೭೫೯ | ೮೪,೩೧೧ | ೧೮.೭೬ | ೨,೭೧,೨೫೦ | ೨,೬೨,೫೦೭ | ೯೬೮ | ೧೦೫ |
| ೦೯೭೧ | ೬,೧೬,೫೦೨ | ೮೨,೭೪೩ | ೧೫.೬೦ | ೩,೧೫,೪೧೨ | ೩,೦೧,೦೯೦ | ೯೫೫ | ೧೨೧ |
| ೧೯೮೧ | ೭,೬೮,೧೯೮ | ೧,೫೧,೬೯೬ | ೨೪.೬೧ | ೩,೯೨,೭೮೯ | ೩,೭೫,೪೦೯ | ೯೫೬ | ೧೫೧ |
| ೧೯೯೧ | ೮,೮೩,೩೬೫ | ೧,೧೫,೧೬೭ | ೧೪.೯೯ | ೪,೫೨,೩೩೩ | ೪,೩೧,೦೩೨ | ೯೫೨ | ೧೭೩ |
| ೨೦೦೧ | ೯,೬೫,೪೬೨ | ೮೨,೦೯೭ | ೯.೩೦ | ೪,೮೯,೯೪೦ | ೪,೭೫,೫೨೨ | ೯೭೧ | ೧೮೯ |
| ೨೦೧೧(ತಾ) | ೧೦,೨೦,೯೬೨ | ೫೫,೫೦೦ | ೫.೭೫ | ೫,೧೩,೩೫೯ | ೫,೦೭,೬೦೩ | ೯೮೯ | ೨೦೦ |

*ಆಧಾರ ೨೦೧೧ರ ಜನಗಣತಿ, ತಾ: ತಾತ್ಕಾಲಿಕ*

## ಮಾನವ ಶಕ್ತಿ ಯೋಜನೆ

ವಿವಿಧ ವಲಯ ಮತ್ತು ಕಸುಬುಗಳ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಿ ಶ್ರಮವನ್ನು ದಕ್ಷವಾಗಿ ಬಳಸಿಕೊಳ್ಳುವುದೇ ಮಾನವಶಕ್ತಿ ಯೋಜನೆಯಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಈ ಯೋಜನೆ ಸೂಕ್ತ ಪರಿಹಾರವಾಗಬಲ್ಲದು. ಚಾಮರಾಜನಗರ ಜಿಲ್ಲೆಯಲ್ಲಿ ಕೃಷಿ ಸಾಗುವಳಿದಾರರ ಸಂಖ್ಯೆ ೧,೨೪,೩೧೨ ಆಗಿದ್ದು, ಕೃಷಿ ಕಾರ್ಮಿಕರ ಸಂಖ್ಯೆ ೧,೯೨,೯೭೮ ಆಗಿತ್ತು. ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರಿಗಿಂತ ಕೃಷಿ ಸಾಗುವಳಿದಾರರು ಕಡಿಮೆ ಇರುವುದು ಅಂಕಿಅಂಶಗಳಿಂದ ಸ್ಪಷ್ಟವಾಗಿದೆ. ಕಬ್ಬು, ತಂಬಾಕು, ಕಡ್ಲೆಕಾಯಿ, ಟಾಪಿಕಾ (Tapioca) ಮುಂತಾದವು, ದ್ವಿದಳ ದಾನ್ಯಗಳು, ಕಚ್ಚಾನಾರು ಸಂಬಂಧಿತ ಬೆಳೆಗಳು, ಹತ್ತಿ, ಸಿಂಕೋನಾ ಹಾಗೂ ಔಷಧೀಯ ಸಸ್ಯಗಳು, ವಿಳ್ಯದೆಲೆ, ಹೂ, ಹಣ್ಣು, ತರಕಾರಿ, ಮುಂತಾದವುಗಳನ್ನು ವ್ಯವಸಾಯದಿಂದ ಹೊರತುಪಡಿಸಿರುವುದು ಹಾಗೂ ದ್ವಿತೀಯ, ತೃತೀಯ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿರುವುದು ವ್ಯವಸಾಯ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ ಕಡಿಮೆಯಾಗಿರುವುದಕ್ಕೆ ಕಾರಣವಾಗಿದೆ. ಮಾನವ ಶಕ್ತಿ ಯೋಜನೆ ಫಲಕಾರಿಯಾಗಲು ಜನಸಾಕ್ಷರತೆ ಹೊಂದುವುದು ಅವಶ್ಯಕ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೧೯೯೧ರಲ್ಲಿ ಶೇ. ೪೭.೩೧ರಷ್ಟಿತ್ತು. ಇದು ೨೦೦೧ರಲ್ಲಿ ಶೇ. ೫೯.೨೫ಕ್ಕೆ ಹೆಚ್ಚಳಗೊಂಡಿದ್ದು, ೨೦೧೧ರಲ್ಲಿ ಶೇ. ೬೧.೧೨(ತಾತ್ಕಾಲಿಕ) ಇನ್ನೂ ಶೇ. ೩೮.೮೮ರಷ್ಟು ಜನ ಅನಕ್ಷರಸ್ಥರಾಗಿರುವುದು ಮಾನವ ಸಂಪತ್ತಿನ ಬಳಕೆ ದೃಷ್ಟಿಯಿಂದ ಒಳ್ಳೆಯದಲ್ಲ.

೨೦೦೧ರ ಜನಗಣತಿಯಂತೆ ಜಿಲ್ಲೆಯಲ್ಲಿ ೪,೪೮,೩೬೯ ಮಂದಿ ಒಟ್ಟು ಕೆಲಸಗಾರರು ಹಾಗೂ ೫,೧೭,೦೯೩ ಮಂದಿ ಕೆಲಸಗಾರರಲ್ಲದವರಿದ್ದರು. ೪,೪೮,೩೬೯ ಒಟ್ಟು ಕೆಲಸಗಾರರಲ್ಲಿ ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರು, ೧,೧೧,೪೦೮ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರು ಸೇರಿದ್ದರು. ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರಲ್ಲಿ ೧,೧೬,೬೬೦ ಮಂದಿ ಕೃಷಿ ಸಾಗುವಳಿದಾರರು, ೧,೧೨,೨೮೯ ಕೃಷಿ ಕಾರ್ಮಿಕರು, ೧೪,೨೮೧ ಗೃಹಕೈಗಾರಿಕೆಗಳಲ್ಲಿ ಹಾಗೂ ೯೩,೭೩೧ ಇತರೆ ಕೆಲಸಗಾರರಿದ್ದರು. ೧,೧೧,೪೦೮ ಮಂದಿ ಸೀಮಾಂತ ಕೆಲಸಗಾರರಿದ್ದು, ಇವರಲ್ಲಿ ೭,೬೫೨ ಕೃಷಿ ಸಾಗುವಳಿದಾರರು, ೮೦,೬೮೯ ಮಂದಿ ಕೃಷಿ ಕಾರ್ಮಿಕರು, ೫,೩೧೩ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧೭,೭೫೪ ಮಂದಿ ಇತರೆ ಕೆಲಸಗಾರರು ಸೇರಿದ್ದರು.

## ಯೋಜನೆಗಳು

ಜಿಲ್ಲಾ ಯೋಜನೆ ಆಯಾ ಪ್ರದೇಶದ ಜನರ ಅಗತ್ಯಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ತರ್ತಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ಸಹಕಾರ, ಅರಣ್ಯ, ಶಿಕ್ಷಣ, ಪಂಚಾಯತ್ ರಾಜ್, ಸಮಾಜಕಲ್ಯಾಣ, ಕಾರ್ಮಿಕ ಕಲ್ಯಾಣ ಮೊದಲಾದ ಹತ್ತು ಹಲವು ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದೇ ಪಂಚವಾರ್ಷಿಕ ಯೋಜನೆಗಳ ಪ್ರಧಾನ ಉದ್ದೇಶಗಳಾಗಿವೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಆರಂಭವಾಗುವುದಕ್ಕೆ ಮೊದಲೇ ಕರ್ನಾಟಕವು ಇಂತಹ ಯೋಜನೆಯ ಅವಶ್ಯಕತೆಯನ್ನು ಮನಗಂಡಿತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲೆ ಯೋಜಿತ ಆರ್ಥಿಕಾಭಿವೃದ್ಧಿ ೧೯೧೦ರಲ್ಲೇ ಪ್ರಾರಂಭವಾಗಿತ್ತು. ಈ ಯೋಜನೆಗಳ ಮಹತ್ವದ ಉದ್ದೇಶ ಬಡತನ ನಿರ್ಮೂಲನೆ ಹಾಗೂ ಆರ್ಥಿಕ ಸ್ವಾವಲಂಬನೆಗಳನ್ನು ಸಾಧಿಸುವುದೇ ಆಗಿತ್ತು.

ಸ್ಥಳೀಯ ಅಭಿವೃದ್ಧಿ ಯೋಜನೆಗಳನ್ನು ಮೊದಲ ಬಾರಿಗೆ ಮೈಸೂರು ರಾಜ್ಯದಲ್ಲಿ ಪ್ಲಾನಿಂಗ್ ಕಮೀಷನ್ ೧೯೫೩–೫೪ರಲ್ಲಿ ಆರಂಭಿಸಿತು. ಇದರ ಉದ್ದೇಶ ಯೋಜನಾ ಆಯೋಗದ ಅನುದಾನ, ರಾಜ್ಯ ಸರ್ಕಾರದ ಭಾಗ, ಸ್ಥಳೀಯ ಸಂಸ್ಥೆಗಳ ಭಾಗ ಹಾಗೂ ಸಾರ್ವಜನಿಕ ಕೊಡುಗೆಯನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶವನ್ನು ಶೀಘ್ರ ಅಭಿವೃದ್ಧಿಗೊಳಿಸುವುದೇ ಆಗಿತ್ತು. ಚಾಮರಾಜನಗರ ಜಿಲ್ಲೆಯು ೧೯೯೭–೯೮ರ ವರೆಗೂ ಮೈಸೂರು ಜಿಲ್ಲೆಯ ಭಾಗವಾಗಿತ್ತು. ಆಗ ಈ ಭಾಗದ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವಿಭಜಿತ ಮೈಸೂರು ಜಿಲ್ಲೆಯ ನಿವ್ವಳ ತಲಾ ವರಮಾನ ೧೯೯೩–೯೪ರಲ್ಲಿ ₹ ೮,೦೩೯ ಆಗಿದ್ದು, ರಾಜ್ಯದಲ್ಲಿ ಎಂಟನೇಯ ಸ್ಥಾನವನ್ನು ಪಡೆದಿತ್ತು. ಆದರೆ ವಿಭಜನೆಯ ನಂತರ ೨೦೦೦–೦೧ರಲ್ಲಿ ತಲಾ ವರಮಾನ ₹ ೧೬,೨೭೪ಗಳಿಗೆ ಹೆಚ್ಚಳಗೊಂಡಿದ್ದರೂ, ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ೧೨ಕ್ಕೆ ಕುಸಿದಿದೆ. ಹಾಗೆಯೇ ೨೦೦೧–೦೨ರಲ್ಲಿ ₹ ೧೩,೮೮೦, ೧೭ನೇ ಸ್ಥಾನ, ೨೦೦೨–೦೩ರಲ್ಲಿ ₹ ೧೩,೬೪೨, ೨೦ನೇ ಸ್ಥಾನ ಹಾಗೂ ೨೦೦೩–೦೪ರಲ್ಲಿ ₹ ೧೩,೯೮ಗಳನ್ನು ಪಡೆದು ೨೪ನೇ ಸ್ಥಾನಕ್ಕೆ ಕುಸಿದಿರುವುದು ಈ ಜಿಲ್ಲೆಯ ಆರ್ಥಿಕ ಸ್ಥಿತಿಗತಿ ಶೋಚನೀಯವಾಗಿರುವುದು ಅಂಕಿ ಅಂಶಗಳಿಂದ ಸ್ಪಷ್ಟಗೊಂಡಿದೆ. ಜಿಲ್ಲೆಯು ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದರಿಂದ ಹಿಂದಿನ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ೧೯೯೭–೨೦೦೨ರ ವರೆಗಿನ ಒಂಭತ್ತನೆಯ ಪಂಚವಾರ್ಷಿಕ ಯೋಜನೆ ಹಾಗೂ ೨೦೦೨–೨೦೦೭ರವರೆಗಿನ ೧೦ನೇ ಪಂಚವಾರ್ಷಿಕ ಯೋಜನೆ ಹಾಗೂ ೨೦೦೭–೨೦೧೨ರ ವರೆಗಿನ ೧೧ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಆದ ಜಿಲ್ಲೆಯ ಅಭಿವೃದ್ಧಿಯ ಸಂಕ್ಷಿಪ್ತ ಪರಿಚಯ ಇಲ್ಲಿದೆ.

## ಒಂಭತ್ತನೆಯ ಪಂಚವಾರ್ಷಿಕ ಯೋಜನೆ (೧೯೯೭–೨೦೦೨)

ಈ ಯೋಜನೆಯು ಪ್ರಾರಂಭವಾಗುವ ಹೊತ್ತಿಗೆ ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡಿತ್ತು. ಈ ಯೋಜನಾವಧಿಯಲ್ಲಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಆದ ವೆಚ್ಚವನ್ನು ಕೋಷ್ಟಕ ೮.೩೯ರಲ್ಲಿ ನೀಡಿದೆ.

ಈ ಯೋಜನೆಯ ಆರಂಭದ ಎರಡನೇ ವರ್ಷದಲ್ಲಿ ಜಿಲ್ಲೆಯ ಪ್ರತಿ ತಾಲೂಕಿಗೆ ಯುವಜನ ಮೇಳಕ್ಕಾಗಿ ₹ ೬,೦೦೦ಗಳನ್ನು ಖರ್ಚು ಮಾಡಲಾಯಿತು. ತಾಲೂಕು ಮಟ್ಟದ ದಸರಾ ಗ್ರಾಮೀಣ ಮತ್ತು ಮಹಿಳಾ ಕ್ರೀಡಾಕೂಟಕ್ಕೆ ಪ್ರತಿ ತಾಲೂಕಿಗೆ ₹ ೧೨,೦೦೦ಗಳನ್ನು ವೆಚ್ಚ ಮಾಡಲಾಯಿತು. ಜಿಲ್ಲಾ ಮಟ್ಟದ ದಸರಾ ಗ್ರಾಮೀಣ ಹಾಗೂ ಮಹಿಳಾ ಕ್ರೀಡಾಕೂಟಕ್ಕೆ ₹ ೧೧,೭೨೫ಗಳನ್ನು ವೆಚ್ಚ ಮಾಡಲಾಯಿತು. ಗ್ರಾಮೀಣ ಕ್ರೀಡಾ ಕೇಂದ್ರಗಳು ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ₹ ೭,೯೦೫ಗಳನ್ನು ಖರ್ಚು ಮಾಡಲಾಗಿದೆ. ರಸ್ತೆಗಳ ಡಾಂಬರೀಕರಣಕ್ಕೆ ₹ ೭.೫೨ ಲಕ್ಷ, ಇತರೆ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕೆ ₹ ೩.೨೭ಲಕ್ಷ, ಹೊಸ ಸೇತುವೆಗಳ ನಿರ್ಮಾಣಕ್ಕೆ ₹ ೧೫.೩೬ಲಕ್ಷ, ಗ್ರಾಮಾಂತರ ರಸ್ತೆ ಸಂಪರ್ಕ ಕಲ್ಪಸಲು ₹ ೫.೬೦ ಲಕ್ಷ, ವಿಶೇಷ ಘಟಕ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣಕ್ಕೆ ₹ ೧೬.೦೫ ಲಕ್ಷ ವೆಚ್ಚ ಮಾಡಲಾಯಿತು.

ಮೂರರಿಂದ ಆರು ವರ್ಷದೊಳಗಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳಿಗೆ ಶಾಲಾಪೂರ್ವ ಶಿಕ್ಷಣ ನೀಡಲಾಗುತ್ತಿತ್ತು. ಆ ಮಕ್ಕಳಿಗೆ ಪ್ರತಿ ಮಗುವಿಗೆ ದಿನಕ್ಕೆ ₹ ಒಂದನ್ನು ಆಹಾರಕ್ಕಾಗಿ ವೆಚ್ಚ ಮಾಡಲಾಗುತ್ತಿದ್ದು, ಅದಕ್ಕಾಗಿ ₹ ೨೩.೦೯ಲಕ್ಷ ವೆಚ್ಚ ಮಾಡಲಾಗಿತ್ತು. ಐದರಿಂದ ೧೦ನೇ ತರಗತಿಯವರೆಗೆ ದೂರದ ಊರುಗಳಿಂದ ಬಂದು ವಿದ್ಯಾಭ್ಯಾಸ ಮಾಡುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೆ

ಪ್ರತಿ ತಿಂಗಳಿಗೆ ಒಬ್ಬರಿಗೆ ₹ ೩೫೦ ವೆಚ್ಚ ಮಾಡಿ ಮೂರು ಹೊತ್ತು ಊಟ, ಸಂಜೆ ಕಾಫಿ, ತಿಂಡಿ ಮೊದಲಾದ ವ್ಯವಸ್ಥೆಯೊಂದಿಗೆ ವಸತಿ ವ್ಯವಸ್ಥೆ ಒದಗಿಸಲಾಗುತ್ತಿದೆ. ೧೧ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ₹ ೧೨.೭೩ ಲಕ್ಷ ವೆಚ್ಚ, ಮೊರಾರ್ಜಿ ದೇಸಾಯಿ ವಸತಿಶಾಲೆ ನಿರ್ವಹಣೆಗಾಗಿ ₹ ೬.೫೦ ಲಕ್ಷ ವೆಚ್ಚ, ಒಂದನೇ ತರಗತಿಯಿಂದ ೪ನೇ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ೨೭,೯೬೦ ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ₹ ೭೫ ರಂತೆ ವಿದ್ಯಾರ್ಥಿ ವೇತನ ಒದಗಿಸಲಾಗುತ್ತಿದ್ದು, ಇದಕ್ಕಾಗಿ ₹ ೨೦.೯೭ ಲಕ್ಷ ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ೧೯೯೮–೯೯ರಲ್ಲಿ ೧೦೮೫ ಅಂಗನವಾಡಿ ಕೇಂದ್ರಗಳ ಮೂಲಕ ಆರು ವರ್ಷದೊಳಗಿನ ೫೫,೩೬೯ ಮಕ್ಕಳಿಗೆ ಹಾಗೂ ೧೧,೫೩೭ ಮಂದಿ ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ ವಿತರಿಸಲಾಗಿದ್ದು, ಇದಕ್ಕಾಗಿ ₹ ೧೭೩.೧೦ ಲಕ್ಷ ವ್ಯಯಿಸಲಾಗಿತ್ತು. ಹಾಗೆಯೇ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ೧೮ ಕುಟೀರಗಳಲ್ಲಿನ ೪೫೦ ಮಕ್ಕಳ ರಕ್ಷಣೆ ಹಾಗೂ ಪೋಷಣೆಗಾಗಿ ಒಟ್ಟು ₹ ೧೧.೬೩ ಲಕ್ಷಗಳನ್ನು ಸಂಬಂಧಪಟ್ಟ ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗಿದೆ. ವಿಧವೆಯರ ಪುನರ್ ವಿವಾಹಕ್ಕೆ ₹ ೪೪,೦೦೦ ಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗಿದ್ದು, ಇದರಿಂದ ಐದು ಫಲಾನುಭವಿಗಳು ಪ್ರಯೋಜನ ಪಡೆದಿದ್ದಾರೆ. "ನಮ್ಮ ಮಗಳು ನಮ್ಮ ಶಕ್ತಿ" ಯಡಿಯಲ್ಲಿ ೨೫೨ ಫಲಾನುಭವಿಗಳಿಗೆ ₹ ೬.೩೦ಲಕ್ಷ ಆರ್ಥಿಕ ಸಹಾಯ ನೀಡಿ ಭಾರತೀಯ ಜೀವ ವಿಮಾ ನಿಗಮದಲ್ಲಿ ಠೇವಣಿಯಿಡಲಾಗಿದೆ.

ಹಸಿರು ಮತ್ತು ಜೈವಿಕ ಗೊಬ್ಬರ ಯೋಜನೆಗಾಗಿ ₹ ೦.೨೫ ಲಕ್ಷಗಳನ್ನೂ, ಸಸ್ಯ ಸಂರಕ್ಷಣೆಗಾಗಿ ₹ ೧.೫೬ ಲಕ್ಷಗಳನ್ನೂ, ಕಬ್ಬು ಅಭಿವೃದ್ಧಿಗಾಗಿ ₹ ೧೧ ಲಕ್ಷಗಳನ್ನೂ, ಕೇಂದ್ರ ಪುರಸ್ಕೃತ ಸಮಗ್ರ ಏಕದಳ ಧಾನ್ಯ ಅಭಿವೃದ್ಧಿಗಾಗಿ ₹ ೭.೪೨ ಲಕ್ಷಗಳನ್ನು, ವೇಗವರ್ಧಕ ಮುಸುಕಿನ ಜೋಳ ಯೋಜನೆಗೆ ₹ ೧.೮೦ ಲಕ್ಷಗಳನ್ನೂ, ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿಗಾಗಿ ₹ ೪.೯೨ ಲಕ್ಷಗಳನ್ನೂ, ಹಾಗೂ ಕೇಂದ್ರ ಪುರಸ್ಕೃತ ಎಣ್ಣೆಕಾಳು ಉತ್ಪಾದನೆಗಾಗಿ ₹ ೭.೫೮ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು. ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ₹ ೨.೨೪ ಲಕ್ಷಗಳನ್ನೂ, ಅಣಬೆ ಬೆಳೆಗಾಗಿ ₹ ೦.೧೦ಲಕ್ಷಗಳನ್ನು, ಖರ್ಚು ಮಾಡಿ ೨೦೦ ಫಲಾನುಭವಿಗಳಿಗೆ ಅಣಬೆ ಕೃಷಿ ಕೈಗೊಳ್ಳುವ ತರಬೇತಿಗಾಗಿ ವೆಚ್ಚ ಮಾಡಲಾಗಿತ್ತು. ಮೀನುಮರಿ ಉತ್ಪಾದನೆ ಪಾಲನೆಗಾಗಿ ₹ ೧.೯೪ ಲಕ್ಷಗಳನ್ನು ವೆಚ್ಚಮಾಡಿ, ₹ ೨೧.೨೧ ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿತ್ತು. ಒಂದು ಮೀನು ಕೊಳ ನಿರ್ಮಾಣ ಮಾಡಲು ₹ ೭೫೦೦ಗಳನ್ನೂ, ಗ್ರಾಸ್ ಕಾರ್ಪ್ ಮೀನುಮರಿ ಸರಬರಾಜಿಗೆ ₹ ೦.೧೩ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹಾಗೆಯೇ ಯೋಜನೆಯ ಅಂತಿಮ ವರ್ಷದಲ್ಲಿ ₹ ೩೫೭.೯೭ ಲಕ್ಷಗಳನ್ನು ಕುಟುಂಬ ಕಾರ್ಯಕ್ರಮಗಳಿಗೆ, ₹ ೩೬೮.೦೦ ಲಕ್ಷಗಳನ್ನು ತಾಯಿ ಮಕ್ಕಳ ಆರೋಗ್ಯಕ್ಕೆ, ₹ ೨೨೨ ಲಕ್ಷಗಳನ್ನು ಕ್ಷಯ ನಿಯಂತ್ರಣಕ್ಕೆ, ₹ ೮೮೦.೦೭ ಲಕ್ಷಗಳನ್ನು ಅಂಧತ್ವ ನಿಯಂತ್ರಣ (ಕ್ಯಾಟರ್‍ಯಾಕ್ ಶಸ್ತ್ರ ಚಿಕಿತ್ಸೆ)ಕ್ಕೆ, ₹ ೮೮ ಲಕ್ಷಗಳನ್ನು ಮಲೇರಿಯಾ ನಿಯಂತ್ರಣಕ್ಕೆ ವೆಚ್ಚ ಮಾಡಲಾಗಿತ್ತು. ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲು ₹ ೩೧೧.೫೭ ಲಕ್ಷಗಳನ್ನು ಖರ್ಚು ಮಾಡಲಾಯಿತು. ಹಳ್ಳಿ ಹೆದ್ದಾರಿ, ಗ್ರಾಮಾಂತರ ಸಂಪರ್ಕ ರಸ್ತೆಗಳಿಗೆ ಡಾಂಬರು ಹಾಕುವುದು, ಇತರೆ ರಸ್ತೆಗಳ ನಿರ್ಮಾಣ, ಹೊಸ ಸೇತುವೆಗಳು ಮತ್ತು ಅಡಿಗಾಲುವೆಗಳ ನಿರ್ಮಾಣ ಮೊದಲಾದವುಗಳಿಗಾಗಿ ₹ ೨೬.೪೪ ಲಕ್ಷಗಳನ್ನು ವೆಚ್ಚ ಮಾಡಲಾಯಿತು. ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ₹ ೭.೫೦ ಲಕ್ಷ ಗಳನ್ನು ವೆಚ್ಚ ಮಾಡಲಾಗಿತ್ತು.

ಮಲೆನಾಡು ಪ್ರದೇಶಾಭಿವೃದ್ಧಿ ಮತ್ತು ಗಡಿ ಪ್ರದೇಶಾಭಿವೃದ್ಧಿಗಾಗಿ ₹ ೫೩.೦೨ಲಕ್ಷಗಳನ್ನೂ, ಉದ್ಯೋಗ ಭರವಸೆ ಯೋಜನೆಗಾಗಿ ₹ ೬೩ ಲಕ್ಷಗಳನ್ನೂ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಗಾಗಿ ₹ ೧೨.೪೪ ಲಕ್ಷಗಳನ್ನೂ, ಕುಡಿಯುವ ನೀರು ವ್ಯವಸ್ಥೆಯ ಸಲುವಾಗಿ ಕೊಳವೆ ಬಾವಿ ಕೊರೆಯುವ ಹಾಗೂ ಕಿರು ನೀರು ಸರಬರಾಜು ಹಾಗೂ ಬೇಸಿಗೆ ಹಾಗೂ ಅನಾವೃಷ್ಟಿ ಕಾಲದಲ್ಲಿ ಗ್ರಾಮೀಣ ಜನತೆಗೆ ಉದ್ಯೋಗ ಕಲ್ಪಿಸಲು ₹ ೧೭೯.೩೦ ಲಕ್ಷಗಳನ್ನು ವೆಚ್ಚ ಮಾಡಲಾಯಿತು. ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು, ಮಹಿಳಾ ಕಲ್ಯಾಣ ಕೇಂದ್ರ, ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ, ಖಾಸಗಿ ವಿದ್ಯಾರ್ಥಿ ನಿಲಯಗಳು ಮತ್ತು ಅನಾಥಾಲಯಗಳಲ್ಲಿನ ವಿದ್ಯಾರ್ಥಿಗಳ ಊಟದ ವೆಚ್ಚಕ್ಕೆ ಅನುದಾನ ನೀಡಲಾಗುತ್ತಿದೆ. ವಿದ್ಯಾರ್ಥಿ ನಿಲಯಗಳಲ್ಲಿ ವಸತಾರ್ಥಿಗಳಾಗಿದ್ದು, ವಾರ್ಷಿಕ ಪಬ್ಲಿಕ್ ಪರೀಕ್ಷೆಗಳಲ್ಲಿ ಮೊದಲನೆಯ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನದ ಅಂಗವಾಗಿ ₹ ೦.೧೨೮ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ೬೪ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ. ಐದನೇಯ ತರಗತಿಯಿಂದ ೧೦ನೇ ತರಗತಿಯವರೆಗಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ₹ ೨.೮೩ ಲಕ್ಷ ವೆಚ್ಚ ಮಾಡಿದ್ದು, ೨,೯೦೯ ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ. ೧೦೮೫ ಅಂಗನವಾಡಿ ಕೇಂದ್ರಗಳ ಮೂಲಕ ಆರು ತಿಂಗಳಿಂದ ಆರು ವರ್ಷದೊಳಗಿನ ೬೦,೯೪ ಮಕ್ಕಳಿಗೆ, ೬,೧೨೩ ಗರ್ಭಿಣಿಯರಿಗೆ, ೬,೪೫೮ ಬಾಣಂತಿಯರಿಗೆ ಮತ್ತು ೨,೧೭೦ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಒಟ್ಟು ೨೫೨ ದಿನಗಳಿಗೆ ಪೌಷ್ಠಿಕ ಆಹಾರ ವಿತರಿಸಲಾಗಿದೆ. ಇದಕ್ಕಾಗಿ ಒಟ್ಟು ₹ ೧೯೫.೯೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಕೊಳ್ಳೇಗಾಲ ತಾಲೂಕಿನಲ್ಲಿ ಜೆ.ಎಸ್.ಎಸ್. ಸಂಸ್ಥೆ ಎರಡು ಶಿಶುಪಾಲನಾ ಕೇಂದ್ರಗಳನ್ನು ನಡೆಸುತ್ತಿದೆ. ಇದಕ್ಕಾಗಿ ₹ ೦.೫೧ ಲಕ್ಷಗಳನ್ನು ವೆಚ್ಚ ಮಾಡಿದ್ದು, ೫೦ ಮಕ್ಕಳು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ. ರಾಜ್ಯ ವಲಯದಡಿ ಸಮಗ್ರ ಸಾಂಬಾರು ಬೆಳೆ ಅಭಿವೃದ್ಧಿಗಾಗಿ ₹ ೨.೫೦ ಲಕ್ಷ ವೆಚ್ಚ ಮಾಡಲಾಗಿದ್ದು, ೧೦೦ ಫಲಾನುಭವಿಗಳಿಗೆ ಶುಂಠಿ ಪ್ರಾತ್ಯಕ್ಷತೆ ತಾಕುಗಳಿಗಾಗಿ ₹ ೦.೪೭ ಲಕ್ಷಗಳನ್ನು, ೧೯ ಫಲಾನುಭವಿಗಳಿಗೆ ವೆನಿಲ್ಲಾ ಬೆಳೆ ಪ್ರಾತ್ಯಕ್ಷತಾ ತಾಕುಗಳಿಗಾಗಿ ₹ ೧.೬೫ ಲಕ್ಷಗಳನ್ನು ಖರ್ಚು ಮಾಡಿ, ೧೦೦ ಫಲಾನುಭವಿಗಳಿಗೆ ಅರಿಶಿನ ಬೆಳೆ ಪ್ರಾತ್ಯಕ್ಷತೆ ಹಾಗೂ ತಾಕುಗಳ ನಿರ್ಮಾಣ ಮಾಡಲು ಸಹಾಯ ಮಾಡಲಾಯಿತು. ವಾಣಿಜ್ಯ ಪುಷ್ಪಾಭಿವೃದ್ಧಿಗಾಗಿ ₹ ೦.೯೫ ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ವಿವಿಧ ಹೂವಿನ ಬೆಳೆಗಳ ಬೇಸಾಯವನ್ನು ಪ್ರೋತ್ಸಾಹಿಸಲು ಬಿತ್ತನೆ ಸಾಮಗ್ರಿಗಳನ್ನು ರೈತರಿಗೆ ವಿತರಿಸಲಾಯಿತು. ಸುಗಂಧರಾಜ(ಸಿಂಗಲ್)ಬೆಳೆಯಲು ಒಬ್ಬ ಫಲಾನುಭವಿಯನ್ನು ಆಯ್ಕೆ ಮಾಡಿ ₹ ೦.೦೨೫ ಲಕ್ಷಗಳನ್ನೂ, ಸೇವಂತಿಗೆ ಬೆಳೆಯಲು ನಾಲ್ಕು ಫಲಾನುಭವಿಗಳನ್ನು ಆಯ್ಕೆ ಮಾಡಿ ₹ ೦.೨೦ಲಕ್ಷಗಳನ್ನೂ, ಮಲ್ಲಿಗೆ ಬೆಳೆಯಲು ಆರು ಫಲಾನುಭವಿಗಳನ್ನು ಆಯ್ಕೆ ಮಾಡಿ ₹ ೦.೧೮ಲಕ್ಷಗಳನ್ನೂ ಹಾಗೂ ಗುಲಾಬಿ ಬೆಳೆಯಲು ನಾಲ್ಕು ಫಲಾನುಭವಿಗಳನ್ನು ಆಯ್ಕೆ ಮಾಡಿ ₹ ೦.೨೦ ಲಕ್ಷಗಳನ್ನು ವೆಚ್ಚ ಮಾಡಲಾಯಿತು. ನಾಲ್ಕು ದೊಡ್ಡ ಪ್ರಮಾಣದ ವಿವಿದೊದ್ದೇಶ ಗಿರಿಜನರ ಸಹಕಾರ ಸಂಘಗಳಿದ್ದು, ಈ ಸಂಘಗಳ ಮೂಲಕ ₹ ೧೩೫ ಲಕ್ಷಗಳ ಮೌಲ್ಯದ ಕಿರು ಅರಣ್ಯ ಉತ್ಪನ್ನಗಳನ್ನು ಗಿರಿಜನರ ಮೂಲಕ ಅರಣ್ಯ ಪ್ರದೇಶದಲ್ಲಿ ಶೇಖರಣೆ ಮಾಡಿ, ಅವರುಗಳಿಗೆ ₹ ೧೩೫ ಲಕ್ಷಗಳನ್ನು ಕೂಲಿ ರೂಪದಲ್ಲಿ ವಿತರಿಸಲಾಗಿದೆ. ಈ ಯೋಜನೆಯ ಅಂತಿಮ ವರ್ಷದಲ್ಲಿ (೨೦೦೧–೦೨ರಲ್ಲಿ) ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ₹ ೨೨೩.೪೯ ಲಕ್ಷಗಳನ್ನು ವೆಚ್ಚ ಮಾಡಿ, ೨.೭೯ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಹಾಗೆಯೇ ಉದ್ಯೋಗ ಭರವಸೆ ಯೋಜನೆಯಲ್ಲಿ ₹ ೨೯.೫೯ಲಕ್ಷಗಳನ್ನು ಖರ್ಚು ಮಾಡಿ, ೩.೮೮ ಲಕ್ಷ ಮಾನವ ದಿನಗಳನ್ನು ಸೃಷ್ಟಿ ಮಾಡಲಾಯಿತು. ಇಂದಿರಾ ಆವಾಜ್ ಯೋಜನೆಯಲ್ಲಿ ₹ ೨೧.೯೮ ಲಕ್ಷಗಳನ್ನು ವೆಚ್ಚ ಮಾಡಿ, ೩೦೭ ಕಚ್ಚಾ ಮನೆಗಳನ್ನು ಪೂರ್ಣಗೊಳಿಸಲಾಗಿತ್ತು.

## ಕೋಷ್ಟಕ ೮.೩೯: ೯ನೇ ಪಂಚವಾರ್ಷಿಕ ಯೋಜನೆ (೧೯೯೭–೨೦೦೨)

| ಕ್ರ. ಸಂ | ಇಲಾಖೆ | ೧೯೯೭–೯೮ | | ೧೯೯೮–೯೯ | | ೧೯೯೯–೨೦೦೦ | | ೨೦೦೦–೦೧ | | ೨೦೦೧–೦೨ | |
|---|---|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೧. | ಸಾಮಾನ್ಯ ಶಿಕ್ಷಣ/ ಪ್ರಾಥಮಿಕ ಮತ್ತು ಸೆಕೆಂಡರಿ | ೪೭೨.೭೬ | ೫೩೩.೭೯ | ೨೪೦.೧೬ | ೨೦೬.೫೪ | ೪೦೬.೮೬ | ೪೧೨.೭೬ | ೫೫೦.೫೦ | ೫೬೨.೫೨ | ೬೭೦.೧೭ | ೬೦೧.೧೪ |
| ೨. | ವಯಸ್ಕರ ಶಿಕ್ಷಣ | ೫.೭೫ | ೧.೪೭ | ೨.೨೭ | – | ೨.೨೭ | – | ೫.೨೭ | ೨.೧೬ | ೫.೪೨ | ೧.೫೭ |
| ೩. | ಕ್ರೀಡೆ ಮತ್ತು ಯುವಜನ ಸೇವೆ | ೧೭.೦೦ | ೧೩.೮೩ | ೮.೧೫ | ೭.೦೬ | ೯.೧೫ | ೮.೪೨ | ೯.೧೫ | ೮.೪೯ | ೯.೧೫ | ೬.೫೧ |
| ೪. | ವೈದ್ಯಕೀಯ ಮತ್ತು ಜನಾರೋಗ್ಯ | ೨೬೮.೦೦ | ೧೬೯.೧೦ | ೬೮.೫೧ | ೩೪.೧೩ | ೫೫.೧೦ | ೪೮.೯೮ | ೮೫.೦೮ | ೫೯.೫೦ | ೮೫.೦೮ | ೫೮.೬೪ |
| ೫. | ಭಾರತೀಯ ವೈದ್ಯ ಪದ್ಧತಿ | ೧೬.೯೦ | ೦.೦೦ | ೨.೫೦ | ೨.೨೫ | ೫.೫೦ | ೫.೩೪ | ೭.೧೫ | ೬.೬೯ | ೭.೫೦ | ೬.೩೨ |
| ೬. | ಕುಟುಂಬ ಕಲ್ಯಾಣ ಕಾರ್ಯಕ್ರಮ | ೪೦೯.೦೫ | ೩೨೯.೬೯ | ೧೭೩.೩೫ | ೧೦೮.೭೯ | ೨೧೨.೭೨ | ೧೫೬.೫೪ | ೨೫೨.೪೧ | ೧೪೪.೫೫ | ೨೯೦.೭೨ | ೧೫೯.೪೪ |
| ೭. | ಗ್ರಾಮಾಂತರ ನೀರು ಪೂರೈಕೆ ಮತ್ತು ನೈರ್ಮಲ್ಯ | ೧೨೨೯.೫೪ | ೧೨೦೩.೯೯ | ೩೨೯.೨೮ | ೩೨೨.೮೧ | ೩೪೨.೨೮ | ೪೫೯.೩೯ | ೪೧೩.೦೦ | ೪೩೬.೨೨ | ೪೪೮.೫೦ | ೩೯೩.೦೯ |
| ೮. | ಸಮಾಜ ಕಲ್ಯಾಣ/ ಹರಿಜನ ಕಲ್ಯಾಣ | ೬೮೩.೬೩ | ೬೧೭.೫೪ | ೨೪೨.೦೦ | ೧೮೫.೫೪ | ೨೫೩.೮೫ | ೨೦೩.೨೬ | ೩೦೧.೯೪ | ೨೩೦.೬೩ | ೩೦೪.೧೪ | ೨೪೬.೪೯ |
| ೯. | ಹಿಂದುಳಿದ ವರ್ಗಗಳ / ಅಲ್ಪ ಸಂಖ್ಯಾತರ ಕಲ್ಯಾಣ | ೧೩೬.೫೭ | ೧೧೧.೯೩ | ೨೭.೮೭ | ೧೭.೧೩ | ೨೯.೩೦ | ೨೩.೬೧ | ೪೭.೯೮ | ೨೯.೪೮ | ೪೭.೯೮ | ೩೮.೦೭ |
| ೧೦. | ಹರಿಜನರಿಗಾಗಿ ವಿಶೇಷ ಘಟಕ ಯೋಜನೆ | ೩೮೫.೪೦ | ೨೬೭.೮೮ | ೧೩೧.೪೮ | ೭೭.೪೬ | ೧೩೩.೪೮ | ೯೮.೯೪ | ೧೪೯.೪೮ | ೧೦೧.೯೬ | ೧೨೮.೪೮ | ೬೭.೭೬ |
| ೧೧. | ಗಿರಿಜನ ಉಪ ಯೋಜನೆ | ೨೨೪.೮೨ | ೧೩೩.೮೧ | ೯೧.೪೪ | ೫೧.೦೬ | ೯೫.೬೯ | ೫೪.೨೫ | ೧೦೧.೬೯ | ೭೩.೬೯ | ೯೫.೬೯ | ೫೪.೦೮ |
| ೧೨. | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೫೦೮.೬೦ | ೪೮೩.೬೪ | ೨೧೧.೫೫ | ೧೮೪.೯೧ | ೨೭೫.೫೭ | ೧೯೪.೩೩ | ೩೧೩.೭೨ | ೨೫೦.೦೦ | ೩೪೭.೧೪ | ೨೩೩.೬೮ |
| ೧೩. | ಪೌಷ್ಠಿಕ ಆಹಾರ | ೨೫೦.೦೦ | ೨೨೯.೪೦ | ೬೯.೦೦ | ೬೦.೧೮ | ೭೫.೦೦ | ೬೭.೩೪ | ೭೬.೦೦ | ೭೨.೮೦ | ೧೦೩.೦೦ | ೮೭.೯೧ |
| ೧೪. | ವ್ಯವಸಾಯ | ೯೨.೩೪ | ೮೬.೧೯ | ೩೪.೯೩ | ೩೩.೨೧ | ೩೮.೫೫ | ೩೫.೫೪ | ೩೮.೫೫ | ೨೭.೨೨ | ೨೯.೬೧ | ೧೬.೫೯ |

*ಮುಂದುವರೆದಿದೆ*

**ಕೋಷ್ಟಕ ೮.೩೯ ಮುಂದುವರೆದಿದೆ**

| ಕ್ರ. ಸಂ | ಇಲಾಖೆ | ೧೯೯೭–೯೮ | | ೧೯೯೮–೯೯ | | ೧೯೯೯–೨೦೦೦ | | ೨೦೦೦–೦೧ | | ೨೦೦೧–೦೨ | |
|---|---|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೧೫ | ತೋಟಗಾರಿಕೆ | ೩೨.೫೦ | ೨೯.೧೨ | ೧೦.೧೯ | ೯.೩೦ | ೧೦.೩೬ | ೮.೧೩ | ೧೦.೩೬ | ೮.೪೭ | ೧೦.೩೬ | ೭.೦೫ |
| ೧೬ | ಪಶುಸಂಗೋಪನೆ | ೧೩೮.೦೦ | ೧೩೪.೪೯ | ೨೯.೭೪ | ೩೬.೧೯ | ೫೪.೦೦ | ೭೬.೪೪ | ೯೦.೦೦ | ೮೧.೬೯ | ೯೧.೫೦ | ೭೬.೧೮ |
| ೧೭. | ಮೀನುಗಾರಿಕೆ | ೩೦.೭೦ | ೧೬.೨೬ | ೩.೯೫ | ೨.೩೪ | ೪.೮೩ | ೩.೧೦ | ೪.೮೩ | ೩.೫೫ | ೦೬.೯೫ | ೨.೯೮ |
| ೧೮. | ಅರಣ್ಯ ಮತ್ತು ವನ ಜೀವನ | ೭೦.೦೦ | ೬೯.೮೧ | ೨೨.೦೦ | ೨೬.೫೩ | ೩೦.೦೦ | ೫೩.೧೦ | ೪೩.೯೮ | ೪೫.೦೯ | ೮೬.೧೮ | ೪೩.೯೪ |
| ೧೯. | ಸಹಕಾರ ಮತ್ತು ಇತರೆ | ೧೦.೪೦ | ೧೦.೩೦ | ೪.೪೨ | ೪.೪೦ | ೪.೪೨ | ೩.೧೦ | ೪.೪೨ | ೩.೨೭ | ೪.೪೨ | ೨.೬೨ |
| ೨೦. | ಕಾರ್ಮಿಕ ಉದ್ಯೋಗ / ಗ್ರಾಮೀಣ ಅಭಿವೃದ್ಧಿ / ಪಂಚಾಯತ್ ರಾಜ್ ಕಾರ್ಯಕ್ರಮಗಳು | ೧೧೭೬.೭೨ | ೧೦೫೫.೪೯ | ೧೨೦೦.೮೮ | ೧೨೩೭.೮೮ | ೧೨೭೩.೫೧ | ೮೨೭.೦೬ | ೧೩೭೬.೧೨ | ೮೫.೭೩ | ೧೩೭೭.೦೮ | ೧೦೭೭.೯೮ |
| ೨೧. | ಸಣ್ಣ ನೀರಾವರಿ | ೨೦.೦೦ | ೧೪.೨೮ | ೫.೫೭ | ೫.೨೦ | ೫.೫೮ | ೫.೨೯ | ೭.೫೦ | ೧೭.೦೮ | ೭.೫೦ | ೩.೧೭ |
| ೨೨. | ಗ್ರಾಮೋದ್ಯೋಗ ಮತ್ತು ಸಣ್ಣಪುಟ್ಟ ಉದ್ಯಮ | ೧೦.೦೦ | ೮.೧೮ | ೯.೭೧ | ೫.೪೦ | ೮.೪೫ | ೮.೨೯ | ೮.೪೫ | ೮.೩೦ | ೮.೬೩ | ೭.೩೯ |
| ೨೩. | ರೇಷ್ಮೆ ಉದ್ಯಮ | ೪೨.೦೦ | ೩೬.೩೪ | ೧೬.೮೦ | ೧೬.೫೩ | ೧೬.೮೦ | ೧೬.೬೫ | ೧೭.೫೦ | ೧೭.೦೮ | ೧೭.೫೦ | ೧೩.೮೦ |
| ೨೪. | ರಸ್ತೆ ಮತ್ತು ಸೇತುವೆಗಳು | ೧೩೦.೯೦ | ೧೧೯.೮೬ | ೪೩.೧೪ | ೩೮.೮೮ | ೪೪.೧೪ | ೪೩.೬೨ | ೪೪.೧೪ | ೩೬.೫೦ | ೪೪.೧೪ | ೨೬.೪೪ |
| ೨೫. | ಕೈಮಗ್ಗ ಮತ್ತು ಜವಳಿ | ೧೫.೦೧ | ೯.೯೯ | ೬.೮೮ | – | ೬.೮೪ | ೪.೬೫ | ೬.೮೪ | ೩.೮೪ | ೬.೮೦ | ೪.೫೭ |
| ೨೬. | ಇತರೆ | ೧೫.೦೦ | ೪.೦೧ | – | – | – | – | – | – | – | – |

# ಹತ್ತನೇ ಪಂಚವಾರ್ಷಿಕ ಯೋಜನೆ (೨೦೦೨–೨೦೦೭)

ಹತ್ತನೆಯ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷವಾದ ೨೦೦೨–೦೩ರಲ್ಲಿ ಒಟ್ಟು ₹೩೧೩೯.೨೬ ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ₹ ೨,೭೦೮.೮೮ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು. ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಆಯ್ದ ವಲಯವಾರು ಅನುದಾನ ಹಾಗೂ ವೆಚ್ಚವನ್ನು ಕೋಷ್ಟಕ ೮.೪೦ರಲ್ಲಿ ನೀಡಿದೆ.

**ಕೋಷ್ಟಕ ೮.೪೦: ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ (೨೦೦೨-೦೭) ಜಿಲ್ಲೆಯ ಅಭಿವೃದ್ಧಿಗಾಗಿ ಮಾಡಿದ ವೆಚ್ಚ ವಿವರ**

| ಕ್ರ. ಸಂ | ಇಲಾಖೆ | ೨೦೦೨-೦೩ | | ೨೦೦೩-೦೪ | | ೨೦೦೪-೦೫ | | ೨೦೦೬-೦೭ | |
|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೧ | ಸಾಮಾನ್ಯ ಶಿಕ್ಷಣ/ ಪ್ರಾಥಮಿಕ ಮತ್ತು ಸೆಕೆಂಡರಿ | ೫೦.೭೨ | ೫೦.೬೭ | ೫೦.೭೨ | ೪೮.೨೧ | ೪೫.೫೬ | ೪೬.೭೫ | ೧೬೨೪.೩೭ | ೧೨೯೫.೫೬ |
| ೨ | ವಯಸ್ಕರ ಶಿಕ್ಷಣ | ೫.೪೨ | ೧.೯೬ | ೫.೪೨ | ೧.೯೪ | ೫.೧೫ | ೫.೧೫ | ೧.೫೦ | ೧.೪೯ |
| ೩ | ಕ್ರೀಡೆ ಮತ್ತು ಯುವಜನ ಸೇವೆ | ೯.೮೪ | ೬.೪೪ | ೯.೮೪ | ೬.೧೮ | ೯.೮೪ | ೯.೦೦ | ೧೭.೦೦ | ೧೭.೦೦ |
| ೪ | ವೈದ್ಯಕೀಯ ಮತ್ತು ಜನಾರೋಗ್ಯ | ೪೧.೩೬ | ೨೭.೧೧ | ೪೧.೭೩ | ೩೭.೭೭ | ೫೬.೮೦ | ೪೫.೮೭ | ೧೯೭.೧೦ | ೧೧೭.೯೦ |
| ೫ | ಭಾರತೀಯ ವೈದ್ಯ ಪದ್ಧತಿ | ೧.೮೨ | ೧.೮೨ | ೧.೮೨ | ೨.೦೪ | ೧.೮೨ | ೧.೦೬ | ೬.೭೫ | ೫.೧೦ |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮ ಗಳು | ೩೧೩.೪೬ | ೧೫೩.೯೨ | ೨೭೧.೭೫ | ೧೮೧.೭೯ | ೨೮೭.೪೫ | ೨೦೪.೫೩ | ೪೦೦.೨೯ | ೨೮೯.೫೬ |
| ೭ | ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ | ೪೬೦.೪೫ | ೪೨೬.೨೮ | ೬೦೦.೪೫ | ೩೦೮.೮೫ | ೭೦೯.೪೫ | ೪೨೭.೭೬ | ೭೮೧.೩೯ | ೫೦೩.೧೧ |
| ೮ | ಸಮಾಜ ಕಲ್ಯಾಣ/ ಹರಿಜನ ಕಲ್ಯಾಣ | ೧೮೮.೫೮ | ೧೬೦.೦೪ | ೧೩೮.೯೦ | ೭೧.೦೧ | ೧೩೫.೫೧ | ೯೭.೧೦ | ೩೬೮.೮೪ | ೩೯೪.೯೦ |
| ೯ | ಹಿಂದುಳಿದ ವರ್ಗಗಳ /ಅಲ್ಪ ಸಂಖ್ಯಾತರ ಕಲ್ಯಾಣ | ೨೪.೬೦ | ೨೨.೭೮ | ೨೪.೬೦ | ೧೪.೮೧ | ೨೩.೫೨ | ೨೧.೨೭ | ೬೦.೮೯ | ೫೮.೧೨ |
| ೧೦ | ಪರಿಶಿಷ್ಟ ವರ್ಗಗಳ ಕಲ್ಯಾಣ | – | – | – | – | ೫೭.೧೭ | ೫೦.೯೦ | ೧೪೪.೫೦ | ೧೨೪.೪೮ |
| ೧೧ | ಹರಿಜನರಿಗಾಗಿ ವಿಶೇಷ ಘಟಕ ಯೋಜನೆ | ೧೦೧.೬೫ | ೬೪.೪೪ | ೧೪೮.೧೯ | ೪೮.೫೮ | ೧೦೧.೬೫ | ೬೫.೭೯ | ೬೬.೦೫ | ೬೫.೪೩ |
| ೧೨ | ಗಿರಿಜನ ಉಪ ಯೋಜನೆ | ೭೬.೬೫ | ೪೭.೪೯ | ೭೬.೬೫ | ೨೫.೩೧ | ೭೭.೨೫ | ೪೬.೮೫ | ೪೬.೮೫ | ೪೬.೦೦ |
| ೧೩. | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೩೩೯.೦೬ | ೨೯೨.೨೮ | ೩೫೯.೦೦ | ೩೧೨.೬೫ | ೪೮೧.೫೭ | ೩೪೭.೫೭ | ೬೪೧.೦೬ | ೪೭೮.೦೫ |
| ೧೪ | ಪೌಷ್ಠಿಕ ಆಹಾರ | ೮೩.೮೭ | ೬೫.೮೬ | ೮೩.೮೭ | ೮೩.೮೮ | ೮೩.೮೭ | ೮೩.೬೮ | ೧೮೭.೪೪ | ೧೩೯.೭೯ |
| ೧೫ | ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ | – | – | – | – | – | – | ೨.೦೦ | ೧.೯೦ |
| ೧೬. | ಕೃಷಿ (ವ್ಯವಸಾಯ) | ೪೭.೩೨ | ೩೯.೩೬ | ೫೨.೨೭ | ೩೬.೬೮ | ೩೬.೪೩ | ೩೦.೬೧ | ೧೬೮.೬೨ | ೧೬೬.೦೬ |
| ೧೭ | ಜಲಾನಯನ ಅಭಿವೃದ್ಧಿ | – | – | – | – | ೨೦.೮೬ | ೨೦.೭೭ | ೩೮.೬೩ | ೩೮.೯೩ |
| ೧೮ | ತೋಟಗಾರಿಕೆ | ೭.೭೭ | ೪.೭೦ | ೭.೭೭ | ೪.೬೯ | ೭.೭೭ | ೭.೨೪ | ೩೩.೮೧ | ೩೨.೩೭ |

*ಮುಂದುವರೆದಿದೆ*

## ಕೋಷ್ಟಕ ೮.೪೦ ಮುಂದುವರೆದಿದೆ

| ಕ್ರ. ಸಂ | ಇಲಾಖೆ | ೨೦೦೨-೦೩ | | ೨೦೦೩-೦೪ | | ೨೦೦೪-೦೫ | | ೨೦೦೬-೦೭ | |
|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| ೨೦ | ಮೀನುಗಾರಿಕೆ | ೬.೨೩ | ೨.೮೪ | ೬.೨೩ | ೧.೮೧ | ೫.೨೩ | ೨.೦೭ | ೬.೪೨ | ೧.೯೮ |
| ೨೧ | ಅರಣ್ಯ ಮತ್ತು ವನ ಜೀವನ | ೯೦.೩೮ | ೪೨.೪೩ | ೯೦.೩೮ | ೪೫.೨೮ | ೯೨.೯೨ | ೩೫.೦೦ | ೬೨.೩೯ | ೫೭.೩೧ |
| ೨೨ | ಸಹಕಾರ ಮತ್ತು ಇತರೆ | ೩.೦೦ | ೧.೬೧ | ೩.೦೦ | ೧.೫೯ | ೩.೦೦ | ೨.೪೧ | ೯.೪೦ | ೮.೫೨ |
| ೨೩ | ಕಾರ್ಮಿಕ ಉದ್ಯೋಗ/ ಗ್ರಾಮೀಣ ಅಭಿವೃದ್ಧಿ/ ಪಂಚಾಯತ್‌ರಾಜ್ ಕಾರ್ಯಕ್ರಮಗಳು | ೧೧೫೭.೪೮ | ೧೧೯೯.೧೮ | ೧೨೧೩.೬೦ | ೧೦೭೦.೪೩ | ೩೮೫.೮೪ | ೩೬೪.೬೮ | ೧೧೩೯.೯೪ | ೬೬೮.೧೪ |
| ೨೪ | ಗ್ರಾಮೀಣ ಇಂಧನ ಕಾರ್ಯಕ್ರಮ | – | – | – | – | ೮.೧೧ | ೧.೦೮ | ೪೩.೧೦ | ೨.೧೨ |
| ೨೫ | ಗ್ರಾಮೀಣ ಉದ್ಯೋಗ | – | – | – | – | ೭೩೨.೯೦ | ೯೦೧.೮೪ | ೯೮೭.೪೩ | ೯೩೪.೩೯ |
| ೨೬ | ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | – | – | – | – | ೬೩೭.೮೧ | ೨೦.೭೮ | – | – |
| ೨೭ | ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅನುದಾನಗಳು | – | – | – | – | – | – | ೧೬೫.೦೦ | ೧೩೫.೦೦ |
| ೨೮ | ಸಣ್ಣ ನೀರಾವರಿ | ೯.೩೨ | ೫.೭೪ | ೮.೯೫ | ೪.೧೦ | ೮.೯೫ | ೮.೯೨ | ೧.೮೯ | ೧.೮೯ |
| ೨೯ | ಗ್ರಾಮೋದ್ಯೋಗ ಮತ್ತು ಸಣ್ಣಪುಟ್ಟ ಉದ್ಯಮ | ೩.೮೭ | ೨.೩೫ | ೩.೮೭ | ೨.೧೪ | ೩.೮೭ | ೩.೮೭ | ೪.೭೫ | ೪.೭೫ |
| ೩೦ | ರೇಷ್ಮೆ ಉದ್ಯಮ | ೧೩.೦೮ | ೧೦.೦೬ | ೧೩.೬೮ | ೮.೩೬ | ೧೩.೬೮ | ೧೨.೯೨ | ೧೮.೭೩ | ೧೬.೪೯ |
| ೩೧ | ರಸ್ತೆ ಮತ್ತು ಸೇತುವೆಗಳು | ೪೪.೧೧ | ೨೨.೫೮ | ೪೪.೧೧ | ೨೨.೧೨ | ೩೭.೩೦ | ೧೫.೮೪ | ೧೯೫.೧೦ | ೧೯೫.೦೯ |
| ೩೨ | ಸಚಿವಾಲಯ ಆರ್ಥಿಕ ಸೇವೆಗಳು (ಜಿ.ಯೋ.ಫ) | – | – | – | – | ೨.೯೮ | ೨.೫೮ | – | – |
| ೩೩ | ಕೈಮಗ್ಗ ಮತ್ತು ಜವಳಿ | ೫.೩೧ | ೨.೪೩ | ೫.೩೧ | ೩.೨೧ | ೫.೩೧ | ೫.೨೮ | ೧೧.೯೦ | ೬.೩೫ |
| ೩೪. | ಕಲೆ, ಸಂಸ್ಕೃತಿ ಮತ್ತು ಗ್ರಂಥಾಲಯ | – | – | – | – | – | – | ೧೨.೬೭ | ೧೦.೫೮ |
| ೩೫. | ವಸತಿ | – | – | – | – | – | – | ೧೫೦.೦೦ | ೧೭೬.೬೫ |
| ೩೬ | ಉದ್ಯೋಗ ಮತ್ತು ತರಬೇತಿ | – | – | – | – | – | – | – | – |

*ಆಧಾರ: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಾಮರಾಜನಗರ.*

**ಭೌತಿಕ ಪ್ರಗತಿ:** ಈ ಯೋಜನೆಯ ಆರಂಭದಲ್ಲಿ ಜಿಲ್ಲೆಯ ಜಿಲ್ಲಾದಾಯ ₹ ೯೧,೧೧೦ ಲಕ್ಷಗಳಾಗಿದ್ದು, ರಾಜ್ಯದಲ್ಲಿ ೨೭ನೇಯ ಸ್ಥಾನದಲ್ಲಿತ್ತು. ಹಾಗೆಯೇ ತಲಾದಾಯ ₹ ೯,೨೫೨ ಗಳಿಸಿ, ೨೭ನೇ ಸ್ಥಾನ ಪಡೆದಿತ್ತು. ಈ ಯೋಜನಾವಧಿಯ ಮೊದಲ ವರ್ಷದಲ್ಲಿ (೨೦೦೨–೦೩) ಜಿಲ್ಲಾ ಕ್ರೀಡಾಂಗಣ ನಿರ್ಮಿಸಲಾಗುತ್ತಿದ್ದು, ಮೊದಲನೇ ಹಂತವಾಗಿ ಭೂಮಿ ಸಮತಟ್ಟು, ವಿವಿಧ ಅಂಕಣಗಳ ತಯಾರಿಕೆಗೆ ಕಾಮಗಾರಿ ಆರಂಭಗೊಂಡಿತ್ತು. ಕೊಳ್ಳೇಗಾಲ ತಾಲೂಕಿನ ಹನೂರಿನಲ್ಲಿ ಕ್ರೀಡಾಂಗಣ ನಿರ್ಮಾಣಗೊಳ್ಳುತ್ತಿದ್ದು, ಅದಕ್ಕಾಗಿ ₹ ४೧ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಗುಂಡ್ಲುಪೇಟೆ ತಾಲೂಕಿನಲ್ಲಿ ₹ ೫೦ ಲಕ್ಷಗಳ ಕ್ರೀಡಾಂಗಣ ಕಾಮಗಾರಿ ಆರಂಭಗೊಂಡಿದ್ದು, ₹ ೩೨ ಲಕ್ಷಗಳನ್ನು ಖರ್ಚು ಮಾಡಲಾಗಿತ್ತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ₹ ೧೯೫.೩೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ಆಯುರ್ವೇದ, ಯುನಾನಿ, ವೈದ್ಯಪದ್ಧತಿಯ ಅಭಿವೃದ್ಧಿಗಾಗಿ ₹ ೧.೮೨ ಲಕ್ಷಗಳ ಅನುದಾನ ನಿಗದಿಗೊಂಡಿದ್ದು, ₹ ೧.೮೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲು ₹ ४೧೮.೨೩ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹಳ್ಳಿ ಹೆದ್ದಾರಿ, ಗ್ರಾಮಾಂತರ ಸಂಪರ್ಕ, ರಸ್ತೆಗಳಿಗೆ ಡಾಂಬರ್ ಹಾಕುವುದು, ಇತರೆ ರಸ್ತೆಗಳ ನಿರ್ಮಾಣ, ಹೊಸ ಸೇತುವೆಗಳ ಹಾಗೂ ಅಡಿಗಾಲುವೆಗಳ ನಿರ್ಮಾಣಕ್ಕಾಗಿ ₹ ೨೨.೫೮ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಪ್ರಾಥಮಿಕ ಶಿಕ್ಷಣ ಯೋಜನೆಯಡಿ ವಿಶ್ವಬ್ಯಾಂಕ್ ನೆರವಿನೊಂದಿಗೆ ಗ್ರಾಮೀಣ ಮಕ್ಕಳಲ್ಲಿ ಕಲಿಕೆ ಬಗ್ಗೆ ಸ್ವಯಂ ಆಸಕ್ತಿ ಬರುವಂತೆ ಆಕರ್ಷಿಸಲು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಹೋಬಳಿ ಮಟ್ಟದಲ್ಲಿ ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು ಹಾಗೂ ತಾಲೂಕು ಕೇಂದ್ರಗಳಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರಗಳನ್ನು ಆಕರ್ಷಣೀಯವಾಗಿ ನಿರ್ಮಿಸಲು ಹಮ್ಮಿಕೊಳ್ಳಲಾಗಿದ್ದು, ಅದರಂತೆ ೧४ ಜೋಡಿ ಶಾಲಾ ಕೊಠಡಿಗಳು, ೩೮ ಆರ್.ಸಿ.ಸಿ. ಕಟ್ಟಡಗಳು, ನಾಲ್ಕು ಬಿ.ಆರ್.ಸಿ. ಕಟ್ಟಡಗಳನ್ನು ₹ ೨೩.೭೫ ಲಕ್ಷ ವೆಚ್ಚ ಮಾಡಿ ನಿರ್ಮಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಐದನೇ ತರಗತಿಯಿಂದ ೧೦ನೇ ತರಗತಿವರೆಗೆ ವಿದ್ಯಾಭ್ಯಾಸಕ್ಕಾಗಿ ದೂರದ ಊರುಗಳಿಂದ ಬರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಮಕ್ಕಳಿಗೆ ತಿಂಗಳಿಗೆ ₹ ४೦೦ಗಳನ್ನು ವೆಚ್ಚ ಮಾಡಿ ಎರಡು ಹೊತ್ತು ಊಟ, ಒಂದು ಹೊತ್ತು ತಿಂಡಿ ಮೊದಲಾದ ವ್ಯವಸ್ಥೆಗಳೊಂದಿಗೆ ವಸತಿ ವ್ಯವಸ್ಥೆ ಒದಗಿಸಲಾಗುತ್ತಿದೆ. ಇಲ್ಲಿ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ₹ ೧೦೦ಗಳ ವೆಚ್ಚದಲ್ಲಿ ಪಠ್ಯಪುಸ್ತಕ ಹಾಗೂ ಲೇಖನ ಸಾಮಗ್ರಿಗಳು, ₹ ೩೫೦ಗಳ ವೆಚ್ಚದಲ್ಲಿ ಎರಡು ಜೊತೆ ಬಟ್ಟೆಗಳು, ತಿಂಗಳಿಗೆ ₹ ४೦ಗಳ ವೆಚ್ಚದಲ್ಲಿ ಸಾಬೂನು, ಎಣ್ಣೆ, ಟೂತ್‌ಪೇಸ್ಟ್ ಮುಂತಾದವುಗಳನ್ನು ಒದಗಿಸಲು ₹ ೧೮೫.೫೬ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಜಿಲ್ಲೆಯಲ್ಲಿ ಒಂಭತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು, ಕಾಲೇಜು ಮಟ್ಟದ ವಿದ್ಯಾರ್ಥಿಗಳಿಗೆ ತಿಂಗಳಿಗೆ ₹ ४೫೦ಗಳನ್ನು ವೆಚ್ಚ ಮಾಡಿ ಊಟದ ವ್ಯವಸ್ಥೆ ಹಾಗೂ ವಸತಿ ಸೌಕರ್ಯ ಕಲ್ಪಿಸಲಾಯಿತು. ಇದಕ್ಕಾಗಿ ₹ ೩೫.೯೫ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು. ಎರಡು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು, ೧೮೮ ವಿದ್ಯಾರ್ಥಿಗಳಿದ್ದಾರೆ, ಇದಕ್ಕಾಗಿ ₹ ೨೧.೯೩ ಲಕ್ಷಗಳನ್ನು ಖರ್ಚು ಮಾಡಲಾಗಿತ್ತು.

ಜಿಲ್ಲೆಯಲ್ಲಿ ಕಬ್ಬು ಅಭಿವೃದ್ಧಿ ಯೋಜನೆಗಾಗಿ ₹ ೦.೦೮೧ ಲಕ್ಷಗಳು, ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆಗಾಗಿ ₹ ೭.೨೯ ಲಕ್ಷಗಳು ಹಾಗೂ ಎಣ್ಣೆಕಾಳು ಉತ್ಪಾದನೆಗಾಗಿ ₹ ೭.೫೦ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ ಹಾಗೂ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ ಗುಂಡ್ಲುಪೇಟೆ ತಾಲೂಕಿನಲ್ಲಿ ಮಾತ್ರ ಅನುಷ್ಠಾನದಲ್ಲಿತ್ತು. ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ೧೫ ಜಲಾನಯನ ಪ್ರದೇಶಗಳನ್ನು ಆಯ್ಕೆ ಮಾಡಲಾಗಿತ್ತು. ಇದಕ್ಕಾಗಿ ₹ ೫೩.೬೩ ಲಕ್ಷಗಳನ್ನು ವೆಚ್ಚ ಮಾಡಿ ೭೦೩

ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿ ಎಂಟು ಜಲಾನಯನ ಪ್ರದೇಶವನ್ನು ಆಯ್ಕೆ ಮಾಡಿ, ₹ ೨೭.೨೨ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ೪೬೩ ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ.

ಈ ಯೋಜನೆಯ ನಾಲ್ಕನೇ ವರ್ಷದಲ್ಲಿ (೨೦೦೫–೦೬ರಲ್ಲಿ)ಬೇಸಿಗೆ ಹಾಗೂ ಅನಾವೃಷ್ಟಿ ಕಾಲದಲ್ಲಿ ಗ್ರಾಮೀಣ ಜನತೆಗೆ ಉದ್ಯೋಗ ಕಲ್ಪಿಸಲು ಮತ್ತು ಕುಡಿಯುವ ನೀರನ್ನು ಒದಗಿಸಲು ₹ ೫೬೭.೩೫೪ ಲಕ್ಷ ಗಳನ್ನು ವೆಚ್ಚ ಮಾಡಿ ೭೬೧ ಕಾಮಗಾರಿಗಳು ಪೂರ್ಣಗೊಂಡಿದ್ದವು. ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯಂತೆ ಹಳ್ಳಿ ರಸ್ತೆಗಳಿಗೆ ಡಾಂಬರು ಹಾಕಲು ಮೊದಲನೆ ಹಂತ (೨೦೦೦–೦೧)ದಲ್ಲಿ ನಾಲ್ಕು ವಿವಿಧ ರಸ್ತೆಗಳ ಒಟ್ಟು ೨೦.೮೯ ಕಿ.ಮೀ. ರಸ್ತೆಯನ್ನು ₹ ೧೪೫.೯೭ ಲಕ್ಷಗಳು ವೆಚ್ಚ ಮಾಡಿ ಡಾಂಬರು ಹಾಕಲಾಗಿದೆ. ಎರಡನೇ ಹಂತದಲ್ಲಿ ೨೦೦೧–೦೨ರಲ್ಲಿ ₹ ೨೦೧.೫೪ ಲಕ್ಷಗಳ ವೆಚ್ಚ ಮಾಡಿ ೧೫.೪೨ ಕಿ.ಮೀ. ಉದ್ದದ ಡಾಂಬರ್ ಹಾಗೂ ಒಂದು ದೊಡ್ಡ ಸೇತುವೆ ನಿರ್ಮಾಣ ಮಾಡಲಾಗಿದೆ. ಮೂರನೇ ಹಂತದಲ್ಲಿ ₹ ೩೪೧.೯೧ ಲಕ್ಷಗಳಲ್ಲಿ ೨೮.೫೦ ಕಿ.ಮೀ. ಉದ್ದದ ರಸ್ತೆಗೆ ಡಾಂಬರ್, ೯೦ ಅಡ್ಡಮೋರಿಗಳನ್ನು ನಿರ್ಮಿಸಲಾಗಿದೆ. ನಬಾರ್ಡ್ ಆರ್ಥಿಕ ಸಹಾಯದಿಂದ ಹಳ್ಳಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಬಾರ್ಡ್ ಎಂಟನೇ ಹಂತದಲ್ಲಿ ₹ ೧೭೪.೧೧ ಲಕ್ಷಗಳಲ್ಲಿ ೧೯.೭೭ ಕಿ.ಮೀ. ಉದ್ದದ ರಸ್ತೆಗೆ ಡಾಂಬರ್ ಹಾಕಿಸಲಾಗಿತ್ತು. ಒಂಭತ್ತನೇ ಹಂತದಲ್ಲಿ ₹ ೬೮.೨೦೪ ಲಕ್ಷಗಳ ಮೊತ್ತದಲ್ಲಿ ೧೧.೯೨೮ ಕಿ.ಮೀ. ಉದ್ದದ ರಸ್ತೆಗೆ ಡಾಂಬರ್ ಹಾಕಿಸಲಾಗಿದೆ.

ಪರಿಶಿಷ್ಟ ಜಾತಿಯ ಸರ್ವತೋಮುಖ ಕಲ್ಯಾಣಕ್ಕಾಗಿ ಹಮ್ಮಿಕೊಂಡ ಹಲವು ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿನಿಲಯಗಳು, ಕಾಲೇಜ್ ವಿದ್ಯಾರ್ಥಿಗಳಿಗೆ ಪುರಸ್ಕಾರದ ಹಣ, ವಿದ್ಯಾರ್ಥಿ ವೇತನ, ಅಧ್ಯಾಯನ ಪ್ರವಾಸ ವೆಚ್ಚ, ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಶಿಷ್ಯ ವೇತನ, ಬುಕ್ ಬ್ಯಾಂಕ್ ಸ್ಥಾಪನೆ ಮೊದಲಾದವು ಸೇರಿದ್ದವು. ಪರಿಶಿಷ್ಟ ಜಾತಿಯ ನಿರುದ್ಯೋಗ ಯುವಕ/ಯುವತಿಯವರಿಗಾಗಿ 'ನವಚೇತನ' ಯೋಜನೆ ಆರಂಭಿಸಿ, ಇದರಂತೆ ಕೆ.ಎಸ್.ಆರ್.ಟಿ.ಸಿ. ವತಿಯಿಂದ ಭಾರೀವಾಹನ ಚಾಲನಾ ತರಬೇತಿ ನೀಡುವ ಕಾರ್ಯಕ್ರಮದಲ್ಲಿ ೫೪ ಮಂದಿಗೆ ತರಬೇತಿ ನೀಡಿ, ಇದಕ್ಕಾಗಿ ₹ ಮೂರು ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ವರ್ಗದ ಯುವಕ/ಯುವತಿಯರಿಗೆ ೧೭ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಿ, ಇದಕ್ಕಾಗಿ ₹ ೬೦,೦೦೦ಗಳನ್ನು ವೆಚ್ಚ ಮಾಡಲಾಗಿದೆ. ಐದು ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳಿದ್ದು, ಮಕ್ಕಳ ಊಟ ವಸತಿಗಾಗಿ ₹ ೧೭.೦೪ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು.

ಸಸ್ಯ ಸಂರಕ್ಷಣೆಗಾಗಿ ₹ ೩.೪೦ಲಕ್ಷಗಳನ್ನೂ, ಕೃಷಿಮೇಳ ಮತ್ತು ಕೃಷಿ ವಸ್ತು ಪ್ರದರ್ಶನ ₹ ೦.೪೧ಲಕ್ಷಗಳನ್ನೂ, ವೇಗವರ್ಧಕ ಮುಸುಕಿನ ಜೋಳ ಯೋಜನೆಗಾಗಿ ₹ ೪.೯೨ ಲಕ್ಷಗಳನ್ನೂ, ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿಗಾಗಿ ₹ ೯.೦೩ ಲಕ್ಷಗಳನ್ನೂ, ಎಣ್ಣೆಕಾಳು ಉತ್ಪಾದನೆಗಾಗಿ ₹ ೧೪.೬೫ ಲಕ್ಷ ಗಳನ್ನೂ, ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿಗಾಗಿ ₹ ೭.೫೯ ಲಕ್ಷಗಳನ್ನೂ, ಹನಿ ನೀರಾವರಿಗಾಗಿ ₹ ೪.೪೮ ಲಕ್ಷಗಳನ್ನೂ, ಸಾವಯವ ಗೊಬ್ಬರಕ್ಕಾಗಿ ₹ ೪.೩೩ಲಕ್ಷಗಳನ್ನೂ ವೆಚ್ಚ ಮಾಡಿ ಆಹಾರ ಪದಾರ್ಥಗಳ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗಿದ್ದು, ೮೭,೫೪೪ ಹೆ. ಪ್ರದೇಶದಲ್ಲಿ ಏಕದಳ ಧಾನ್ಯ ಹಾಗೂ ಉಪತೃಣ ಧಾನ್ಯಗಳನ್ನು, ೨೬,೮೯೬ ಹೆ. ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನೂ, ೩೩,೭೪೧ ಹೆ. ಪ್ರದೇಶದಲ್ಲಿ ಎಣ್ಣೆ ಕಾಳುಗಳನ್ನು ಹಾಗೂ ೧೨೧೬೮ ಹೆ. ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗಿತ್ತು. ಹೀಗೆ ಜಿಲ್ಲೆಯ ಅಭಿವೃದ್ಧಿಗೆ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

# ೧೧ನೇ ಪಂಚವಾರ್ಷಿಕ ಯೋಜನೆ (೨೦೦೭-೨೦೧೨)

ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷವಾದ ೨೦೦೭-೦೮ ರಲ್ಲಿ ₹ ೭೨೪೨.೦೭ ಲಕ್ಷಗಳ ವಲಯವಾರು ಸಂಚಿತ ಗುರಿ ಹೊಂದಲಾಗಿದ್ದು, ₹ ೬೩೫೭.೧೦ ಲಕ್ಷಗಳನ್ನು ವೆಚ್ಚಮಾಡಿ ಗುರಿ ಸಾಧಿಸಲಾಗಿದೆ. ಹಾಗೆಯೇ ಈ ಯೋಜನೆಯ ಮೊದಲ ಮೂರು ವರ್ಷಗಳಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಆಯ್ದ ವಲಯವಾರು ಅನುದಾನ ಹಾಗೂ ವೆಚ್ಚದ ವಿವರಗಳನ್ನು ಕೋಷ್ಟಕ ೮.೪೧ರಲ್ಲಿ ನೀಡಿದೆ.

**ಕೋಷ್ಟಕ ೮.೪೧: ಹನ್ನೊಂದನೇಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಮಾಡಿದ ವೆಚ್ಚದ ವಿವರ**

(₹ ಲಕ್ಷಗಳಲ್ಲಿ)

| ಕ್ರ. ಸಂ | ಇಲಾಖೆ | ೨೦೦೭-೦೮ | | ೨೦೦೯-೧೦ | |
|---|---|---|---|---|---|
| | | ಗುರಿ | ಸಾಧನೆ | ಗುರಿ | ಸಾಧನೆ |
| ೧ | ಪ್ರಾಥಮಿಕ ಮತ್ತು ಸೆಕೆಂಡರಿ / ಸಾಮಾನ್ಯ ಶಿಕ್ಷಣ | ೧೨೦೫.೦೦ | ೧೧೯೫.೯೨ | ೨೭೭೬.೦೮ | ೧೨೦೫.೦೦ |
| ೨ | ವಯಸ್ಕರ ಶಿಕ್ಷಣ | ೮.೨೫ | ೮.೧೪ | ೧೬.೦೦ | ೮.೨೫ |
| ೩ | ಕ್ರೀಡೆ ಮತ್ತು ಯುವಜನ ಸೇವೆಗಳು | ೨೬.೦೦ | ೨೬.೦೦ | ೩೪.೯೮ | ೨೬.೦೦ |
| ೪ | ವೈದ್ಯಕೀಯ ಮತ್ತು ಜನಾರೋಗ್ಯ ಸೇವೆಗಳು, ಗ್ರಾಮೀಣ ಆರೋಗ್ಯ | ೧೭೬.೫೩ | ೧೨೫.೩೨ | ೧೮೯.೫೫ | ೧೭೬.೫೩ |
| ೫ | ಭಾರತೀಯ ವೈದ್ಯಕೀಯ ಪದ್ಧತಿ | ೦.೦೦ | ೦.೦೦ | ೦.೦೦ | ೦.೦೦ |
| ೬ | ಕುಟುಂಬ ಕಲ್ಯಾಣ ಕಾರ್ಯಕ್ರಮಗಳು | ೩೯೯.೬೦ | ೩೬೦.೧೧ | ೫೭೨.೬೨ | ೩೯೯.೬೦ |
| ೭ | ಗ್ರಾಮೀಣ ನೀರು ಪೂರೈಕೆ | ೩೨೦.೦೦ | ೩೨೦.೦೦ | ೮೯.೦೫ | ೩೨೦.೦೦ |
| ೮ | ಸಮಾಜ ಕಲ್ಯಾಣ | ೪೭೭.೭೫ | ೪೨೬.೧೪ | ೬೪೭.೫೫ | ೪೭೭.೭೫ |
| ೯ | ಪರಿಶಿಷ್ಟ ವರ್ಗಗಳ ಕಲ್ಯಾಣ | ೨೩೬.೫೩ | ೧೫೫ | ೩೦೦.೯೯ | ೨೩೬.೫೩ |
| ೧೦ | ವಿಶೇಷ ಘಟಕ ಯೋಜನೆ | ೮೫.೦೦ | ೭೦.೮೫ | ೮೬.೧೪ | ೮೫.೦೦ |
| ೧೧ | ಹಿಂದುಳಿದ ವರ್ಗಗಳ ಕಲ್ಯಾಣ | ೧೦೮.೬೩ | ೧೦೩.೫೦ | ೧೧೦.೭೫ | ೧೦೮.೬೩ |
| ೧೨ | ಅಲ್ಪ ಸಂಖ್ಯಾತರ ಕಲ್ಯಾಣ | ೨೧.೦೫ | ೧೭.೯೭ | ೩೫.೩೩ | ೨೧.೦೫ |
| ೧೩ | ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ | ೬೭೬.೨೫ | ೬೦೧.೮೯ | ೧೦೦೨.೯೫ | ೬೭೬.೨೫ |
| ೧೪ | ಪೌಷ್ಠಿಕ ಆಹಾರ | ೧೮೭.೦೦ | ೨೪೬.೦೫ | ೩೫೭.೦೦ | ೧೮೭.೦೦ |
| ೧೫ | ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ | ೧.೯೬ | ೧.೮೬ | ೧.೯೯ | ೧.೯೬ |
| ೧೬ | ವ್ಯವಸಾಯ | ೧೯೨.೪೧ | ೧೩೧.೪೪ | ೧೭೭.೬೦ | ೧೯೨.೪೧ |
| ೧೭ | ತೋಟಗಾರಿಕೆ | ೯೮.೮೨ | ೯೮.೫೨ | ೬೧.೫೫ | ೯೮.೮೨ |
| ೧೮ | ಪಶು ಸಂಗೋಪನೆ | ೧೨೯.೫೦ | ೧೨೭.೫೬ | ೨೩೫.೦೦ | ೧೨೯.೫೦ |
| ೧೯ | ಮೀನುಗಾರಿಕೆ | ೧೨.೮೧ | ೮.೭೨ | ೮.೮೨ | ೧೨.೮೧ |
| ೨೦ | ಅರಣ್ಯ ಇಲಾಖೆ | ೪.೩೯ | ೪.೩೯ | ೧೧.೦೦ | ೪.೩೯ |
| ೨೧ | ಸಹಕಾರ | ೧೦.೬೯ | ೯.೭೪ | ೧೩.೮೧ | ೧೦.೬೯ |
| ೨೨ | ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು | ೩೫೬.೩೨ | ೪೩೨.೭೮ | ೬೨೫.೨೮ | ೩೫೬.೩೨ |
| ೨೩ | ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು | ೧೦೨೧.೪೫ | ೯೮೪.೩೦ | – | – |
| ೨೪ | ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನಗಳು | ೩೪೦.೦೮ | ೩೪೦.೦೮ | ೫೪೦.೭೫ | ೧೦೨೧.೪೫ |
| ೨೫ | ಸಣ್ಣ ನೀರಾವರಿ | ೦.೦೦ | ೦.೦೦ | ೧.೧೫ | ೩೪೦.೦೮ |

| | | | | | |
|---|---|---|---|---|---|
| ೨೬ | ಗ್ರಾಮೋದ್ಯಮ ಮತ್ತುಸಣ್ಣ ಉದ್ಯಮಗಳು | ೬.೯೦ | ೬.೯೦ | ೧೨.೦೨ | ೦.೦೦ |
| ೨೭ | ರೇಷ್ಮೆ | ೧೮.೬೩ | ೧೮.೩೭ | ೨೧.೦೦ | ೬.೯೦ |
| ೨೮ | ರಸ್ತೆ ಮತ್ತು ಸೇತುವೆಗಳು | ೨೨೫.೦೦ | ೨೨೫.೦೦ | ೩೪.೧೩ | ೧೮.೬೩ |
| ೨೯ | ಸಚಿವಾಲಯ ಆರ್ಥಿಕ ಸೇವೆಗಳು ಜಿಲ್ಲಾ ಯೋಜನೆ ಘಟಕ | ೭.೧೭ | ೭.೧೭ | ೦.೬೧ | ೨೨೫.೦೦ |
| ೩೦ | ಗಿರಿಜನ ಉಪಯೋಜನೆ | ೬೭.೪೧ | ೬೩.೦೯ | ೫೯.೫೯ | ೭.೧೭ |
| ೩೧ | ಕೈಮಗ್ಗ ಮತ್ತು ಜವಳಿ | ೭.೮೦ | ೭.೫೦ | ೭.೩೦ | ೬೭.೪೧ |
| ೩೨ | ಕಲೆ, ಸಂಸ್ಕೃತಿ ಮತ್ತು ಗ್ರಂಥಾಲಯ | ೧೭.೭೭ | ೧೬.೫೯ | ೨೭.೨೨ | ೭.೮೦ |
| ೩೩ | ವಸತಿ | ೧೫೫.೩೭ | ೧೫೫.೩೭ | ೦.೦೦ | ೧೭.೭೭ |
| ೩೪ | ಜಲಾನಯನ ಅಭಿವೃದ್ಧಿ | ೬೪೦.೦೦ | ೬೧.೪೩ | ೫೦೦.೦೫ | ೧೫೫.೩೭ |
| ೩೫ | ಉದ್ಯೋಗ ಮತ್ತು ತರಬೇತಿ | ೦.೦೦ | ೦.೦೦ | ೦.೦೦ | ೬೪೦.೦೦ |
| ೩೬ | ವಿಜ್ಞಾನ ಮತ್ತು ತಂತ್ರಜ್ಞಾನ | | | ೧.೮೧ | ೦.೦೦ |
| | **ಒಟ್ಟು ಮೊತ್ತ** | **೭೨೪೨.೦೭** | **೬೩೫೭.೭೦** | – | **೭೨೪೨.೦೭** |

## ಬಡತನ ನಿವಾರಣೆ

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಇದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾ ನಿರ್ದೇಶಕರಾಗಿದ್ದ ಲಾರ್ಡ್ ಬಾಯಿಡಾರ್ ಅವರು ೧೯೪೫ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸುತ್ತಾ, 'ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨೩೦೦ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಣಿಸಬೇಕಾಗುತ್ತದೆ' ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ೨,೪೦೦ ಕ್ಯಾಲರಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ೨,೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಸೇವಿಸುತ್ತಿರುವವರನ್ನು ಬಡತನ ರೇಖೆಗಿಂತಲೂ ಕೆಳಗಿರುವವರೆಂದು ಪರಿಗಣಿಸಲಾಗುತ್ತದೆ.

ಮಿತಿ ಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಆದಾಯ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಠ ಅನುಭೋಗ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ, ರಾಜಕೀಯ ಅಂಶಗಳು ಬಡತನಕ್ಕೆ ಕಾರಣಗಳಾಗಿವೆ. ಹಾಗಾಗಿ ಐದನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ. ಅಲ್ಲದೆ ವ್ಯಾಪಕವಾಗಿಯೂ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ ಕಾರ್ಯಕ್ರಮಗಳಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ನವಗ್ರಾಮ ಯೋಜನೆ, ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ, ಜವಾಹರ್ ಗ್ರಾಮ ಸಮೃದ್ಧಿ ಯೋಜನೆ, ಉದ್ಯೋಗ ಭರವಸೆ ಯೋಜನೆ, ನಿರ್ಮಲ

ಗ್ರಾಮ ಯೋಜನೆ, ಸ್ವಚ್ಛಗ್ರಾಮ ಯೋಜನೆ, ರಾಷ್ಟ್ರೀಯ ಸುಧಾರಿತ ಒಲೆ ಕಾರ್ಯಕ್ರಮ, ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ, ಸುವರ್ಣ ಗ್ರಾಮ ಯೋಜನೆ, ಯಶಸ್ವಿನಿ, ಅಕ್ಷರದಾಸೋಹ ಮತ್ತಿತರ ಯೋಜನೆಗಳನ್ನು ಜಾರಿಗೆ ತರಲಾಯಿತು. ಚಾಮರಾಜನಗರ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯು ಜಾರಿಗೆ ತಂದಿರುವ ಪ್ರದೇಶಾಭಿವೃದ್ಧಿ ಯೋಜನೆಯ (ಎ.ಡಿ.ಪಿ.) ಕಾರ್ಯಕ್ರಮಗಳ ಸಂಕ್ಷಿಪ್ತ ವಿವರವನ್ನು ಮುಂದೆ ನೀಡಲಾಗಿದೆ.

## ಅ) ಜವಾಹರ್ ಗ್ರಾಮ ಸಮೃದ್ಧಿ ಯೋಜನೆ (ಜೆ.ಜಿ.ಎಸ್.ವೈ)

ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯು ೧೯೯೯ರ ಏಪ್ರಿಲ್‌ನಿಂದ ಜಾರಿಗೆ ಬಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕೂಲಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯ ಮತ್ತು ಆಸ್ತಿಗಳನ್ನು ನಿರ್ಮಾಣ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶಗಳಾಗಿವೆ.

ಈ ಯೋಜನೆಯನ್ನು ಸಂಪೂರ್ಣವಾಗಿ ಗ್ರಾಮಪಂಚಾಯ್ತಿ ಮಟ್ಟದಲ್ಲಿ ಜಾರಿಗೊಳಿಸಲಾಗಿದೆ. ಗ್ರಾಮೀಣ ಜನತೆಗೆ ಅವಶ್ಯಕವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳು, ಹರಿಜನ–ಗಿರಿಜನರಿಗೆ ಮನೆಗಳ ನಿರ್ಮಾಣ, ರಸ್ತೆ ಸಂಪರ್ಕ, ಸೇತುವೆ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಯಲ್ಲಿ ೨೦೦೦–೦೧ರಲ್ಲಿ ₹ ೨೧೮.೭೮ ಲಕ್ಷಗಳನ್ನು ವೆಚ್ಚ ಮಾಡಿ, ೩.೧೫ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಹಾಗೆಯೇ ೨೦೦೧–೦೨ರಲ್ಲಿ ₹ ೨೨೩.೪೯ ಲಕ್ಷ ಗಳನ್ನು ವೆಚ್ಚ ಮಾಡಿ, ೨.೭೯ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು.

## ಆ) ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್)

ಕೃಷಿ ಕೆಲಸಗಳು ಕಡಿಮೆ ಇರುವ ಕಾಲದಲ್ಲಿ ಉದ್ಯೋಗ ಒದಗಿಸುವ, ಸಮುದಾಯ ಆಸ್ತಿಗಳನ್ನು ಸೃಜಿಸುವ ಮುಖ್ಯ ಉದ್ದೇಶಗಳೊಂದಿಗೆ ೧೯೯೩ರಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯಂತೆ ಕನಿಷ್ಠ ೧೮ ವರ್ಷಕ್ಕೆ ಮೇಲ್ಪಟ್ಟು ೬೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಸ್ತ್ರೀ–ಪುರುಷರಿಗೆ ೧೦೦ ಮಾನವ ದಿನಗಳ ಕೆಲಸವನ್ನು ಕನಿಷ್ಟ ವೇತನಕ್ಕೆ ಅನುಗುಣವಾಗಿ ನೀಡಲಾಗುವುದು. ಈ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ೭೫:೨೫ರ ಅನುಪಾತದಲ್ಲಿ ಭರಿಸುತ್ತವೆ. ಜಿಲ್ಲಾ ಹಾಗೂ ತಾಲೂಕುಮಟ್ಟದಲ್ಲಿ ಕ್ರಮವಾಗಿ ಶೇಕಡಾ ೩೦ ಮತ್ತು ಶೇಕಡಾ ೭೦ರಂತೆ ಅನುದಾನ ಹಂಚಿಕೆ ಮಾಡಲಾಗಿದೆ. ಈ ಯೋಜನೆಯಂತೆ ೨೦೦೦–೦೧ರಲ್ಲಿ ₹ ೩೨೬.೨೬ ಲಕ್ಷಗಳನ್ನು ವೆಚ್ಚ ಮಾಡಿ, ೪.೨೪ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು.

## ಇ) ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (ಎಸ್.ಜಿ.ಆರ್.ವೈ)

ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿ ೨೫ನೇ ಸೆಪ್ಟೆಂಬರ್ ೨೦೦೧ರಂದು ಜಾರಿಗೆ ಬಂದಿದೆ. ಎಲ್ಲಾ ಉದ್ಯೋಗ ಸೃಷ್ಟಿಸುವ ಯೋಜನೆಗಳು ಎಸ್.ಜಿ.ಆರ್.ವೈ ಯೋಜನೆಯ ಭಾಗವಾಗಿ ಮುಂದುವರೆದು ಎಲ್ಲಾ ಹಂತಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆ (ಪಿ.ಆರ್.ಐ)ಗಳ ಮೂಲಕ

ಅನುಷ್ಠಾನಗೊಳ್ಳುತ್ತವೆ. ಗ್ರಾಮ ಸಮುದಾಯದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಮೂಲ ರಚನಾ ಸೌಕರ್ಯಗಳನ್ನು ಸ್ಥಾಪಿಸುತ್ತಾ ಗ್ರಾಮೀಣ ಪ್ರದೇಶಗಳಲ್ಲಿ ವೇತನ ಸಿಗುವ ಉದ್ಯೋಗಾವಕಾಶಗಳನ್ನು ಹಾಗೂ ಆಹಾರ ಭದ್ರತೆಯನ್ನು ಸ್ಥಾಪಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಈ ಯೋಜನೆಯಡಿ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಹಾಗೂ ಅಪಾಯಕಾರಿ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಅಂತಹ ಕೆಲಸಗಳಿಂದ ಹಿಂತೆಗೆಸಿಕೊಂಡ ತಂದೆ–ತಾಯಿಯರಿಗೆ ವೇತನ ಸಿಗುವ ಉದ್ಯೋಗಾವಕಾಶ ಒದಗಿಸುವಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನ ನೀಡುತ್ತವೆ. ಈ ಯೋಜನೆಗೆ ಸರ್ಕಾರದಿಂದ ನಗದು ಅನುದಾನ ಮತ್ತು ಆಹಾರ ಧಾನ್ಯ ಬಿಡುಗಡೆಯಾಗಿದ್ದು, ಕೂಲಿಕಾರರಿಗೆ ಆಹಾರ ಧಾನ್ಯ ಮತ್ತು ನಗದು ಮೊತ್ತದೊಂದಿಗೆ ಸರ್ಕಾರದ ಅನುಮೋದಿತ ಕೂಲಿ ದರದಲ್ಲಿ ಕೂಲಿ ಮೊತ್ತವನ್ನು ಪಾವತಿಸಲಾಗುತ್ತದೆ. ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಕಾರ್ಯಕ್ರಮದಲ್ಲಿ ಶೇ. ೨೨.೫ ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವೈಯಕ್ತಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೂ, ಉಳಿದ ಶೇ. ೭೭.೫೦ರಷ್ಟನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗುತ್ತದೆ. ಈ ಯೋಜನೆಯ ಒಂದನೇ ವಾಹಿನಿಯಲ್ಲಿ ೨೦೦೪ರ ಮಾರ್ಚ್ ಅಂತ್ಯಕ್ಕೆ ₹ ೪೫೧.೧೨ ಲಕ್ಷಗಳನ್ನು ಹಾಗೂ ೨,೯೪೩ ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ನಿಗದಿತ ಕೂಲಿ ದರದಲ್ಲಿ ನೀಡಿ, ೮.೨೪ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿತ್ತು. ೨ನೇ ವಾಹಿನಿಯಲ್ಲಿ ₹ ೩೧೩.೧೩ ಲಕ್ಷಗಳನ್ನು ಹಾಗೂ ೪,೨೪೧ ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ನಿಗದಿತ ಕೂಲಿ ದರದಲ್ಲಿ ನೀಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿತ್ತು. ಇದರಿಂದಾಗಿ ೭.೫೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಿದಂತಾಗಿದೆ. ಈ ಯೋಜನೆಯಲ್ಲಿ ೨೦೦೫–೦೬ನೇ ಸಾಲಿನಲ್ಲಿ ₹ ೧೯೧.೯೭ ಲಕ್ಷಗಳನ್ನು ಹಾಗೂ ೧,೧೨೪.೫೦ ಕ್ವಿಂಟಾಲ್ ಆಹಾರ ಧಾನ್ಯವನ್ನು ಕೂಲಿ ರೂಪದಲ್ಲಿ ನೀಡಲಾಗಿತ್ತು.

## ಈ) ಇಂದಿರಾ ಆವಾಸ್ ಯೋಜನೆ: (ಐ.ಎ.ವೈ)

ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಶೇ. ೬೦ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಾಗೂ ಶೇ. ೪೦ರಷ್ಟು ಇತರೆ ವರ್ಗದ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಆರ್ಥಿಕ ನೆರವು ಒದಗಿಸಲಾಗುತ್ತದೆ. ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಯೋಜನೆಗೆ ೭೫:೨೫ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ ಅನುದಾನವನ್ನು ನೀಡುತ್ತವೆ. ಗ್ರಾಮ ಸಭೆಯಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ವಾಸದ ಹೊಸ ಮನೆಗಳ ನಿರ್ಮಾಣಕ್ಕಾಗಿ ಪ್ರಸ್ತುತ ಗರಿಷ್ಟ ₹ ೨೫,೦೦೦ಗಳನ್ನು, ಮನೆಗಳ ನವೀಕರಣಕ್ಕಾಗಿ ಗರಿಷ್ಟ ₹ ೧೨,೫೦೦ಗಳ ಅನುದಾನವನ್ನು ಒದಗಿಸಲಾಗುತ್ತಿದೆ. ನಿಗದಿಪಡಿಸಿದ ಒಟ್ಟು ಭೌತಿಕ ಗುರಿಯಲ್ಲಿ ಕನಿಷ್ಟ ಶೇ.೬೦ರಷ್ಟನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ. ಹಾಗೆಯೇ ಒಟ್ಟು ಅನುದಾನದಲ್ಲಿ ಶೇ. ೧೦ರಷ್ಟನ್ನು ನವೀಕರಣ ಕಾಮಗಾರಿಗೆ ಬಳಸಿಕೊಳ್ಳಲು ಅವಕಾಶವಿರುತ್ತದೆ. ಆಯ್ಕೆಯಾದ ಫಲಾನುಭವಿಯು ಕನಿಷ್ಟ ೨೦ ಚದರ ಮೀಟರ್ ವಿಸ್ತೀರ್ಣದ ಮನೆಗಳನ್ನು ನಿರ್ಮಿಸುವುದು ಕಡ್ಡಾಯವಾಗಿದೆ. ಈ ಯೋಜನೆಯಡಿಯಲ್ಲಿ ೨೦೦೩–೦೪ರಲ್ಲಿ ಒಟ್ಟು ₹ ೨೬೯.೨೦ ಲಕ್ಷಗಳ ಅನುದಾನವಿದ್ದು, ಇದರಲ್ಲಿ ಪಕ್ಕಾಮನೆಗೆ ₹ ೨೩೧.೫೪ ಲಕ್ಷಗಳನ್ನು ಮೀಸಲಿಡಲಾಗಿತ್ತು ಹಾಗೂ ೧,೬೮೪ ಮನೆಗಳ ನಿರ್ಮಾಣದ ಗುರಿ ಹೊಂದಲಾಗಿತ್ತು. ಇದರಲ್ಲಿ ₹ ೧೯೭.೧೯ ಲಕ್ಷಗಳನ್ನು ವೆಚ್ಚ ಮಾಡಿ ೧೪೬೦ ಮನೆಗಳನ್ನು ಪೂರ್ಣವಾಗಿ ನಿರ್ಮಾಣ ಮಾಡಲಾಗಿತ್ತು. ಉಳಿದವು ವಿವಿಧ ಹಂತದಲ್ಲಿದ್ದವು. ಕಚ್ಚಾ ಮನೆಗಳನ್ನು ಪಕ್ಕಾ ಮನೆಗಳನ್ನಾಗಿ ನಿರ್ಮಾಣ ಮಾಡಲು ₹ ೩೭.೫೬ ಲಕ್ಷಗಳ ಆರ್ಥಿಕ ಹಾಗೂ ೫೧೪ ಭೌತಿಕ ಗುರಿ ಹೊಂದಲಾಗಿದ್ದು, ₹ ೩೬.೫೩ ಲಕ್ಷಗಳನ್ನು ವೆಚ್ಚ ಮಾಡಿ ೪೯೯ ಮನೆಗಳನ್ನು ಪೂರ್ಣಗೊಳಿಸಲಾಗಿತ್ತು. ಉಳಿದವು ವಿವಿಧಹಂತದಲ್ಲಿದ್ದವು. ೨೦೦೯–೧೦ರ ಅಂತ್ಯಕ್ಕೆ ಈ ಯೋಜನೆಯಡಿ ೧೯೧೨ ಮನೆಗಳನ್ನು ನಿರ್ಮಿಸಲಾಗಿದೆ.

## ಉ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ.)

ಸ್ವ–ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಈ ಯೋಜನೆಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ.), ಗ್ರಾಮೀಣ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ (ಟ್ರೈಸಂ), ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಯೋಜನೆ (ಡ್ವಾಕ್ರಾ), ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು (ಸಿಟ್ರಾ), ಗಂಗಾ ಕಲ್ಯಾಣ ಯೋಜನೆ (ಜೆ.ಕೆ.ವೈ) ದಶಲಕ್ಷ ಬಾವಿ ಯೋಜನೆ (ಎಂ.ಡಬ್ಲ್ಯೂ.ಎಸ್.) ಮುಂತಾದ ಉದ್ಯೋಗ ಯೋಜನೆಗಳನ್ನು ವಿಲೀನಗೊಳಿಸಿ ಏಪ್ರಿಲ್ ೧೯೯೯ ರಿಂದ ಜಾರಿಗೆ ತರಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮವಾಗಿ ಶೇ. ೭೫:೨೫ರ ಅನುಪಾತದಲ್ಲಿ ಅನುದಾನವನ್ನು ಭರಿಸುತ್ತವೆ.

ಗ್ರಾಮೀಣ ಬಡಜನರನ್ನು (ಬಡತನ ರೇಖೆಗಿಂತ ಕೆಳಗಿರುವ ಕುಟುಂಬದವರನ್ನು) ಸ್ವ–ಸಹಾಯ ಗುಂಪುಗಳಾಗಿ ರೂಪಿಸಿ, ಅವರಿಗೆ ತರಬೇತಿ, ಸಾಲ, ತಂತ್ರಜ್ಞಾನ, ಮೂಲಭೂತ ಸೌಕರ್ಯ ಹಾಗೂ ಮಾರುಕಟ್ಟೆಯಂತಹ ಸೌಲಭ್ಯಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿರಿಸಿಕೊಂಡು ಆಯಾ ಪ್ರದೇಶದಲ್ಲಿ ಮುಖ್ಯ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ, ಅಂತಹ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಿ, ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕ್‌ಗಳ ಮೂಲಕ ಸಾಲ ಹಾಗೂ ಸರಕಾರದ ಸಹಾಯಧನ ಸೌಲಭ್ಯ ಒದಗಿಸುವ ಕಾರ್ಯಕ್ರಮವಾಗಿರುತ್ತದೆ. ಎಸ್.ಜಿ.ಎಸ್. ವೈ. ಯೋಜನೆಯಡಿ ನಿಗದಿಪಡಿಸಿದ ಒಟ್ಟು ಗುರಿಯಲ್ಲಿ ಶೇ. ೭೫ ಗುಂಪು ಚಟುವಟಿಕೆಗಳಿಗೆ ಹಾಗೂ ಉಳಿದ ಶೇ. ೨೫ ವೈಯಕ್ತಿಕ ಫಲಾನುಭವಿಗಳಿಗೂ ನಿಗದಿಪಡಿಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿದೆ. ಒಟ್ಟು ಗುರಿಯಲ್ಲಿ ಶೇ. ೪೦ ರಷ್ಟನ್ನು ಮಹಿಳೆಯರಿಗೆ ನಿಗದಿಪಡಿಸಬೇಕಾಗಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು ಹಾಗೂ ಅಲ್ಪಸಂಖ್ಯಾತರಿಗೆ ಶೇಕಡಾವಾರು ಗುರಿ ನಿಗದಿಪಡಿಸಿ ಕ್ರಿಯಾಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆ ೨೦೦೨–೦೩ರಲ್ಲಿ ₹ ೬೭.೨೦ ಲಕ್ಷಗಳ ಆರ್ಥಿಕ ಗುರಿ ಹಾಗೂ ೧೫೦ ವೈಯಕ್ತಿಕ ಫಲಾನುಭವಿಗಳು ಮತ್ತು ೩೧ ಗುಂಪುಗಳಿಗೆ ಸಹಾಯಧನ ನೀಡುವ ಗುರಿ ಹೊಂದಿದ್ದು, ೩೦ ಗುಂಪು ಹಾಗೂ ೧೨೩ ವೈಯಕ್ತಿಕ ಫಲಾನುಭವಿಗಳು ಪ್ರಯೋಜನ ಪಡೆದಿದ್ದು, ಇದಕ್ಕಾಗಿ ₹ ೯೧.೯೫ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ೨೦೧೦–೧೧ರಲ್ಲಿ ಈ ಯೋಜನೆಗಾಗಿ ₹ ೭೭೬.೬೦ ಲಕ್ಷ ಅನುದಾನವಿದ್ದು, ಮಾರ್ಚಿ ೨೦೧೧ರ ಅಂತ್ಯಕ್ಕೆ ₹ ೬೬೮.೯೭ ಲಕ್ಷಗಳನ್ನು ಖರ್ಚುಮಾಡಲಾಗಿದೆ. ಇದರಲ್ಲಿ ₹ ೪೫೯.೯೦ ಲಕ್ಷ ಸಹಾಯ ಧನಕ್ಕಾಗಿ, ₹ ೬೧.೯೦ ಲಕ್ಷ ಸ್ವತ್ತು ನಿಧಿಗಾಗಿ, ₹ ೪೮.೪೫ ಲಕ್ಷ ಗುಂಪುಗಳಿಗೆ ತರಬೇತಿಗಾಗಿ, ₹ ೯೪.೮೮ ಲಕ್ಷ ಮೂಲಭೂತ ಸೌಕರ್ಯದ ಅಭಿವೃದ್ಧಿಗಾಗಿ, ಹಾಗೂ ₹ ೩.೮೪ ಲಕ್ಷಗಳನ್ನು ಫಿಜಿಬಿಲಿಟೇಟರ್(Feasibilitator)ಗಳ ಸಂಭಾವನೆಗಾಗಿ ನೀಡಲಾಗಿದೆ.

## ಊ) ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ (ಎನ್.ಪಿ.ಬಿ.ಡಿ)

ಗ್ರಾಮೀಣ ಇಂಧನ ಕಾರ್ಯಕ್ರಮಗಳಲ್ಲಿ ಈ ಯೋಜನೆ ಮಹತ್ವ ಪಡೆದಿದ್ದು, ಅಸಂಪ್ರದಾಯಕ ಇಂಧನ ಮೂಲಗಳ ಉಪಯೋಗವನ್ನು ಜನಪ್ರಿಯಗೊಳಿಸಲು, ಅಡಿಗೆಗಾಗಿ ಉಪಯೋಗಿಸಲಾಗುತ್ತಿರುವ ಸೌದೆ ಬಳಕೆಯ ನಿಯಂತ್ರಣ ಹಾಗೂ ಅರಣ್ಯ ನಾಶವನ್ನು ತಡೆಗಟ್ಟುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೨–೮೩ ರಿಂದ ಜಾರಿಗೆ ತರಲಾಗಿದೆ. ಜಾನುವಾರುಗಳು ಹೆಚ್ಚಾಗಿರುವ ಕಡೆ ಅವುಗಳ ಸಗಣಿಯನ್ನು ಉಪಯೋಗಿಸಿ ಅದರಿಂದ ಜೈವಿಕ ಅನಿಲ ಸ್ಥಾವರಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿ ಇಂಧನವನ್ನು ಗೃಹಬಳಕೆ ಅಡುಗೆ ಹಾಗೂ ದೀಪಕ್ಕೆ ಬೇಕಾಗುವ ಅನಿಲವನ್ನು ಉತ್ಪಾದಿಸಬಹುದು.

ವಿವಿಧ ಅಳತೆಗಳ ಸ್ಥಾವರಗಳಿಗೆ ಬೇರೆ ಬೇರೆ ಸಹಾಯಧನದ ಮೊತ್ತವನ್ನು ನಿಗದಿಪಡಿಸಲಾಗಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಫಲಾನುಭವಿಗಳು ಸಣ್ಣ ಹಾಗೂ ಅತೀ ಸಣ್ಣ ರೈತರಾಗಿದ್ದು, ಮೂರು ಮತ್ತು ನಾಲ್ಕು ಘನ ಮೀಟರ್ ಅಳತೆಯ ಸ್ಥಾವರಗಳನ್ನು ನಿರ್ಮಿಸಿದ್ದು, ಈ ಸಲುವಾಗಿ ಕೇಂದ್ರದ ಪಾಲಿನ ₹ ೩,೫೦೦ ಮತ್ತು ರಾಜ್ಯದ ಪಾಲಿನ ₹ ೩,೫೦೦ ಸಹಾಯಧನವನ್ನು ಒದಗಿಸಲಾಗುತ್ತದೆ. ಈ ಯೋಜನೆಯಲ್ಲಿ ೧೯೯೯–೨೦೦೦ದಲ್ಲಿ ೧೪೬ ಸ್ಥಾವರಗಳನ್ನು ಸ್ಥಾಪಿಸಿ, ಇದಕ್ಕಾಗಿ ₹ ೧೦.೬೧ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ೨೦೦೯–೧೦ರಲ್ಲಿ ಈ ಯೋಜನೆಯಡಿಯಲ್ಲಿ ೩೭ ಜೈವಾನಿಲ ಸ್ಥಾವರಗಳನ್ನು ನಿರ್ಮಿಸಿ ₹ ೨.೬೦ಲಕ್ಷ ವೆಚ್ಚ ಮಾಡಲಾಗಿತ್ತು.

## ಏ) ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ (ಎನ್.ಸಿ.ಐ.ಸಿ.)

ಗ್ರಾಮೀಣ ಪ್ರದೇಶದ ಗೃಹಿಣಿಯರ ಆರೋಗ್ಯ ಕಾಪಾಡಲು, ಇಂಧನ ವೆಚ್ಚ ಕಡಿಮೆ ಮಾಡಲು ಹೊಗೆರಹಿತ ಒಲೆಗಳನ್ನು ಒದಗಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ೧೯೮೬–೮೭ರಿಂದ ಜಾರಿಗೆ ತರಲಾಯಿತು. ಈ ಯೋಜನೆಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಇಂಧನ ಉಳಿಸಲು ವಿನ್ಯಾಸಗೊಳಿಸಿರುವ ಸುಧಾರಿತ ಒಲೆಗಳನ್ನು ಎಲ್ಲಾ ವರ್ಗದ ಜನರು ಬಳಸಬಹುದಾಗಿದೆ. ಸುಧಾರಿತ ಒಲೆಗಳಿಂದಾಗಿ ಕಟ್ಟಿಗೆಯ ಉಳಿತಾಯ, ಹೊಗೆರಹಿತ ಹಾಗೂ ಅತಿಶೀಘ್ರ ಅಡುಗೆಯನ್ನು ಮಾಡಬಹುದು. ಈ ಒಲೆಗಳಲ್ಲಿ ಸ್ಥಿರ ಮತ್ತು ಚರ ಒಲೆಗಳೆಂದು ಎರಡು ಬಗೆಗಳಿದ್ದು, ಚರ ಒಲೆಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಕೊಂಡ್ಯೊಯ್ಯಬಹುದು.

ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ೧೯೯೯–೨೦೦೦ರಲ್ಲಿ ೩೧೯ ಸುಧಾರಿತ ಒಲೆಗಳನ್ನು ಸ್ಥಾಪಿಸಲಾಗಿದ್ದು, ಇದಕ್ಕಾಗಿ ₹ ೦.೨೯ಲಕ್ಷಗಳನ್ನು ಖರ್ಚು ಮಾಡಲಾಗಿತ್ತು.

## ಎ) ಸಮಗ್ರ ಗ್ರಾಮೀಣ ಇಂಧನ ಶಕ್ತಿ ಕಾರ್ಯಕ್ರಮ (ಐ.ಆರ್.ಇ.ಪಿ)

ಸಾಂಪ್ರದಾಯಕ ಇಂಧನ ಶಕ್ತಿ ಮೂಲಗಳಾದ ವಿದ್ಯುತ್, ಸೀಮೆಎಣ್ಣೆ ಮತ್ತು ಸೌದೆ ಇವುಗಳ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಉಪಕರಣಗಳನ್ನು ಬಳಸುವುದು ಹಾಗೂ ಅಸಂಪ್ರದಾಯಕ, ಇಂಧನ ಶಕ್ತಿ ಮೂಲಗಳಾದ ಸೌರಶಕ್ತಿ, ಪವನಶಕ್ತಿ ಹಾಗೂ ಜೈವಾನಿಲ ಶಕ್ತಿಯನ್ನು ಹೆಚ್ಚು ಹೆಚ್ಚು ಬಳಸುವುದರ ಮೂಲಕ ಇಂಧನ ಶಕ್ತಿಯ ಕೊರತೆಯನ್ನು ನೀಗಿಸಲು ಐ.ಆರ್.ಇ.ಪಿ. ಯೋಜನೆಯನ್ನು ೧೯೯೪–೯೫ರಲ್ಲಿ ಜಾರಿಗೆ ತರಲಾಯಿತು. ೨೦೦೩–೦೪ರಲ್ಲಿ ಈ ಯೋಜನೆಯಲ್ಲಿ ೧೫೦ ಭೌತಿಕ ಗುರಿಗಾಗಿ ₹ ೪.೨೬ ಲಕ್ಷ ಗಳನ್ನು ವೆಚ್ಚ ಮಾಡಲಾಗಿದೆ. ೨೦೦೫–೦೬ರಲ್ಲಿ ಚಾಮರಾಜನಗರ ಜಿಲ್ಲೆಯ ಪುಣಜನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬೇಡಗುಳಿ, ಮೊಣಕೈಪೋಡು, ಕಾಡಿಗೆರೆಪೋಡು, ರಾಮಯ್ಯಪೋಡು, ವ್ಯಾಪ್ತಿಯ ಸೋಲಿಗರ ಗ್ರಾಮಗಳನ್ನು ಆಯ್ಕೆ ಮಾಡಿ ಬಡತನ ರೇಖೆಗಿಂತ ಕೆಳಗಿರುವ ಹಾಗೂ ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳ ಸರ್ವೆ ಕಾರ್ಯ ಮುಗಿಸಲಾಗಿದೆ. ಈ ಅವಧಿಯಲ್ಲಿ ಯಾವುದೇ ಸೌರಶಕ್ತಿ ಉಪಕರಣ ಖರೀದಿಸಿರುವುದಿಲ್ಲ. ಜಿಲ್ಲೆಯಲ್ಲಿ ೨೦೦೯–೧೦ರಲ್ಲಿ ಈ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಕಾಡಂಚಿನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಚಾಮರಾಜನಗರ ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿ, ಯಳಂದೂರು ತಾಲೂಕಿನ ಯರಗಂಬಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಪೂರಣಿಪೋಡು ಹಾಗೂ ಕೊಳ್ಳೇಗಾಲ ತಾಲೂಕಿನ ಶ್ರೀ ಮಲ್ಯೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಾಲಾರ್ ಗ್ರಾಮಗಳಲ್ಲಿ ಒಟ್ಟು ೪೦ ಸೌರಶಕ್ತಿ ಗೃಹದೀಪ ೫೧ ಸೌರಶಕ್ತಿ ಬೀದಿದೀಪ ಅಳವಡಿಸಿ ₹ ೧೮.೦೪ ಲಕ್ಷಗಳನ್ನು ವೆಚ್ಚಮಾಡಲಾಗಿದೆ.

## ಏ) ಆಶ್ರಯ (ಗ್ರಾಮೀಣ ) ಯೋಜನೆ

ಈ ಯೋಜನೆಯಡಿ ಶೇಕಡಾ ೪೦ರಷ್ಟು ಪರಿಶಿಷ್ಟ ಜಾತಿಗೂ, ಶೇಕಡಾ ೧೦ರಷ್ಟು ಪರಿಶಿಷ್ಟ ಪಂಗಡಕ್ಕೂ, ಶೇಕಡಾ ೫ರಷ್ಟು ಅಂಗವಿಕಲರು, ಮಾಜಿ ಸೈನಿಕರು, ಹಿರಿಯ ನಾಗರಿಕರಿಗೆ ಹಂಚಿಕೆ ಮಾಡಿ, ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಎಲ್ಲಾ ಫಲಾನುಭವಿಗಳು ಕಡ್ಡಾಯವಾಗಿ ಮಹಿಳೆಯರಾಗಿರಬೇಕು. ಪ್ರತಿ ಫಲಾನುಭವಿಗೆ ₹ ೨೦,೦೦೦ಗಳನ್ನು ಮಂಜೂರು ಮಾಡಲಾಗಿದ್ದು, ಇದರಲ್ಲಿ ₹ ೧೦,೦೦೦ಗಳು ಸಹಾಯಧನವಾಗಿದ್ದು, ಉಳಿದ ₹ ೧೦,೦೦೦ಗಳನ್ನು ಬಡ್ಡಿ ಸೇರಿಸಿ, ತಿಂಗಳಿಗೆ ₹ ೧೧೫ಗಳಂತೆ ೧೮೦ ಸಮ ಕಂತುಗಳಲ್ಲಿ ಪಾವತಿಸಬೇಕು. ಆದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಪೂರ್ಣ ಅನುದಾನವು ಸಹಾಯಧನವಾಗಿರುತ್ತದೆ.

## ಐ) ಅಂಬೇಡ್ಕರ್ (ಗ್ರಾಮೀಣ) ಯೋಜನೆ

ಈ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಒದಗಿಸುವ ಉದ್ದೇಶ ಹೊಂದಲಾಗಿದ್ದು, ಈ ಸೌಲಭ್ಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಒದಗಿಸಲಾಗುವುದು. ಈ ಯೋಜನೆಯಡಿಯಲ್ಲಿ ೨೦೦೯–೧೦ನೇ ಸಾಲಿನಲ್ಲಿ ಚಾಮರಾಜನಗರ ತಾಲೂಕಿನಲ್ಲಿ ೩೪ ಮನೆಗಳು, ಗುಂಡ್ಲುಪೇಟೆ ತಾಲೂಕಿನಲ್ಲಿ ಕೇವಲ ಎರಡು ಮನೆಗಳು ಹಾಗೂ ಕೊಳ್ಳೇಗಾಲ ತಾಲೂಕಿನಲ್ಲಿ ೧೫ ಮನೆಗಳು, ಹೀಗೆ ಒಟ್ಟು ೫೧ ಮನೆಗಳನ್ನು ನಿರ್ಮಿಸಿಕೊಡಲಾಗಿದೆ.

## ಒ) ಸ್ವಚ್ಛ ಗ್ರಾಮ ಯೋಜನೆ

ಗ್ರಾಮಗಳ ಸಂಪೂರ್ಣ ನೈರ್ಮಲೀಕರಣಕ್ಕಾಗಿ ರಾಜ್ಯ ಸರ್ಕಾರ ಕೆಳಗಿನ ಉದ್ದೇಶಗಳೊಂದಿಗೆ ಈ ಯೋಜನೆಯನ್ನು ೨೦೦೦–೦೧ರಿಂದ ಜಾರಿಗೆ ತಂದಿದೆ.

೧) ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮಪಡಿಸುವುದು.

೨) ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಪ್ರತೀ ಬೀದಿಯಲ್ಲಿ ಚರಂಡಿಗಳ ನಿರ್ಮಾಣ.

೩) ಸಾಮೂಹಿಕ ಮಿಶ್ರ ಗೊಬ್ಬರದ ಅಂಗಳ (ಕಮ್ಯೂನಿಟಿ ಕಾಂಪೋಸ್ಟ್) ಗಳನ್ನು ಒದಗಿಸಿ, ವಾಸಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ಸ್ಥಳಾಂತರಿಸುವುದು.

೪) ಗ್ರಾಮದ ಎಲ್ಲಾ ಮನೆಗಳಲ್ಲಿಯೂ ಹೊಗೆ ರಹಿತ ಸುಧಾರಿತ ಅಸ್ತ್ರ ಒಲೆಗಳನ್ನು ಬಳಸುವಂತೆ ಒದಗಿಸುವುದು.

೫) ಗ್ರಾಮದ ಎಲ್ಲಾ ಜನರಿಗಾಗಿ ಕುಟುಂಬಗಳಿಗಾಗಿ ಸಾಮೂಹಿಕ ಶೌಚಾಲಯಗಳು, ಕೌಟುಂಬಿಕ ಶೌಚಾಲಯಗಳು, ಹಾಗೂ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡುವುದು ಮುಂತಾದವು.

ಮೊದಲನೆ ಹಂತದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಜಿಲ್ಲೆಯಾದ್ಯಂತ ೨೩ ಗ್ರಾಮಗಳನ್ನು ಆಯ್ಕೆ ಮಾಡಿ, ಇದಕ್ಕಾಗಿ ೨೦೦೬ರ ಮಾರ್ಚ್ ಅಂತ್ಯಕ್ಕೆ ₹ ೩೦೬.೨೮ ಲಕ್ಷಗಳನ್ನು ವೆಚ್ಚ ಮಾಡಿ ೧೦ ಸ್ವಚ್ಛ ಗ್ರಾಮದ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದವು ಪ್ರಗತಿ ಹಂತದಲ್ಲಿದ್ದವು. ಹಾಗೆಯೇ ಎರಡನೇ ಹಂತದಲ್ಲೂ ಸಹ ೨೩ ಗ್ರಾಮಗಳು ಯೋಜನೆಗೆ ಆಯ್ಕೆಗೊಂಡಿದ್ದು, ಎಲ್ಲಾ ಗ್ರಾಮಗಳಲ್ಲಿಯೂ ಕಾಮಗಾರಿ ಪ್ರಗತಿಯಲ್ಲಿತ್ತು. ಯೋಜನೆಯಲ್ಲಿ ಈವರೆಗೆ ₹ ೯೮.೯೦ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ₹ ೮೬.೫೮ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು. ಜಿಲ್ಲೆಯಲ್ಲಿ ೨೦೦೯–೧೦ರವರೆಗೆ ₹ ೯೯೫.೭೦ ಲಕ್ಷ ಅನುದಾನವಿದ್ದು, ಇದಕ್ಕೆ ₹ ೬೯೯.೧೩ ಲಕ್ಷ ವೆಚ್ಚ ಮಾಡಿ, ೩೭೧೫೨ ವೈಯಕ್ತಿಕ ಶೌಚಾಲಯ, ೨೬೫ ಶಾಲಾ ಶೌಚಾಲಯ, ೮೪೬ ಅಂಗನವಾಡಿ ಶೌಚಾಲಯ, ೧೩ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲಾಗಿದೆ.

## ಓ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ

ಪಶ್ಚಿಮ ಘಟ್ಟಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರದ ಸಮತೋಲನವನ್ನು ಕಾಪಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಜಲಾನಯನಗಳ ಆಧಾರದ ಮೇಲೆ ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ ಮೂಲಕ ಜಾರಿಗೊಳಿಸಲಾಗಿದೆ. ಈ ಯೋಜನೆಗೆ ಬೇಕಾದ ಅನುದಾನವನ್ನು ಕೇಂದ್ರ ಶೇ. ೧೦೦ರಷ್ಟು ಬಿಡುಗಡೆ ಮಾಡಿದ್ದು, ೨೦೦೩-೦೪ರ ಅಂತ್ಯಕ್ಕೆ ₹ ೪೨.೦೦ ಲಕ್ಷಗಳನ್ನು ವೆಚ್ಚ ಮಾಡಿ ಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆ.

## ಔ) ನಿರ್ಮಲ ಗ್ರಾಮ ಯೋಜನೆ

ಗ್ರಾಮೀಣ ಪ್ರದೇಶ(ಜನ ವಸತಿ)ಗಳಲ್ಲಿ ಪರಿಸರ ನೈರ್ಮಲ್ಯವನ್ನು ಸುಧಾರಿಸಲು, ವಿಶೇಷವಾಗಿ ಪ್ರತಿ ಗ್ರಾಮೀಣ ಕುಟುಂಬಕ್ಕೂ ಶೌಚಾಲಯ ಸೌಲಭ್ಯ ಒದಗಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿಕೊಳ್ಳಲು ₹ ೨,೦೦೦ಗಳನ್ನು ಸಹಾಯ ಧನವಾಗಿ ನೀಡಲಾಗುತ್ತದೆ ಹಾಗೂ ಬಡತನ ರೇಖೆಗಿಂತ ಮೇಲಿರುವವರಿಗೆ ₹ ೧,೨೦೦ಗಳನ್ನು ಸಹಾಯಧನವಾಗಿ ನೀಡಲಾಗುವುದು.

೨೦೦೩-೦೪ರಲ್ಲಿ ₹ ೨೦.೪೫ ಲಕ್ಷಗಳನ್ನು ವೆಚ್ಚ ಮಾಡಿ ೧೧೯೩ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿರ್ಮೂಲನೆಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿವೆ. ಅಲ್ಲದೆ ರಾಜ್ಯ ಸರ್ಕಾರ ಸುವರ್ಣಗ್ರಾಮ ಯೋಜನೆ, ಸ್ತ್ರೀ-ಶಕ್ತಿಯೋಜನೆ, ಅಕ್ಷರದಾಸೋಹ, ಯಶಸ್ವಿನಿ, ನಿರ್ಮಲ ಕರ್ನಾಟಕ ಮುಂತಾದ ಇನ್ನೂ ಹತ್ತು ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಜಾರಿಗೊಳಿಸುತ್ತಿದೆ.

## ಅಂ) ಬಯೋಗ್ಯಾಸ್ (ಜೈವಾನಿಲ) ಯೋಜನೆ

ಈ ಯೋಜನೆಯು ೧೯೮೨-೮೩ರಲ್ಲಿ ಜಾರಿಗೆ ಬಂದಿದ್ದು, ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ಸಗಣಿಯನ್ನು ಉಪಯೋಗಿಸಿಕೊಂಡು ಬಯೋಗ್ಯಾಸ್ ಘಟಕಗಳನ್ನು ಸ್ಥಾಪಿಸುವ ಮೂಲಕ ಅರಣ್ಯ ನಾಶವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದು, ಅಡಿಗೆ ಮನೆಯಲ್ಲಿ ಹೊಗೆ ರಹಿತ ವಾತಾವರಣ ಕಲ್ಪನೆ, ಮಹಿಳೆ ಮತ್ತು ಮಕ್ಕಳ ಆರೋಗ್ಯ ರಕ್ಷಣೆ ಹಾಗೂ ಪರಿಸರ ಮಾಲಿನ್ಯ ತಡೆಗಟ್ಟುವುದೇ ಮುಖ್ಯ ಉದ್ದೇಶವಾಗಿದೆ. ಬಯೋಗ್ಯಾಸ್‌ನಿಂದ ಅಡಿಗೆ ಮಾಡಲು, ದೀಪ ಉರಿಸಲು, ನೀರಾವರಿ ಪಂಪ್‌ಸೆಟ್ ನಡೆಸಲು ಸಾಧ್ಯವಾಗುತ್ತದೆ. ಸಣ್ಣ ರೈತ, ಅತಿ ಸಣ್ಣ ರೈತ, ಗುಡ್ಡಗಾಡು ಪ್ರದೇಶಗಳ ಜನರಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ₹ ೨೩೦೦.೦೦ಗಳನ್ನು ಹಾಗೂ ಇತರಿಗೆ ₹ ೧೮೦೦.೦೦ಗಳ ಸಹಾಯಧನ ಸಿಗುತ್ತದೆ. ಈ ಯೋಜನೆಯಲ್ಲಿ "ಟರ್ನ್ ಕೀ ಫೀ" ಕೆಲಸ ಮಾಡಿದವರಿಗೆ ₹ ೭೦೦.೦೦ಗಳನ್ನು ಟರ್ನ್ ಕೀ ಫೀ ನೀಡಲು ಅವಕಾಶವಿದೆ. ೨೦೦೩-೦೪ರಲ್ಲಿ ೧೧೭ ಜೈಲಾನಿಲ ಘಟಕ ನಿರ್ಮಾಣ ಮಾಡಿದ್ದು, ಸರ್ಕಾರದಿಂದ ₹ ಒಂದು ಲಕ್ಷ ಅನುದಾನ ಬಿಡುಗಡೆಗೊಂಡಿತ್ತು. ೪೧ ಜೈವಿಕ ಅನಿಲ ಸ್ಥಾವರಗಳಿಗೆ ಮಾತ್ರ ಕೇಂದ್ರ ಸರ್ಕಾರ ₹ ೧.೨೨ ಲಕ್ಷಗಳನ್ನು (ಆರಂಭಿಕ ಶಿಲ್ಕು ಸೇರಿದಂತೆ) ಬಿಡುಗಡೆ ಮಾಡಿದ್ದು, ಖರ್ಚು ಮಾಡಲಾಗಿದೆ.

## ಅಃ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ

ಈ ಯೋಜನೆಯು ದಿ. ೧೫–೦೮–೨೦೦೦ ದಿಂದ ಜಾರಿಗೆ ಬಂದಿರುತ್ತದೆ. ಈ ಯೋಜನೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ರಸ್ತೆಗಳ ಗುಣಮಟ್ಟ ಉತ್ತಮಪಡಿಸಿ, ಪ್ರತಿಯೊಂದು ಗ್ರಾಮಕ್ಕೂ ರಸ್ತೆ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ೨೦೦೦–೦೧ ಹಾಗೂ ೨೦೦೧–೦೨ರ ಅವಧಿಗಳಲ್ಲಿ ₹ ೨೫೩.೨೨ ಲಕ್ಷಗಳ ಅನುದಾನ ಬಿಡುಗಡೆ ಆಗಿದ್ದು, ಇದು ಮಾರ್ಚ್ ೨೦೦೪ರ ಅಂತ್ಯಕ್ಕೆ ₹ ೨೭೩.೨೩ ಲಕ್ಷಗಳನ್ನು ಖರ್ಚು ಮಾಡಿ ಏಳು ರಸ್ತೆಗಳ ಕಾಮಗಾರಿಗಳು ಮುಕ್ತಾಯಗೊಂಡಿದ್ದವು. ಹಾಗೆಯೇ ೨೦೦೨–೦೩ ರಲ್ಲಿ ₹ ೪೦೭.೦೬೩ ಲಕ್ಷಗಳ ಅನುದಾನ ಬಿಡುಗಡೆಗೊಂಡಿದ್ದು, ಮಾರ್ಚ್ ೨೦೦೪ರ ಅಂತ್ಯಕ್ಕೆ ₹ ೩೮೫.೪೦ ಲಕ್ಷ ಗಳನ್ನು ವೆಚ್ಚ ಮಾಡಿ, ೧೧ ರಸ್ತೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದವು.

## ಕ) ಸುವರ್ಣ ಗ್ರಾಮೋದಯ ಯೋಜನೆ

ಘನತೆವೆತ್ತ ಭಾರತದ ರಾಷ್ಟ್ರಪತಿಗಳು ದಿ. ೨೫–೦೨–೨೦೦೭ರಂದು ಸುವರ್ಣಗ್ರಾಮೋದಯ ಯೋಜನೆಗೆ ಚಾಲನೆ ನೀಡಿರುತ್ತಾರೆ. ಸುವರ್ಣ ಗ್ರಾಮೋದಯ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣ ಅಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿ ಪಡೆಸಬಹುದಾಗಿದೆ. ವಿಶಾಲ ಕರ್ನಾಟಕವು ರಚನೆಯಾದ ನಂತರ ರಾಜ್ಯವು ಸುವರ್ಣ ಮಹೋತ್ಸವ ಆಚರಿಸುವ ಸುಸಂದರ್ಭದಲ್ಲಿ ಈ ಒಂದು ಹೊಸ ಯೋಜನೆಯನ್ನು ಜಾರಿಗೆ ತರಲಾಯಿತು. ಸರ್ಕಾರ, ಸರ್ಕಾರೇತರ ಸಂಸ್ಥೆಗಳು, ಖಾಸಗಿ ವಲಯದ ಭಾಗೀದಾರರು ಮತ್ತು ಗ್ರಾಮ ಸಮುದಾಯಗಳ ಸಹಭಾಗಿತ್ವದ ಒಟ್ಟುಗೂಡಿದ ಪ್ರಯತ್ನಗಳೊಂದಿಗೆ ಪ್ರತಿ ವರ್ಷ ೧೦೦೦ ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು ಈ ಯೋಜನೆಯ ಮುಖ್ಯ ಧ್ಯೇಯವಾಗಿದೆ.

**ಯೋಜನೆಯ ಧ್ಯೇಯೋದ್ದೇಶಗಳು:**

೧. ಆಯ್ಕೆಯಾದ ಗ್ರಾಮಗಳ ಜನಜೀವನ ಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು.

೨. ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು.

೩. ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಂತೆ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

೪. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು.

೫. ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು, ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.

೬. ಸಂಪೂರ್ಣ ಸ್ವಚ್ಚತಾ ಆಂದೋಲನ ಕಾರ್ಯಕ್ರಮ

ಪ್ರತಿ ವ್ಯಕ್ತಿಗೆ ಅಂದಾಜು ₹ ೨೫೦೦ರಿಂದ ₹ ೩೦೦೦ರವರೆಗೆ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ

ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಡಾ ಡಿ.ಎಂ. ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಹಾಗೂ ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ ೧.೧೫, ೧.೧೦, ೧.೦೫ ಹಾಗೂ ೧.೦೦ ವೇಟೇಜ್ ನೀಡಿ ತಾಲ್ಲೂಕಿನ ಅನುದಾನವನ್ನು ನಿಗದಿಪಡಿಸುವುದು. ಜನಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡು ತಾಲ್ಲೂಕಿಗೆ ನಿಗದಿಪಡಿಸಿದ ಜನಸಂಖ್ಯೆ ಮಿತಿಯೊಳಗೆ ಸಾಮಾನ್ಯವಾಗಿ ೨೫೦೦ ರಿಂದ ೮೦೦೦ ಜನಸಂಖ್ಯೆಯಿರುವ ಗ್ರಾಮಗಳ ಪಟ್ಟಿಯನ್ನು ಅಂತಿಮಗೊಳಿಸಿ ಗ್ರಾಮಗಳನ್ನು ಆಯ್ಕೆ ಮಾಡಲಾಗುವುದು. ಪಶ್ಚಿಮ ಘಟ್ಟ ಮತ್ತು ಬೆಟ್ಟ, ಗುಡ್ಡಗಳ ಪ್ರದೇಶಗಳ ಜನಸಂಖ್ಯೆ ಮಿತಿಯಲ್ಲಿ ಸ್ವಲ್ಪ ಮಟ್ಟಿಗೆ ಸಡಿಲಗೊಳಿಸಿದೆ. ಈ ಯೋಜನೆಗಾಗಿ ೨೦೧೧ರ ಮಾರ್ಚಿ ಅಂತ್ಯಕ್ಕೆ ₹ ೮೭೪.೨೫ ಲಕ್ಷ ಅನುದಾನ ಬಿಡುಗಡೆಯಾಗಿದ್ದು, ₹ ೪೫೦.೮೩ ಲಕ್ಷ ವೆಚ್ಚಮಾಡಲಾಗಿದೆ.

## ಬರ ಮತ್ತು ಪ್ರವಾಹ

ಚಾಮರಾಜನಗರ ಜಿಲ್ಲೆಯನ್ನೊಳಗೊಂಡ ಅವಿಭಜಿತ ಮೈಸೂರು ಜಿಲ್ಲೆಯು ವಾಸ್ತವವಾಗಿ ಪ್ರಕೃತಿ ವಿಕೋಪದಿಂದ ಮುಕ್ತವಾಗಿತ್ತೆಂದೂ ಹೇಳಬಹುದಾದರೂ, ಜಿಲ್ಲೆಯು ಹಲವು ಭಾರಿ ಪ್ರಕೃತಿ ವಿಕೋಪಕ್ಕೆ ಒಳಗಾಗಿರುವ ಉದಾಹರಣೆಗಳಿವೆ. ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಹೆಚ್ಚು ನೀರಾವರಿ ಸೌಲಭ್ಯಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ೧೮೭೬–೭೭ಕ್ಕೆ ಮೊದಲು ಬರ ಸಂಭವಿಸಿದ ಬಗ್ಗೆ ದಾಖಲೆಗಳು ವಿರಳ. ೧೮೭೬–೭೮ರ ರಿಪೋರ್ಟ್ ಆನ್ ದಿ ಮೈಸೂರು ಫ್ಯಾಮಿನ್(Report on the Mysore famine) ಪ್ರಕಾರ ಮೈಸೂರು ಜಿಲ್ಲೆಯಲ್ಲಿ ತೀವ್ರತರವಾಗಿ ಸಂಭವಿಸಿದ ಬರದ ಬಗ್ಗೆ ದಾಖಲೆಗಳಿರುವುದಿಲ್ಲ. ಅದಾಗ್ಯೂ ಬುಕಾನನ್ ಪ್ರಕಾರ ೧೮ನೇ ಶತಮಾನದ ಕೊನೆಗೆ ಪರಶುರಾಮ್ ಬಾಹು ಹಾಗೂ ಕಾರನ್‌ವಾಲೀಸ್ ದಾಳಿಗೂ ಮುಂಚೆ ತೀವ್ರ ಬರ ಸಂಭವಿಸಿರಬಹುದೆಂದು ಹೇಳಿದ್ದಾರೆ. ೧೯ನೇ ಶತಮಾನದ ೧೮೨೪, ೧೮೩೧, ೧೮೫೧, ೧೮೬೫, ೧೮೭೫–೭೭, ೧೮೮೪, ೧೮೮೭–೮೮ ಮತ್ತು ೧೮೯೧ ಈ ಅವಧಿಗಳಲ್ಲಿ ಬರಗಾಲ ಸಂಭವಿಸಿದ ಬಗ್ಗೆ ದಾಖಲೆಗಳಿದ್ದರೂ ಅಷ್ಟೊಂದು ತೀವ್ರತರವಾಗಿರಲಿಲ್ಲ. ನಂತರ ೧೮೯೧–೯೨ರ ಈಶಾನ್ಯ ಮಾರುತದ ವಿಫಲತೆಯಿಂದಾಗಿ ತೀವ್ರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿತ್ತೆಂದೂ, ದನಕರುಗಳಿಗೆ ಆಹಾರದ ಕೊರತೆ ಹಾಗೂ ನೀರಿನ ಸಮಸ್ಯೆ ಉದ್ಭವಿಸಿದ್ದರಿಂದ ಗುಂಡ್ಲುಪೇಟೆ ಹಾಗೂ ಚಾಮರಾಜನಗರ ತಾಲೂಕಿನ ಹಳ್ಳಿಗಳಲ್ಲಿ ಬರ ಪರಿಹಾರ ವಿತರಣಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಚಾಮರಾಜನಗರ ತಾಲೂಕಿನ ಅರಣ್ಯ ಪ್ರದೇಶವನ್ನು ದನಕರುಗಳ ಮೇವಿಗಾಗಿ ಮುಕ್ತಗೊಳಿಸಲಾಗಿತ್ತು. ಕೆರೆಗಳ ದಂಡೆಗಳಲ್ಲಿ ಸಾಗುವಳಿಗೂ ಅವಕಾಶ ಮಾಡಿಕೊಡಲಾಗಿತ್ತು. ಚಾಮರಾಜನಗರದಲ್ಲಿನ ನೇಯ್ಗೆದಾರರಿಗೂ ಸಾಲವನ್ನು ಬರ ಪರಿಹಾರದ ಪ್ರತಿಫಲವಾಗಿ ಒದಗಿಸಲಾಗಿತ್ತು. ೧೮೯೮, ೧೯೦೧ ಮತ್ತು ೧೯೦೮ರಲ್ಲಿ ಮಳೆಯ ವಿಫಲತೆ ಸಂಭವಿಸಿದರೂ, ಅದು ಜನರ ಜೀವನ ಸ್ಥಿತಿಗತಿಗಳ ಬಗ್ಗೆ ಪರಿಣಾಮ ಬೀರಲಿಲ್ಲ. ೧೯೧೪ರಲ್ಲಿ ಸಂಭವಿಸಿದ ಮೊದಲ ಜಾಗತಿಕ ಯುದ್ಧವು ಅಗತ್ಯ ವಸ್ತುಗಳ ಏರಿಕೆಗೆ ಕಾರಣವಾಯಿತು. ಜೊತೆಗೆ ಪ್ರತಿಕೂಲ ಮತ್ತು ಅತ್ಯಂತ ಅನಾನುಕೂಲಕರವಾದ ಋತುಮಾನದ ಸ್ಥಿತಿಗತಿಗಳು ಮತ್ತು ತೀವ್ರ ಜ್ವರದಿಂದ ಕೂಡಿದ ನೆಗಡಿ (ಇನ್‌ಪ್ಲೂಯೆಂಝಾ)ಯ ತೀವ್ರತೆಯಿಂದಾಗಿ ಜನಜೀವನದ ಮೇಲೆ ತೀವ್ರ ಪರಿಣಾಮ ಬೀರಿತು. ೧೯೨೩ರಲ್ಲಿ ನೈರುತ್ಯ ಮಾರುತ ತೀವ್ರ ದುರ್ಬಲಗೊಂಡಿತ್ತು. ಇದರ ಪರಿಣಾಮ ಜಿಲ್ಲೆಯ ಜನಜೀವನದ ಮೇಲಾಯಿತು.

ಜಿಲ್ಲೆಯಲ್ಲಿ ಪ್ರಾಕೃತಿಕ ವಿಪತ್ತು ಸಂಭವಿಸುವ ಬಗ್ಗೆ ಸ್ಪಷ್ಟ ಕುರುಹುಗಳು ಗೋಚರಿಸಿದವು. ಆದಕಾರಣ ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಬತ್ತಿಹೋದ ತಾತ್ಕಾಲಿಕ ಬಾವಿಗಳನ್ನು ಪುನರ್‌ಶ್ಚೇತನಗೊಳಿಸುವುದು. ದನಕರುಗಳಿಗೆ ಮೇವುಗಳನ್ನು ಪೂರೈಸುವುದು, ಮೇವಿಗಾಗಿ ಅರಣ್ಯಗಳನ್ನು ಮುಕ್ತಗೊಳಿಸುವುದು, ಕುಡಿಯುವ ನೀರಿಗಾಗಿ ತೊಟ್ಟಿಗಳನ್ನು ಕಟ್ಟುವುದು ಮತ್ತು ದುರಸ್ಥಿಗೊಳಿಸುವುದು, ಹಳ್ಳಿಗಳ ಸುಧಾರಣೆ ಮೊದಲಾದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ವಿಪತ್ತಿಗೊಳಗಾದ ಜನರಿಗೆ ಉದ್ಯೋಗ ನೀಡಿ ಅವರ ಜೀವನಮಟ್ಟ ಸುಧಾರಿಸಲಾಯಿತು. ತಕ್ಕಾವಿ ಹಾಗೂ ಬಾವಿ ಸಾಲಗಳನ್ನು ಮಂಜೂರು ಮಾಡಲಾಯಿತು. ಮೊದಲ ಬಾರಿಗೆ ೧೮೭೬–೭೮ರಲ್ಲಿ ಮೈಸೂರು ಫ್ಯಾಮಿನ್ ಕೋಡ್‌ಅನ್ನು ಜಾರಿಗೆ ತರಲಾಯಿತು. ತರುವಾಯ ಫ್ಯಾಮಿನ್ ಕೋಡ್ ೧೮೯೬ರಲ್ಲಿ ರದ್ದಾಯಿತು.

ರಾಜ್ಯ ಹಾಗೂ ಜಿಲ್ಲೆಗಳು ೧೯೮೨–೯೩ ಮೊದಲುಗೊಂಡು ತೀವ್ರವಾಗಿ ಸತತವಾಗಿ ಬರಕ್ಕೆ ತುತ್ತಾಗಿದ್ದವು ಹಾಗೂ ೧೯೮೬–೮೭ರಲ್ಲಿ ನಿಧಾನವಾಗಿ ಬರದಿಂದ ಸುಧಾರಿಸಿಕೊಂಡಿತು. ವಿವಿಧ ಇಲಾಖೆಗಳಲ್ಲಿ ೧೯೮೨–೮೩, ೧೯೮೩–೮೪ ಹಾಗೂ ೧೯೮೪–೮೫ರ ಅವಧಿಗಳಲ್ಲಿ ಕೈಗೆತ್ತುಕೊಂಡ ಬರಪರಿಹಾರ ಕಾಮಗಾರಿಗಳ ಸಂಖ್ಯೆ ಹಾಗೂ ಅವುಗಳಲ್ಲಿ ಮಾಡಲಾದ ವೆಚ್ಚವನ್ನು ₹ ಲಕ್ಷಗಳಲ್ಲಿ ಕೆಳಗಿನಂತೆ ನೀಡಲಾಗಿದೆ. ಕಾರ್ಯನಿರ್ವಾಹಕ ಅಭಿಯಂತರರು, ಸಾರ್ವಜನಿಕ ಆರೋಗ್ಯ ಇಂಜಿನಿಯರ್ (PHE) ಇಲಾಖೆಯಲ್ಲಿ ೪೨೫ ಕಾಮಗಾರಿಗಳಿಗಾಗಿ ₹ ೩.೩೦ ಲಕ್ಷಗಳನ್ನು ವೆಚ್ಚ ಮಾಡಲಾಗಿತ್ತು. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯಲ್ಲಿ ೩೭೧ ಕಾಮಗಾರಿಗಳಿಗಾಗಿ ₹ ೨೨.೭೫ ಲಕ್ಷಗಳು, ಉಪನಿರ್ದೇಶಕರು, ಭೂಸಾರ ಸಂರಕ್ಷಣಾ ಇಲಾಖೆಯಲ್ಲಿ ೨೬೭ ಕಾಮಗಾರಿಗಳಿಗಾಗಿ ₹ ೧೮.೧೩ ಲಕ್ಷಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಹುಣಸೂರುಗಳಲ್ಲಿ ₹ ೧.೧೬ ಲಕ್ಷಗಳು, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಹಾಗೂ ತಹಸೀಲ್ದಾರ್ ಆಫೀಸ್‌ಗಳಲ್ಲಿ ೧೦,೬೦೮ ಕಾಮಗಾರಿಗಳಿಗಾಗಿ ₹ ೧೦೧೭.೧೪ ಲಕ್ಷಗಳ ವೆಚ್ಚ ಮಾಡಲಾಗಿತ್ತು. ಚಾಮರಾಜನಗರ ಜಿಲ್ಲೆಯಲ್ಲಿ ತಾಲೂಕುವಾರು ಬ್ಲಾಕ್ ಡೆವಲಪ್‌ಮೆಂಟ್ ಹಾಗೂ ತಾಲೂಕು ಕಛೇರಿಗಳು ಬರ ಪರಿಹಾರ ಕಾಮಗಾರಿಗಳಿಗಾಗಿ ಮಾಡಿದ ವೆಚ್ಚವನ್ನು (₹ ಲಕ್ಷಗಳಲ್ಲಿ) ಕೋಷ್ಟಕ ೮.೪೨ ರಲ್ಲಿ ನೀಡಿದೆ.

**ಕೋಷ್ಟಕ ೮ .೪೨**

**(ವೆಚ್ಚ ₹ ಲಕ್ಷಗಳಲ್ಲಿ)**

| ವರ್ಷಗಳು | ಚಾಮರಾಜನಗರ | | ಗುಂಡ್ಲುಪೇಟೆ | | ಕೊಳ್ಳೇಗಾಲ | | ಯಳಂದೂರು | |
|---|---|---|---|---|---|---|---|---|
| | ಸಂಖ್ಯೆ | ವೆಚ್ಚ | ಸಂಖ್ಯೆ | ವೆಚ್ಚ | ಸಂಖ್ಯೆ | ವೆಚ್ಚ | ಸಂಖ್ಯೆ | ವೆಚ್ಚ |
| ೧೯೮೨–೮೩ | ೧೧೪ | ೧.೨೭ | ೧೧೦ | ೨.೪೦ | ೬೦ | ೦.೮೫ | ೩೬ | ೦.೯೩ |
| ೧೯೮೩–೮೪ | ೩೬೭ | ೨೨.೫೫ | ೩೫೫ | ೧೩.೯೭ | ೨೬೯ | ೧೩.೬೭ | ೫೮ | ೩.೬೯ |
| ೧೯೮೪–೮೫ | ೪೦೧ | ೨೬.೯೩ | ೪೭೨ | ೨೧.೫೨ | ೨೪೧ | ೧೮.೬೩ | ೧೭೯ | ೧೭.೬೦ |
| ೧೯೮೫–೮೬ | ೩೬೯ | ೫೭.೧೧ | ೩೪೭ | ೫೯.೬೧ | ೨೨೫ | ೨೫.೫೨ | ೧೨೮ | ೧೬.೬೭ |
| ೧೯೮೬–೮೭ | ೧೨೧ | ೩೮.೨೮ | ೯೩ | ೩೫.೮೧ | ೧೯೧ | ೨೬.೮೪ | ೫೫ | ೧೪.೪೩ |

ಮೈಸೂರು ಜಿಲ್ಲೆಯಿಂದ ೧೯೯೭–೯೮ರಲ್ಲಿ ಪ್ರತ್ಯೇಕಗೊಂಡ ಚಾಮರಾಜನಗರ ಜಿಲ್ಲೆಯಲ್ಲಿ ಸಂಭವಿಸಿದ ಬರ ಮತ್ತು ಪ್ರವಾಹ ಹಾಗೂ ವಿತರಿಸಿದ ಪರಿಹಾರದ ಮೊತ್ತದ ವಿವರಗಳನ್ನು ಮುಂದೆ ನೀಡಲಾಗಿದೆ. ಜಿಲ್ಲೆಯಲ್ಲಿ ೧೯೯೭–೯೮ರಲ್ಲಿ ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ ನಾಲ್ಕು ಹಾಗೂ ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ ಐದು ಆಗಿದ್ದವು. ಇವುಗಳಿಗಾಗಿ ವಿತರಿಸಿದ ಪರಿಹಾರ ಮೊತ್ತ ₹ ೧,೫೬,೯೩೭ ಗಳಾಗಿತ್ತು. ಹಾಗೆಯೇ ೧೯೯೮–೯೯ ರಲ್ಲಿ ಕ್ರಮವಾಗಿ ೨೧೫ ಹಾಗೂ ೭೬ ಕುಟುಂಬಗಳು ಹಾನಿಗೊಳಗಾಗಿದ್ದು, ₹ ೨೬,೫೫,೪೦೨ಗಳನ್ನು ಪರಿಹಾರವಾಗಿ ನೀಡಲಾಗಿತ್ತು. ೨೦೦೦–೦೧ರಲ್ಲಿ ಕ್ರಮವಾಗಿ ೧೩೧ ಹಾಗೂ ೧೮೮೧ ಕುಟುಂಬಗಳು ಹಾನಿಗೊಳಗಾಗಿದ್ದು, ₹ ೩೨,೨೬,೬೮೮ಗಳ ಪರಿಹಾರ ವಿತರಿಸಲಾಗಿತ್ತು. ೨೦೦೫–೦೬ರಲ್ಲಿ ಕ್ರಮವಾಗಿ ೩,೬೪೨ ಹಾಗೂ ೧,೦೩೧ ಕುಟುಂಬಗಳು ಹಾನಿಗೊಳಗಾಗಿದ್ದು, ₹ ೭೨,೮೨,೫೧೮ಗಳ ಪರಿಹಾರ ವಿತರಿಸಲಾಗಿತ್ತು. ೨೦೦೭–೦೮ರಲ್ಲಿ ಕ್ರಮವಾಗಿ ೧೨೪ ಹಾಗೂ ೩೪ ಕುಟುಂಬಗಳು ಹಾನಿಗೊಳಗಾಗಿದ್ದು, ₹ ೧,೮೭,೧೬೦ಗಳ ಪರಿಹಾರ ವಿತರಿಸಲಾಗಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೪೩ ಅನ್ನು ನೋಡಿ.

**ಕೋಷ್ಟಕ ೮.೪೩: ಜಿಲ್ಲೆಯಲ್ಲಿ ಸಂಭವಿಸಿದ ಬರ ಮತ್ತು ಪ್ರವಾಹ ಹಾಗೂ ವಿತರಿಸಿದ ಪರಿಹಾರಗಳ ವಿವರ**

| ತಾಲೂಕುಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಗಳ ಸಂಖ್ಯೆ | ಬೆಳೆ ಹಾಗೂ ಜಾನುವಾರು ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (₹ ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ (₹ ಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತಪಟ್ಟವರಿಗೆ ವಿತರಿಸಿದ ಪರಿಹಾರ (₹ ಗಳಲ್ಲಿ) |
|---|---|---|---|---|---|---|---|
| ೧೯೯೭–೯೮ | | | | | | | |
| **ಗುಂಡ್ಲುಪೇಟೆ** | – | – | ೪೭೫೧೨ | – | ೫೭೬೫ | – | – |
| **ಕೊಳ್ಳೇಗಾಲ** | ೦೧ | ೦೪ | ೧೪೬೫೦ | – | – | – | – |
| **ಚಾಮರಾಜನಗರ** | ೦೩ | ೦೧ | ೯೪೭೭೫ | – | – | – | – |
| **ಯಳಂದೂರು** | – | – | – | – | – | – | – |
| **ಒಟ್ಟು** | **೦೪** | **೦೫** | **೧೫೬೯೩೭** | – | **೫೭೬೫** | – | – |
| ೧೯೯೮–೯೯ | | | | | | | |
| **ಗುಂಡ್ಲುಪೇಟೆ** | ೦೪ | – | ೩೬,೭೫೦ | ೩೮ | ೨೨೬೫೦ | – | – |
| **ಕೊಳ್ಳೇಗಾಲ** | ೨೧೦ | ೦೬ | ೧೯,೮೯,೨೨೨ | ೩೭ | ೬೦೨೭೫ | ೦೧ | ೧,೦೦,೦೦೦ |
| **ಚಾಮರಾಜನಗರ** | ೦೧ | – | ೫,೨೯,೪೩೦ | ೨೨ | ೧೮೯೩೦ | – | – |
| **ಯಳಂದೂರು** | – | ೭೦ | ೧,೦೦,೦೦೦ | – | – | – | – |
| **ಒಟ್ಟು** | **೨೧೫** | **೭೬** | **೨೬,೫೫,೪೦೨** | **೯೭** | **೧೦೧೮೫೫** | **೦೧** | **೧,೦೦,೦೦೦** |
| ೧೯೯೯–೨೦೦೦ | | | | | | | |
| **ಗುಂಡ್ಲುಪೇಟೆ** | – | ೦೧ | ೪೧,೧೬೦ | ೭೪ | ೯೯,೦೫೦ | – | – |
| **ಕೊಳ್ಳೇಗಾಲ** | ೮೭ | ೧೦ | ೩,೧೦,೧೪೪ | ೪೦ | ೭೧,೬೭೭ | ೦೨ | ೨,೦೦,೦೦೦ |
| **ಚಾಮರಾಜನಗರ** | ೦೩ | – | ೩,೫೮,೬೭೦ | ೪೫ | ೨,೧೯,೧೬೦ | – | – |
| **ಯಳಂದೂರು** | – | ೨೦೦ | ೧,೮೦,೦೦೦ | – | – | – | – |
| **ಒಟ್ಟು** | **೯೦** | **೨೧೧** | **೮,೮೯,೯೭೪** | **೧೫೯** | **೩,೮೯,೮೮೭** | **೦೨** | **೨,೦೦,೦೦೦** |

| ತಾಲೂಕುಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಗಳ ಸಂಖ್ಯೆ | ಬೆಳೆ ಹಾಗೂ ಜಾನುವಾರು ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (₹ ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ (₹ ಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತಪಟ್ಟವರಿಗೆ ವಿತರಿಸಿದ ಪರಿಹಾರ (₹ ಗಳಲ್ಲಿ) |
|---|---|---|---|---|---|---|---|
| ೨೦೦೦–೦೧ | | | | | | | |
| ಗುಂಡ್ಲುಪೇಟೆ | ೧೧ | – | ೧,೭೦,೯೫೫ | ೧೫ | ೭,೨೪೦ | ೦೧ | ೫೦,೦೦೦ |
| ಕೊಳ್ಳೇಗಾಲ | ೧೨೦ | ೦೧ | ೧೪,೩೮,೭೫೩ | ೪೬ | ೮೫,೯೬೦ | ೧೩ | ೮,೫೫,೦೦೦ |
| ಚಾಮರಾಜನಗರ | – | – | ೮,೫೭,೦೨೦ | ೧೭ | ೨೦,೮೨೫ | – | – |
| ಯಳಂದೂರು | – | ೧,೮೮೦ | ೭,೬೯,೯೬೦ | – | – | – | – |
| **ಒಟ್ಟು** | **೧೩೧** | **೧,೮೮೧** | **೩೨,೨೬,೬೮೮** | **೭೮** | **೧,೧೩,೧೫೫** | **೧೪** | **೯,೦೫,೦೦೦** |
| ೨೦೦೧–೦೨ | | | | | | | |
| ಗುಂಡ್ಲುಪೇಟೆ | ೦೧ | ೧೮ | ೫೮,೮೦೦ | ೨೯ | ೨೬,೫೨೫ | – | – |
| ಕೊಳ್ಳೇಗಾಲ | ೧೮೮ | ೦೩ | ೧,೧೭,೨೫೦ | ೩೩ | ೧,೦೬,೦೩೫ | – | – |
| ಚಾಮರಾಜನಗರ | – | – | – | – | – | – | – |
| ಯಳಂದೂರು | – | ೫೫ | ೨೯,೯೦೦ | – | – | – | – |
| **ಒಟ್ಟು** | **೧೮೯** | **೭೬** | **೨,೦೫,೯೫೦** | **೬೨** | **೧,೩೨,೫೬೦** | – | – |
| ೨೦೦೨–೦೩ | | | | | | | |
| ಗುಂಡ್ಲುಪೇಟೆ | ೦೧ | ೦೧ | ೪೨,೪೫೨ | ೨೯ | ೬೬,೦೨೫ | ೦೨ | ೧,೦೦,೦೦೦ |
| ಕೊಳ್ಳೇಗಾಲ | ೩೦ | ೦೯ | ೨,೬೦,೧೪೦ | ೧೨ | ೭೧,೭೪೦ | – | – |
| ಚಾಮರಾಜನಗರ | ೯೦ | – | ೨೪,೫೦೦ | – | – | – | – |
| ಯಳಂದೂರು | – | ೦೨ | ೨,೮೦೦ | ೦೧ | ೩೦೦ | – | – |
| **ಒಟ್ಟು** | **೧೨೧** | **೧೨** | **೩,೨೭,೯೨೨** | **೪೨** | **೧,೩೮,೦೬೫** | **೦೨** | **೧,೦೦,೦೦೦** |
| ೨೦೦೩–೦೪ | | | | | | | |
| ಗುಂಡ್ಲುಪೇಟೆ | ೧೭ | – | ೬೭,೫೦೦ | ೪೩ | ೧,೦೮,೭೯೦ | – | – |
| ಕೊಳ್ಳೇಗಾಲ | ೦೨ | – | ೧,೩೮,೭೫೦ | ೧೪ | ೪೧,೮೫೦ | ೦೫ | ೨,೫೦,೦೦೦ |
| ಚಾಮರಾಜನಗರ | ೧೬೩ | – | ೨೮,೯೪೦ | ೧೭ | ೪೦೦ | ೦೨ | ೧,೦೦,೦೦೦ |
| ಯಳಂದೂರು | ೦೧ | ೦೧ | ೧,೫೨೫ | – | – | – | – |
| **ಒಟ್ಟು** | **೧೮೩** | **೦೧** | **೨,೩೬,೭೧೫** | **೭೪** | **೧,೫೧,೦೪೦** | **೦೭** | **೩,೫೦,೦೦೦** |
| ೨೦೦೪–೦೫ | | | | | | | |
| ಗುಂಡ್ಲುಪೇಟೆ | ೨೫ | – | ೭೧,೯೨೦ | ೩೭ | ೮೨.೩೦೦ | – | – |
| ಕೊಳ್ಳೇಗಾಲ | – | – | ೧,೯೪,೭೫೦ | ೦೪ | ೧೩,೯೬೮ | ೦೨ | ೧,೦೦,೦೦೦ |
| ಚಾಮರಾಜನಗರ | ೩೨ | – | ೮೩,೫೫೦ | ೨೯ | ೧,೧೧,೧೭೦ | ೦೫ | ೨,೫೦,೦೦೦ |
| ಯಳಂದೂರು | – | ೧೬೬ | ೧,೧೬,೩೩೦ | ೦೧ | ೬೦೦ | ೦೧ | ೫೦,೦೦೦ |
| **ಒಟ್ಟು** | **೫೭** | **೧೬೬** | **೪,೬೬,೫೫೦** | **೭೧** | **೨,೦೮,೦೩೮** | **೦೮** | **೪,೦೦,೦೦೦** |

| ತಾಲೂಕುಗಳು | ಬೆಳೆ ನಾಶಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಗಳ ಸಂಖ್ಯೆ | ಬೆಳೆ ಹಾಗೂ ಜಾನುವಾರು ನಷ್ಟ ಹೊಂದಿದ ಕುಟುಂಬಗಳಿಗೆ ನೀಡಲಾದ ಪರಿಹಾರ (₹ ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ನೀಡಲಾದ ಪರಿಹಾರ (₹ ಗಳಲ್ಲಿ) | ಮೃತಪಟ್ಟವರ ಸಂಖ್ಯೆ | ಮೃತಪಟ್ಟವರಿಗೆ ವಿತರಿಸಿದ ಪರಿಹಾರ (₹ ಗಳಲ್ಲಿ) |
|---|---|---|---|---|---|---|---|
| | | | ೨೦೦೫–೦೬ | | | | |
| ಗುಂಡ್ಲುಪೇಟೆ | ೪೬೬ | ೦೧ | ೫,೮೭,೫೫೦ | ೦೭ | ೨೭,೬೦೦ | ೦೧ | ೫೦,೦೦೦ |
| ಕೊಳ್ಳೇಗಾಲ | ೪೨೭ | ೦೧ | ೧,೧೩,೫೫೮ | ೦೧ | ೧,೧೬೦ | – | – |
| ಚಾಮರಾಜನಗರ | ೧,೮೫೦ | ೦೭ | ೩೪,೦೬,೬೨೫ | ೧೭ | ೩೭,೫೯೦ | ೦೩ | ೧,೫೦,೦೦೦ |
| ಯಳಂದೂರು | ೮೯೯ | ೧,೦೨೨ | ೩೧,೭೪,೭೮೫ | ೦೩ | ೩,೨೦೦ | ೦೧ | ೫೦,೦೦೦ |
| **ಒಟ್ಟು** | **೩,೬೪೨** | **೧,೦೩೧** | **೭೨,೮೨,೫೧೮** | **೨೮** | **೬೯,೫೫೦** | **೦೫** | **೨,೫೦,೦೦೦** |
| | | | ೨೦೦೬–೦೭ | | | | |
| ಗುಂಡ್ಲುಪೇಟೆ | ೩೬೪ | – | ೩,೭೪,೧೫೦ | ೧೮ | ೫೫,೭೦೦ | ೦೧ | ೫೦,೦೦೦ |
| ಕೊಳ್ಳೇಗಾಲ | ೧೪೫ | ೦೧ | ೧,೫೧,೭೦೦ | ೦೭ | ೬೯,೨೭೬ | – | – |
| ಚಾಮರಾಜನಗರ | ೭೩೮ | – | ೨,೭೨,೬೦೦ | ೧೭ | ೬೪,೦೧೦ | – | – |
| ಯಳಂದೂರು | ೨೫೮ | ೨೯೮ | ೫,೭೯,೫೬೫ | ೦೩ | ೮,೯೦೦ | – | – |
| **ಒಟ್ಟು** | **೧,೫೦೫** | **೨೯೯** | **೧೩,೭೮,೦೧೫** | **೪೫** | **೧,೯೭,೮೮೬** | **೦೧** | **೫೦,೦೦೦** |
| | | | ೨೦೦೭–೦೮ | | | | |
| ಗುಂಡ್ಲುಪೇಟೆ | ೨೦ | ೦೮ | ೫೧,೩೦೦ | ೦೪ | ೪,೪೦೦ | – | – |
| ಕೊಳ್ಳೇಗಾಲ | ೦೯ | – | ೨೯,೧೦೦ | ೦೭ | ೩೪,೭೦೦ | ೦೧ | ೧,೦೦,೦೦೦ |
| ಚಾಮರಾಜನಗರ | ೮೦ | ೦೨ | ೨೦,೦೦೦ | ೦೯ | ೩೩,೨೦೦ | – | – |
| ಯಳಂದೂರು | ೧೫ | ೨೫ | ೮೬,೭೬೦ | ೦೩ | ೧೦,೧೦೦ | – | – |
| ಒಟ್ಟು | ೧೨೪ | ೩೫ | ೧,೮೭,೧೬೦ | ೨೩ | ೮೨,೪೦೦ | ೦೧ | ೧,೦೦,೦೦೦ |
| | | | ೨೦೧೧–೧೨ | | | | |
| ಗುಂಡ್ಲುಪೇಟೆ | ೫೪ | ೦೭ | ೧,೦೪,೫೮೦ | – | – | ೦೧ | ೧,೦೦,೦೦೦* |
| ಕೊಳ್ಳೇಗಾಲ | ೩೧ | ೦೪ | ೧,೧೧,೪೪೮ | ೦೪ | ೪೯೫೦೦ | ೦೨ | ೨,೦೦,೦೦೦ |
| ಚಾಮರಾಜನಗರ | ೧೪೨ | ೦೪ | ೩,೧೦,೯೪೦ | ೧೧ | ೩೦೮೮೦ | – | – |
| ಯಳಂದೂರು | ೦೯ | ೦೨ | ೫೨,೮೨೦ | ೦೧ | ೨೩೦೦ | – | – |
| ಒಟ್ಟು | ೨೩೬ | ೧೭ | ೫೭೯೭೮೮.೦೦ | ೧೬ | ೭೯೦೮೦ | ೦೩ | ೩೦೦,೦೦೦ |

*ಗೋಡೆ ಬಿದ್ದು ೧೦ ವರ್ಷದ ಬಾಲಕಿ ಸತ್ತಿದ್ದು, ೧ ಲಕ್ಷ ಪರಿಹಾರ ನೀಡಿದೆ. ಬೆಂಕಿಯಿಂದ ೫ ಆಡಿನ ಮರಿಗಳು ಸತ್ತಿದ್ದು, ೫,೦೦೦ ಪರಿಹಾರ ನೀಡಿದೆ.*

# ಅಭಿವೃದ್ಧಿ ಸಾಧ್ಯತೆಗಳು

ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.೨.೬೫೯ರಷ್ಟು ಭೂ ವಿಸ್ತೀರ್ಣ ಹೊಂದಿರುವ ಚಾಮರಾಜನಗರ ಜಿಲ್ಲೆಯು ೨೦೦೧ರ ಜನಗಣತಿಯಂತೆ ೯,೬೫,೪೬೨ ಜನಸಂಖ್ಯೆ ಹೊಂದಿದ್ದು, ರಾಜ್ಯದ ಜನಸಂಖ್ಯೆಯಲ್ಲಿ ಶೇ.೧.೮೨೬ರಷ್ಟಿದ್ದಿತು. ೨೦೦೧ರ ಜನಗಣತಿಯಂತೆ ಜಿಲ್ಲೆಯ ಜನತೆ ತಮ್ಮ ಜೀವನೋಪಾಯಕ್ಕಾಗಿ ಶೇ.೭೧.೧೮ ರಷ್ಟು ಮಂದಿ ವ್ಯವಸಾಯವನ್ನೇ ಅವಲಂಬಿಸಿದ್ದು, ವೃತ್ತಿ ಸ್ವರೂಪದಂತೆ ಜಿಲ್ಲೆಯಲ್ಲಿದ್ದ ವಸ್ತು ಸ್ಥಿತಿ ಕೆಳಗಿನಂತಿದೆ. ೪,೪೮,೩೬೯ ಮಂದಿ ಒಟ್ಟು ಕೆಲಸಗಾರರು ಹಾಗೂ ೫,೧೭,೦೯೩ ಮಂದಿ ಕೆಲಸಗಾರರಲ್ಲದವರಿದ್ದರು. ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರಿದ್ದು, ಇವರಲ್ಲಿ ೧,೧೬,೬೬೦ ಮಂದಿ ವ್ಯವಸಾಯಗಾರರು, ೧,೧೨,೨೮೯ ಮಂದಿ ಕೃಷಿ ಕಾರ್ಮಿಕರು, ೧೪,೨೮೧ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೯೩,೭೩೧ ಮಂದಿ ಇತರೆ ಕೆಲಸಗಾರರಿದ್ದರು. ೧,೧೧,೪೦೮ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರಿದ್ದು, ಇವರಲ್ಲಿ ೭,೬೫೨ ಮಂದಿ ವ್ಯವಸಾಯಗಾರರು, ೮೦,೬೮೯ ಮಂದಿ ಕೃಷಿ ಕಾರ್ಮಿಕರು, ೫,೩೧೩ ಮಂದಿ ಗೃಹ ಕೈಗಾರಿಕಾ ಕೆಲಸಗಾರರು ಹಾಗೂ ೧೭,೭೫೪ ಮಂದಿ ಇತರೆ ಕೆಲಸಗಾರರಿದ್ದರು. ಜಿಲ್ಲೆಯಲ್ಲಿ ೩,೩೬,೯೬೧ ಮಂದಿ ಮುಖ್ಯ ಕೆಲಸಗಾರರು, ೧,೧೧,೪೦೮ ಮಂದಿ ಸೀಮಾಂತ ಕೆಲಸಗಾರರು ಹಾಗೂ ೫,೧೭,೦೯೩ ಮಂದಿ ಕೆಲಸಗಾರರಲ್ಲದವರಿದ್ದರು.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ, ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ. ೭೦.೭೭ ರಷ್ಟು ಮಂದಿ ವ್ಯವಸಾಯ ಮತ್ತು ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ. ಅಲ್ಲದೆ ತುಂಡು ಭೂ-ಹಿಡುವಳಿಯಿಂದಾಗಿ ಕೃಷಿ ಲಾಭದಾಯಕ ಉದ್ಯೋಗವಾಗಿ ಉಳಿದಿಲ್ಲ. ಕಾರಣ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚು ಉದ್ಯೋಗ ಸೃಷ್ಟಿ, ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಮತ್ತು ಕಡಿಮೆ ಪ್ರಮಾಣದ ಮೂಲ ಸೌಕರ್ಯಗಳು ದೊರಕಿದರೂ ನಗರಪ್ರದೇಶದ ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳು ತೀವ್ರ ಬೆಳವಣಿಗೆ ಹೊಂದಬಹುದಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ೨೦೦೭-೦೮ರಲ್ಲಿ ೨೬,೦೮೬ ಮಂದಿ ನಿರುದ್ಯೋಗಿ ಉದ್ಯೋಗಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಇವರಲ್ಲಿ ೧೯,೨೪೯ ಮಂದಿ ಪುರುಷರು ಹಾಗೂ ೬,೮೩೭ ಮಂದಿ ಮಹಿಳೆಯರು ಸೇರಿದ್ದರು.

ಚಾಮರಾಜನಗರ ಜಿಲ್ಲೆಯಲ್ಲಿ ರಾಗಿ, ಭತ್ತ, ಕಬ್ಬು, ರೇಷ್ಮೆ, ಬಾಳೆ, ತೆಂಗು ಮುಂತಾದ ಪ್ರಮುಖ ಆಹಾರ ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಹೀಗಾಗಿ ಇಲ್ಲಿ ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಪುಲ ಅವಕಾಶವಿದೆ. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ೨,೭೫,೬೧೦ (ಶೇ.೪೮.೩೬ರಷ್ಟು) ಹೆಕ್ಟೇರು ಪ್ರದೇಶದಲ್ಲಿ ಅರಣ್ಯ ಪ್ರದೇಶವಿದ್ದು, ಹೆಚ್ಚು ಮೌಲ್ಯಾಧಾರಿತ ಮರಗಳು ಲಭ್ಯವಿದ್ದು, ಅರಣ್ಯಾಧಾರಿತ ಕೈಗಾರಿಕೆಗಳ ಅಭಿವೃದ್ಧಿಗೆ ವಿಪುಲ ಅವಕಾಶವಿದೆ. ಅಲ್ಲದೆ ನೆರೆಹೊರೆಯ ಜಿಲ್ಲೆಗಳಿಗೆ ಉರುವಲು ಕಟ್ಟಿಗೆಗಳನ್ನು ಪೂರೈಸಲು ಸಾಧ್ಯವಿದೆ. ೨೦೦೭ರ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು ೫,೭೦,೩೯೩ ಜಾನುವಾರುಗಳಿದ್ದು, ಚರ್ಮೋದ್ಯಮದ ಸ್ಥಾಪನೆಗೆ ವಿಪುಲ ಅವಕಾಶವಿದೆ. ಅಲ್ಲದೆ ಹೈನುಗಾರಿಕೆಗೂ ಹೇರಳ ಅವಕಾಶವಿದೆ. ಹಾಲು ಉತ್ಪಾದನೆ, ಶೇಖರಣೆ, ಸಂಸ್ಕರಣೆ, ಹಾಲಿನ ಉತ್ಪನ್ನಗಳಾದ, ತುಪ್ಪ, ಮೊಸರು, ಲಸ್ಸಿ, ಮಸಾಲಮಜ್ಜಿಗೆ, ಸುವಾಸಿತ ಹಾಲು, ಪೇಡಾ, ಐಸ್‌ಕ್ರೀಮ್, ಮೈಸೂರು ಪಾಕ್, ಬಾದಾಮ್ ಬರ್ಫಿ, ಗೋಡಂಬಿ ಬರ್ಫಿ ಮತ್ತಿತರ ಉತ್ಪನ್ನಗಳ ಉತ್ಪಾದನೆಗೆ ಅವಕಾಶವಿದೆ.

ಜಿಲ್ಲೆಯಲ್ಲಿ ೨೦೧೨ರ ಮಾರ್ಚಿ ಅಂತ್ಯಕ್ಕೆ, ಐದು ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ, ೨೧೯೬೬.೫೨ ಲಕ್ಷ ಬಂಡವಾಳ ತೊಡಗಿಸಲಾಗಿದೆ. ಇವು ೩೪೦ ಮಂದಿಗೆ ಉದ್ಯೋಗ ಒದಗಿಸಿವೆ. ಹಾಗೆಯೇ

೮,೬೭೭ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ₹ ೧೦,೨೮೫.೫೯ ಲಕ್ಷಗಳ ಬಂಡವಾಳ ತೊಡಗಿಸಲಾಗಿದ್ದು, ೩೬,೭೪೧ ಮಂದಿಗೆ ಉದ್ಯೋಗ ಸೃಷ್ಟಿಸಿವೆ. ಈ ಅಂಕಿಅಂಶಗಳು ಜಿಲ್ಲೆಯ ಕೈಗಾರಿಕೆಗಳ ಸ್ಥಾಪನೆಯಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಆದಕಾರಣ ಇಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರೆ ಹೆಚ್ಚು ಜನರಿಗೆ ಉದ್ಯೋಗ ದೊರಕಿಸಿಕೊಟ್ಟಂತಾಗುತ್ತದೆ. ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗೆ ವಿಪುಲ ಅವಕಾಶಗಳಿದ್ದು, ಅವುಗಳನ್ನು ಬೇಡಿಕೆ ಆಧಾರಿತ, ಸಂಪನ್ಮೂಲಾಧಾರಿತ ಹಾಗೂ ಕೌಶಲ್ಯಾಧಾರಿತ ಕೈಗಾರಿಕೆಗಳೆಂದು ವರ್ಗೀಕರಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಹೀಗಿವೆ.

೧. **ವ್ಯವಸಾಯಾಧಾರಿತ ಕೈಗಾರಿಕೆಗಳು:** ಅವಲಕ್ಕಿ, ಹಿಟ್ಟು ಬೀಸುವ ಗಿರಣಿ, ಬೇಕರಿ, ಎಣ್ಣೆ ಗಿರಣಿ, ಹಣ್ಣಿನರಸ, ನಾರುಉತ್ಪಾದನೆ, ರೇಷ್ಮೆ ನೂಲು ಸುತ್ತುವುದು, ಊಟದ ಎಲೆ ಹಚ್ಚುವುದು, ಬಿದರಿನ ಕೆಲಸ ಮುಂತಾದವು.

೨. **ಅರಣ್ಯಾಧಾರಿತ ಕೈಗಾರಿಕೆಗಳು:** ಎತ್ತಿನಗಾಡಿ, ಪ್ಯಾಕಿಂಗ್ ಪೆಟ್ಟಿಗೆ, ಕೇನ್ ಫರ್ನಿಚರ್, ಫ್ಲಷ್ ಬೋರ್ಡ್ ಮುಂತಾದವು.

೩. **ರಬ್ಬರ್ ಹಾಗೂ ಪ್ಲಾಸ್ಟಿಕ್ ಸಂಬಂಧಿಸಿದ ಕೈಗಾರಿಕೆಗಳು:** ಪಾದರಕ್ಷೆಗಳು, ಪಾಲಿಥಿನ್ ಚೀಲಗಳು, ಪಿ.ವಿ.ಸಿ ಪೈಪುಗಳು, ಪ್ಲಾಸ್ಟಿಕ್ ಉತ್ಪನ್ನಗಳು, ಟೈರ್ಸ್ ರೀ–ಟ್ರೇಡಿಂಗ್, ಇಂಜಕ್ಷನ್, ಬ್ಲೋ ಮೌಲ್ಡಿಂಗ್ ಮುಂತಾದವುಗಳು.

೪. **ರಾಸಾಯನಿಕ ಮತ್ತು ಸಂಬಂಧಿಸಿದ ಕೈಗಾರಿಕೆಗಳು:** ಅಗರಬತ್ತಿ, ಎಣ್ಣೆ, ಎಲೆಕ್ಟ್ರೋ ಪ್ಲೇಟಿಂಗ್, ಆರೋಮೆಟಿಕ್ ಕೆಮಿಕಲ್ಸ್, ಪೈಂಟ್ಸ್, ಪೇಪರ್ ಬ್ಯಾಗ್, ರಟ್ಟಿನ ಡಬ್ಬಗಳು ಮುಂತಾದವು.

೫. **ಸಿದ್ಧ ಉಡುಪುಗಳ ಕೈಗಾರಿಕೆಗಳು:** ರೆಡಿಮೇಡ್ ಗಾರ್ಮೆಂಟ್ಸ್, ನ್ಯಾಪ್‌ಕಿನ್, ಟವಲ್,ಪಂಚೆ,ಲುಂಗಿ ಮುಂತಾದವು.

೬. **ಇಂಜಿನಿಯರಿಂಗ್ ಕೈಗಾರಿಕೆಗಳು:** ಕೃಷಿ ಉಪಕರಣಗಳು, ಐರನ್ ಫ್ಯಾಬ್ರಿಕೇಷನ್, ಕಬ್ಬಿಣದ ಪೀಠೋಪರಣಗಳು ಮುಂತಾದವು.

೭. **ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳು:** ಪೋರ್ಟಬಲ್ ಜನರೇಟರ್‌ಸೆಟ್, ಎಲೆಕ್ಟ್ರಿಕಲ್ ಸಲಕರಣೆಗಳು, ಮುಂತಾದವು.

೮. **ಸೇವಾಕ್ಷೇತ್ರದ ಉದ್ದಿಮೆಗಳು:** ಡಾಬಾ, ಟ್ರಾಕ್ಟರ್ ರಿಪೇರಿ, ಪವರ್ ಟಿಲ್ಲರ್ಸ್, ವಿದ್ಯುತ್ ಉಪಕರಣಗಳು, ಮೋಟಾರು ವಾಹನಗಳ ಸರ್ವಿಸಿಂಗ್, ಟೆಲಿವಿಷನ್, ರೇಡಿಯೋ ರಿಪೇರಿ, ಟೆಕ್ಸ್‌ಟೈಲ್, ಪ್ರಿಂಟಿಂಗ್ ಮುಂತಾದವು.

೯. **ಪ್ರವಾಸೋದ್ಯಮ:** ಜಿಲ್ಲೆಯಲ್ಲಿ ಮಲೈಮಹದೇಶ್ವರನ ಬೆಟ್ಟ, ಬಿಳಿಗಿರಿರಂಗನಬೆಟ್ಟ, ಕೆ.ಗುಡಿ ಅಭಯಾರಣ್ಯ, ಭರಚುಕ್ಕಿ ಜಲಪಾತಗಳು, ಹೊಗೇನಕಲ್ ಜಲಪಾತ, ಬಂಡೀಪುರ ಅಭಯಾರಣ್ಯ, ಹಿಮವದ್ ಗೋಪಾಲಸ್ವಾಮಿಬೆಟ್ಟ, ಚಾಮರಾಜೇಶ್ವರ ದೇವಸ್ಥಾನ ಮೊದಲಾದ ಹಲವಾರು ಪ್ರವಾಸಿ ಕೇಂದ್ರಗಳಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು ಪ್ರವಾಸೋದ್ಯಮದ ಜೊತೆಗೆ ಹೋಟೆಲ್ ಮತ್ತು ವಸತಿಗೃಹಗಳ ಸ್ಥಾಪನೆಗೂ ಅವಕಾಶವಿದೆ.

೧೦. **ಮಾಹಿತಿ ತಂತ್ರಜ್ಞಾನ:** ಜಿಲ್ಲೆಯಲ್ಲಿ ಕಾರ್ಖಾನೆಗಳು, ಆಹಾರ ಸಂಸ್ಕರಣಾ ಘಟಕಗಳು, ಸರ್ಕಾರಿ ಕಛೇರಿಗಳು, ಬ್ಯಾಂಕುಗಳು, ಇವುಗಳಲ್ಲಿ ಮಾಹಿತಿ ತಂತ್ರಜ್ಞಾನದ ಅರಿವು ಹಾಗೂ ಉಪಯೋಗಗಳ ಬಗ್ಗೆ ಮನದಟ್ಟಾಗಿದೆ. ಅಲ್ಲದೇ, ನಾಲ್ಕು ಅಲೋಪತಿ ಆಸ್ಪತ್ರೆಗಳು, ೧೪ ಭಾರತೀಯ ವೈದ್ಯಪದ್ಧತಿ ಆಸ್ಪತ್ರೆಗಳು, ೧೬ ಖಾಸಗಿ ನರ್ಸಿಂಗ್ ಹೋಂಗಳು, ಒಂದು ಇಂಜಿನಿಯರಿಂಗ್ ಕಾಲೇಜ್, ಎರಡು ಪಾಲಿಟೆಕ್ನಿಕ್‌ಗಳು, ೧೫ ಪದವಿ ಕಾಲೇಜ್‌ಗಳು, ೫೨ ಪದವಿ ಪೂರ್ವ ಕಾಲೇಜ್‌ಗಳು, ೧೮೩ ಹೈಸ್ಕೂಲ್‌ಗಳು, ಇರುವುದರಿಂದ ಮಾಹಿತಿ ತಂತ್ರಜ್ಞಾನ ಅಳವಡಿಕೆಗೆ ವಿಪುಲ ಅವಕಾಶಗಳಿವೆ.

******